
ಕಾದಂಬರಿಕಾರ ಗಳಗನಾಥರು

ಶ್ರೀನಿವಾಸ ಹಾವನೂರ



ಭಾರತೀಯ
ಸಾಹಿತ್ಯ
ನಿರ್ಮಾಪಕರು





ಕಾದಂಬರಿಕಾರ ಗಳಗನಾಥರು

ಒಳಬದಿಯ ರಕ್ಷಾಪುಟಗಳಲ್ಲಿ ಕಾಣಿಸಿರುವ ಶಿಲ್ಪಕಲೆಯಲ್ಲಿ ಮೂವರು ಭವಿಷ್ಯವಾದಿಗಳು ಭಗವಾನ್ ಬುದ್ಧನ ತಾಯಿ ರಾಣಿ ಮಾಯಾಳ ಕನಸನ್ನು ರಾಜ ಶುದ್ಧೋದನನಿಗೆ ವಿವರಿಸುವ ದೃಶ್ಯವಿದೆ. ಅವುಗಳ ಕೆಳಗೆ ಆ ವಿವರಣೆಯನ್ನು ಬರೆದುಕೊಳ್ಳುತ್ತಿರುವ ಬರಹಗಾರ ಕುಳಿತಿದ್ದಾನೆ. ಬರವಣಿಗೆಯನ್ನು ಚಿತ್ರಿಸುವ ಮೊದಲ ಭಾರತೀಯ ಶಿಲ್ಪ ಬಹುಶಃ ಇದೇ ಆಗಿರಬಹುದು.

ನಾಗಾರ್ಜುನ ಬೆಟ್ಟದ ಶಿಲ್ಪಗಳು. ಕ್ರಿ.ಶ. ಎರಡನೆಯ ಶತಮಾನದವು.
ಕೃಪೆ: ರಾಷ್ಟ್ರೀಯ ವಸ್ತು ಸಂಗ್ರಹಾಲಯ, ಹೊಸದೆಹಲಿ.

ಭಾರತೀಯ ಸಾಹಿತ್ಯ ನಿರ್ಮಾಪಕರು

ಕಾದಂಬರಿಕಾರ ಗಳಗನಾಥರು

ಲೇಖಕರು
ಶ್ರೀನಿವಾಸ ಹಾವನೂರ

ಸಾಹಿತ್ಯ ಅಕಾದೆಮಿ

Kadambarikara Galaganatharu - A monograph in Kannada by Srinivasa Havanur, Sahitya Akademi, 2000.

Rs. 25.

ISBN: 81-260-0680-3

ಮೊದಲ ಮುದ್ರಣ: ೨೦೦೦

ಸಾಹಿತ್ಯ ಅಕಾದೆಮಿ

ರವೀಂದ್ರ ಭವನ, ೩೫, ಫಿರೋಜ್ ಶಾ ರಸ್ತೆ, ನವದೆಹಲಿ - ೧೧೦ ೦೦೧

'ಸ್ವಾತಿ' ಮಂದಿರ್ ಮಾರ್ಗ್, ನವದೆಹಲಿ - ೧೧೦ ೦೦೧

ಸೆಂಟ್ರಲ್ ಕಾಲೇಜ್ ಆವರಣ, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು - ೫೬೦ ೦೦೧

ಗುಣಬಿಲ್ಡಿಂಗ್ಸ್, ಎರಡನೆಯ ಮಹಡಿ, ೩೦೪ - ೩೦೫, ಅಣ್ಣಾಸಾಲೈ,
ಚೆನ್ನೈ - ೬೦೦ ೦೦೮.

ಜೀವನ್‌ತಾರಾ ಭವನ್, ೨೩ಎ/೪೪ ಎಕ್ಸ್, ಡೈಮಂಡ್ ಹಾರ್ಬರ್ ರಸ್ತೆ,
ಕಲ್ಕತ್ತಾ - ೭೦೦ ೦೫೩

೧೭೨, ಮುಂಬೈ ಮರಾಠಿ ಗ್ರಂಥ ಸಂಗ್ರಹಾಲಯ ಮಾರ್ಗ್, ದಾದರ್,
ಮುಂಬೈ - ೪೦೦ ೦೧೪

ಬೆಲೆ: ಇಪ್ಪತ್ತೈದು ರೂಪಾಯಿಗಳು

ಅಕ್ಷರ ಜೋಡಣೆ: ಜಿ.ಎಸ್. ಎಂಟರ್ ಪ್ರೈಸಸ್, ಬೆಂಗಳೂರು - 27

ಮುದ್ರಣ: ಲಿಪಿ ಮುದ್ರಣ, ಬೆಂಗಳೂರು - 4

ಪ್ರಸ್ತಾವನೆ

ಕನ್ನಡ ಕಾದಂಬರಿ ಯುಗದ ಪ್ರವರ್ತಕರೆನಿಸಿದ ಗಳಗನಾಥರ ಬಗ್ಗೆ ಕನ್ನಡದಲ್ಲಿ ಅನೇಕ ಗ್ರಂಥಗಳು ಪ್ರಕಟವಾಗಿವೆ. ಅವುಗಳಲ್ಲಿ 'ಗಳಗನಾಥ ಮಾಸ್ತರರು' ಎಂಬ ಶೀರ್ಷಿಕೆಯುಳ್ಳ ಪೂರ್ಣ ಸ್ವರೂಪದ ನನ್ನ ಕೃತಿ ಎರಡನೆಯದು. ಡಾ. ಕೃಷ್ಣಮೂರ್ತಿ ಕಿತ್ತೂರರು ಗಳಗನಾಥರ ಕಾದಂಬರಿಗಳನ್ನು ಕುರಿತು ಉದ್ಗ್ರಂಥವನ್ನು ಬರೆದಿದ್ದಾರೆ. ಪ್ರಕೃತ ಈ ಪುಸ್ತಕದ ವಿಷಯ ಸಾಮಗ್ರಿಯನ್ನು ಇವೆರಡು ಗ್ರಂಥಗಳಿಂದ ತೆಗೆದುಕೊಂಡಿದೆ.

ಇದು ಮುಂದೆ ಭಾಷಾಂತರಗೊಂಡು, ಭಾರತದ ವಿವಿಧ ಭಾಷಿಕರನ್ನು ತಲುಪಲಿದೆಯಾದ್ದರಿಂದ, ಅವರನ್ನು ಗಮನದಲ್ಲಿರಿಸಿಕೊಂಡು ವಿಷಯ ಮಂಡನೆ ಮಾಡಲಾಗಿದೆ. ಹಾಗಾಗಿ ಇದರಲ್ಲಿ ಗಳಗನಾಥರ ಕೃತಿಗಳ ಸೂಕ್ಷ್ಮ ವಿಮರ್ಶೆಗೆ ತೊಡಗಿಲ್ಲ.

ಗಳಗನಾಥರನ್ನು ಕುರಿತು ಬರೆಯುವುದು ಒಂದರ್ಥದಲ್ಲಿ ಸುಲಭ-ಸರಳವಾದದ್ದು. ಏಕೆಂದರೆ ಅವರು ತಮ್ಮ ಪ್ರತಿಯೊಂದು ಗ್ರಂಥದ ಪೀಠಿಕೆಯಲ್ಲಿ ಅದರ ಆಕರವನ್ನೂ, ಕೃತಿ ರಚನೆಯ ತಮ್ಮ ಉದ್ದೇಶವನ್ನೂ, ಜೊತೆಗೆ ಸ್ವ-ವಿಷಯವನ್ನೂ ಬಿಚ್ಚು ಮಾತಿನಲ್ಲಿ ಹೇಳಿರುತ್ತಾರೆ. ಗಳಗನಾಥರನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಅವು ನೇರ ಸಾಧನಗಳಾದ್ದರಿಂದ, ಅವುಗಳಿಂದ ಧಾರಾಳವಾಗಿ ಉದ್ಧರಿಸಿದ್ದೇನೆ. ಈ ಉದ್ಧೃತ ಭಾಗಗಳಿಂದ, ಇದರಲ್ಲಿ ವ್ಯಕ್ತವಾದ ಅಭಿಪ್ರಾಯಗಳ ಪ್ರಾಮಾಣ್ಯತೆಯನ್ನು ಕಾಯ್ದುಕೊಂಡಂತಾಗಿದೆ. ಇಲ್ಲಿ, ಗಳಗನಾಥರ ಅಂದಿನ ಭಾಷಾ ಶೈಲಿಗೂ, ಈಗಿನ ನಮ್ಮ ಶಿಷ್ಟ ಕನ್ನಡ ಬರವಣಿಗೆಗೂ ಅಂತರವಿರುವುದನ್ನು ಗಮನಿಸಬೇಕು. ಉದಾ. ಮಾಡುವದು - ಮಾಡುವುದು.

ನಮ್ಮ ಗಳಗನಾಥರನ್ನು ಅಖಿಲ ಭಾರತ ಮಟ್ಟದಲ್ಲಿ ಪ್ರಚಾರಗೊಳಿಸುತ್ತಿರುವ ಕೇಂದ್ರ ಸಾಹಿತ್ಯ ಅಕಾದೆಮಿಗೆ ಅಭಿವಂದಿಸುವೆ. ಗಳಗನಾಥರ ಎಷ್ಟೋ ಗ್ರಂಥಗಳು, ಪ್ರತಿಷ್ಠಿತ ಗ್ರಂಥಾಲಯಗಳಲ್ಲಿಯೂ ಸಿಕ್ಕದಿದ್ದಾಗ, ಅವನ್ನು ಒದಗಿಸಿದ, ಗಳಗನಾಥರ ಊರಿನವರೇ ಆದ, ತೋಟಗೇರಿ ಚಂದ್ರಶೇಖರರ ನೆರವನ್ನು ನೆನೆಯುವೆ.

ಪುಣೆ, ಏಪ್ರಿಲ್ 1995

ಶ್ರೀನಿವಾಸ ಹಾವನೂರ

ಪರಿವಿಡಿ

ವಿಭಾಗ ಒಂದು : ಜೀವನ ಚಿತ್ರಣ

1. ಸಮಕಾಲೀನ ಸ್ಥಿತಿ 1
2. ಸಾಹಿತ್ಯಿಕ ಪ್ರೇರಣೆ 3
3. ಶಿಕ್ಷಕವೃತ್ತಿ - ಪತ್ರಿಕೋದ್ಯಮ 7
4. ಗಳಗನಾಥ ಸುರಸ ಗ್ರಂಥಮಾಲೆ 16
5. ಸಂಚಾರಿ ಮಾರಾಟಗಾರ 24
6. ಕೊನೆಯ ಘಟ್ಟದ ಕೃತಿಗಳು 33
7. ಸ್ವಭಾವ ಪರಿಚಯ 40

ವಿಭಾಗ ಎರಡು : ಕೃತಿ ಸಮೀಕ್ಷೆ

1. ಶೈಕ್ಷಣಿಕ, ಸಾಮಾಜಿಕ ಬರಹಗಳು 43
2. ಧಾರ್ಮಿಕ ಕೃತಿಗಳು 45
3. ಕಾದಂಬರಿಗಳು 48
   - ಅ. ಹಿನ್ನೆಲೆ 49
   - ಆ. ಮೌರ್ಯರ ಕಥಾನಕಗಳು 53
   - ಇ. ಕರ್ನಾಟಕ ಚರಿತ್ರೆಯ ಕಾದಂಬರಿಗಳು 55
   - ಈ. ರಜಪೂತರ ಹಿನ್ನೆಲೆಯ ಕಾದಂಬರಿಗಳು 58
   - ಉ. ಮರಾಠರ ಚರಿತ್ರೆಯ ಕಾದಂಬರಿಗಳು 61
   - ಊ. 'ಮಾಧವ ಕರುಣಾವಿಲಾಸ' 65
4. ಸಮಾರೋಪ 75

ವಿಭಾಗ ಮೂರು : ಅನುಬಂಧಗಳು

1. 'ಅಂತಕನ ಕೋಲಾಹಲ' 78
2. ಗಳಗನಾಥರ ಕೃತಿಸಂಪದ 85

ವಿಭಾಗ ಒಂದು : ಜೀವನ ಚಿತ್ರಣ

೧. ಸಮಕಾಲೀನ ಸ್ಥಿತಿ

ಕ್ರಿ.ಶ. ೧೮೬೯ರಲ್ಲಿ ಗಳಗನಾಥರು ಜನಿಸಿದರು. ೧೮೯೮ರಿಂದ ಅವರು ಕಾದಂಬರಿ ರಚನೆಗೆ ತೊಡಗಿದರು. ಇತ್ತ ಹೊಸಗನ್ನಡದಲ್ಲಿ ಗ್ರಂಥ ರಚನೆ ಆರಂಭವಾದದ್ದು ೧೮೨೦ನೆಯ ದಶಕದಿಂದ. ಅಂದಿನಿಂದ ಮತ್ತು ಗಳಗನಾಥರು ಲೇಖನಿಯನ್ನೆತ್ತಿಕೊಂಡ ಕಾಲದ ವರೆಗಿನ ಕನ್ನಡ ಸಾಹಿತ್ಯದಲ್ಲಿ ಸೃಜನಾತ್ಮಕವೆನ್ನಬಹುದಾದ ಕೃತಿಗಳು ಕೆಲವೇ ಇದ್ದವು. ಶಬ್ದಕೋಶ, ವ್ಯಾಕರಣ ಮುಂತಾದ ಭಾಷಾ ಕಲಿಕೆಯ ಸಾಧನಗಳು, ಕ್ರೈಸ್ತಮತ ಪ್ರಸಾರದ ಪುಸ್ತಕಗಳು, ಕೆಲವು ಪಾಶ್ಚಿಮಾತ್ಯ ಕೃತಿಗಳ ಅನುವಾದಗಳು, ಹಳೆಯ ಕನ್ನಡ ಹಾಗೂ ಸಂಸ್ಕೃತ ಕೃತಿಗಳ ಮುದ್ರಣಗಳು - ಇವು ಆಗಿನ ಸಾಹಿತ್ಯ ರಚನೆಯ ಲಕ್ಷಣಗಳಾಗಿದ್ದವು. ಹೊಸಗನ್ನಡ ವಾಙ್ಮಯದ ಈ ಕಂದನನ್ನು, ಒಂದೆಡೆ ಮಿಶನರಿಗಳು ಇನ್ನೊಂದೆಡೆ ಬ್ರಿಟಿಶ್ ಅಧಿಕಾರಿಗಳು ಕೈಹಿಡಿದು ನಡೆಸಿದ ಕಾಲವದು. ತನ್ನ ಕಾಲ ಮೇಲೆ ನಿಂತು ನಡೆಯುವಂತಾದ ಸ್ಥಿತಿಯು ೧೮೮೦ನೆಯ ದಶಕದಿಂದ ಆರಂಭವಾಯಿತು. ಆ ವೇಳೆಗೆ ಪಾಶ್ಚಿಮಾತ್ಯ ಪದ್ಧತಿಯ ಶಿಕ್ಷಣ ಕ್ರಮವು ನಾಡಿನಲ್ಲಿ ನೆಲೆಗೊಂಡಿತ್ತು. ಇಂಗ್ಲೀಷ್ ಸಾಹಿತ್ಯವನ್ನು ಅಭ್ಯಸಿಸಿದವರ ಸಂಖ್ಯೆ ಹೆಚ್ಚತೊಡಗಿ, ಸಾಹಿತ್ಯವಾಚನ, ರಚನೆಗಳಲ್ಲಿ ಅವರು ಆಸಕ್ತಿಯನ್ನು ತೋರಿಸುವವರಾದರು. ಈ ಹೊಸ ಬಗೆಯ ಶಿಕ್ಷಣದ ಫಲವಾಗಿ, ತಮ್ಮ ಗಮನಕ್ಕೆ ಬಂದ ಲೌಕಿಕ ವಿಷಯಗಳನ್ನು, ಹೊಳೆದ ವಿಚಾರಗಳನ್ನು ಗದ್ಯದಲ್ಲಿ ಮಂಡಿಸುವ ಆತ್ಮವಿಶ್ವಾಸ ಮೂಡಿತು.

ಆಗಿನ ಎಂದರೆ ೧೯ನೆಯ ಶತಮಾನದ ಉತ್ತರಾರ್ಧ ಕಾಲದ ಕನ್ನಡ ಸಾಹಿತ್ಯ ಸಮ್ಮಿಶ್ರ ಸ್ವರೂಪದಾಗಿತ್ತು. ಹಿಂದಿನ ಕಾಲ್ದದ ಕಂದ, ವೃತ್ತ, ಷಟ್ಪದಿಗಳು, ಯಕ್ಷಗಾನ ಕೃತಿಗಳು ಒಂದೆಡೆ ಇದ್ದರೆ, ಸಂಸ್ಕೃತ, ಇಂಗ್ಲೀಷ್‌ನಿಂದ ಅನುವಾದಗೊಂಡ ನಾಟಕಗಳಿದ್ದವು. ಪೌರಾಣಿಕ ವಿಷಯಗಳ ಜೊತೆಗೆ ಪ್ರಪಂಚ ಪರಿಚಯದ, ನೀತಿಬೋಧಕ ವಿಷಯಗಳೂ ಆಯ್ಕೆಯಾದವು. ಆಸ್ಥಾನಿಕರು, ಪರಂಪರಾಗತ ಪಂಡಿತರುಗಳ ಜೊತೆಗೆ ಶಿಕ್ಷಕರು, ಪದವೀಧರರು, ಸರಕಾರೀ ಅಧಿಕಾರಿಗಳು ಲೆಕ್ಕಣಿಕೆಯನ್ನೆತ್ತಿಕೊಂಡದ್ದರಿಂದ ಸಮ್ಮಿಶ್ರ ಸ್ವರೂಪವು ಅನಿವಾರ್ಯವಾಯಿತು. ಗಣನೀಯ ಸಂಗತಿಯೆಂದರೆ ಇಂಗ್ಲೀಷ್ ಮಾತ್ರವಲ್ಲದೆ ಬಂಗಾಲಿ, ತೆಲುಗು ಮತ್ತು ಮರಾಠಿ ಭಾಷೆಗಳಿಂದಲೂ ಗ್ರಂಥಗಳನ್ನು, ವಿಶೇಷತಃ ಕಾದಂಬರಿಗಳನ್ನು

ಅನುವಾದಿಸಬೇಕೆನ್ನುವ ಮನೋವೃತ್ತಿ ತಲೆದೋರಿದ್ದು. ಈ ಗ್ರಂಥೋದ್ಯಮದಲ್ಲಿ ಯಾವೊಂದು ಗುಣಮಟ್ಟ ಅಥವಾ ಕ್ರಮಬದ್ಧತೆ ಇರದೇ ಕೈಗೆ ದೊರೆತದ್ದನ್ನು ಅನುವಾದಿಸಿ ಪ್ರಕಟಿಸುವಂತಾಯ್ತು.

ಆಗಿನ ಸಾಹಿತ್ಯ ಕೃಷಿಗೆ ಮತ್ತು ಅದರ ಪ್ರಸಾರಕ್ಕೆ ಪತ್ರಿಕೆಗಳು ವಿಶೇಷವಾಗಿ ಚಾಲನೆ ಇತ್ತವು. ಪತ್ರಿಕೆಗಳು ಜನತೆಗೆ ಪ್ರಪಂಚ ಪರಿಚಯವನ್ನು ಮಾಡಿಕೊಟ್ಟು ಲೋಕ ಶಿಕ್ಷಣವನ್ನು ನೀಡುವತ್ತ ಗಮನವನ್ನಿತ್ತವು. ಜನತೆ ಅಜ್ಞಾನದಿಂದ ಮುಕ್ತವಾಗಬೇಕು. ಹೊಸ ವಿಚಾರಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅದರಿಂದ ಅಜ್ಞಾನ ಹಾಗೂ ವೈವಾಹಿಕ ವಿಷಮತೆಗಳಿಂದ ಬಳಲುವ ಸ್ತ್ರೀಯರ ಬದುಕನ್ನು ಸುಧಾರಿಸಬೇಕೆನ್ನುವ ಉದ್ದೇಶವೂ ಕೆಲವು ಲೇಖಕರಲ್ಲಿತ್ತು. ಆದರೆ ಕನ್ನಡ ಮಾತನಾಡುವವರು ನಾಲ್ಕು ಬೇರೆ ಬೇರೆ ಆಡಳಿತಗಳಲ್ಲಿ ಹಂಚಿಹೋಗಿದ್ದರು. ಅವೆಂದರೆ ಮೈಸೂರು ಮತ್ತು ಹೈದರಾಬಾದ ಸಂಸ್ಥಾನಗಳು; ಬ್ರಿಟಿಷರ ನೇರ ಆಳ್ವಿಕೆಯ ಮುಂಬೈ ಹಾಗೂ ಮದ್ರಾಸ್ ಪ್ರಾಂತಗಳು. ವಿಶೇಷತಃ ತುಂಗಭದ್ರಾ ನದಿಯ ಮೇಲಿನವರು ಉತ್ತರ ಕರ್ನಾಟಕದವರೆನಿಸಿಕೊಂಡು ಭಾವನಾತ್ಮಕವಾಗಿ ಬೇರೆಯೇ ಆಗಿದ್ದರು. ಇದರ ಪರಿಣಾಮವೆಂದರೆ ಮೈಸೂರು ಭಾಗದಲ್ಲಿ ರಚಿತವಾದ ಸಾಹಿತ್ಯವು ಉತ್ತರ ಕರ್ನಾಟಕದವರಿಗೆ; ಅದರಂತೆ ಅಲ್ಲಿ ಸೃಷ್ಟಿಯಾದ ಸಾಹಿತ್ಯವು ತುಂಗಭದ್ರೆಯ ಕೆಳಗಿನವರಿಗೆ ಮಾನಸಿಕವಾಗಿ ಸಹ ದೂರವೇ ಉಳಿಯುವ ಪರಿಸ್ಥಿತಿ ನಿರ್ಮಾಣವಾಗಿದ್ದಿತು. ಇಷ್ಟೇ ಅಲ್ಲ, ಮೈಸೂರ ಪ್ರದೇಶದಲ್ಲಿ ಅನುವಾದಗೊಂಡ ಕೃತಿಗಳನ್ನು ಇಲ್ಲಿಯೂ ಅನುವಾದಿಸಿದ್ದ ಉದಾಹರಣೆಗಳೂ ಇವೆ.

ಗಳಗನಾಥರು ಬಾಳಿ ಬದುಕಿದ್ದ ಮುಂಬೈ ಕರ್ನಾಟಕದಲ್ಲಿ ಇನ್ನೊಂದು ಆಚರಣೆ ಇದ್ದಿತು. ಅದುವೆ ಮಿತಿಮೀರಿದ ಮರಾಠೀ ಪ್ರಭಾವ. ಪೇಶ್ವೆಯರ ಕಾಲದಲ್ಲಿ ಅನೇಕ ಮರಾಠೀ ಮನೆತನಗಳು ಕರ್ನಾಟಕದ ಮೂಲೆಮೂಲೆಗಳಲ್ಲಿ ನೆಲೆಯೂರಿದ್ದವು. ಸ್ಥಾನಾಂತರ ಮಾತ್ರವಲ್ಲ, ಮುಂದೆ ಬ್ರಿಟಿಷರ ಆಡಳಿತ ಕಾಲದಲ್ಲಿ ವಿಶೇಷ ವರ್ಚಸ್ಸನ್ನು ಈ ಮರಾಠಿಗರು ಬೀರಿದ್ದರು. ರಾಜಕೀಯ ಕಾರಣದಿಂದ ಮೇಲಣ ಸ್ಥಾನದಲ್ಲಿದ್ದವರಾದ್ದರಿಂದ ಭಾಷೆ, ಸಾಮಾಜಿಕ ನಡವಳಿಕೆ, ಶಿಕ್ಷಣರಂಗ, ನಿತ್ಯದ ವ್ಯವಹಾರ ಎಲ್ಲದರಲ್ಲಿ ಮರಾಠಿಗರನ್ನೇ ಅನುಸರಿಸುವ ಮನೋಭಾವ, ಕನ್ನಡ ಜನತೆಯಲ್ಲಿ ತಲೆದೋರಿತು. ಮಾತ್ರವಲ್ಲದೆ, ಕನ್ನಡದ ಬಗ್ಗೆ ಅಸಡ್ಡೆ ಮೂಡುವುದಕ್ಕೂ ಕಾರಣವಾಯಿತು. ಎಷ್ಟರ ಮಟ್ಟಿಗೆ ಎಂದರೆ ಬ್ರಿಟಿಷರು ಆಡಳಿತವನ್ನು ವಹಿಸಿದ ಹೊಸತರಲ್ಲಿ ಮರಾಠೀ ಶಾಲೆಗಳನ್ನು ತೆರೆಯಬೇಕೆಂದು ಜನರೇ ಕೇಳುವ ಪರಿಸ್ಥಿತಿ ಉಂಟಾಗಿತ್ತು. ಧಾರವಾಡ, ಹುಬ್ಬಳ್ಳಿಗಳಂತಹ ಅಪ್ಪಟ ಕನ್ನಡ ಊರುಗಳಲ್ಲಿ, ಸ್ಥಳೀಯ ಸುದ್ದಿಗಳನ್ನು ಪ್ರಕಟಿಸಲು, ಪತ್ರಿಕೆಗಳು ಮರಾಠಿಯಲ್ಲಿ ಹೊರಟವಲ್ಲದೆ, ಕನ್ನಡದಲ್ಲಿ ಅಲ್ಲ. ಹೀಗಿತ್ತು ಆಗಿನ ಸ್ಥಿತಿ.

೨. ಸಾಹಿತ್ಯಿಕ ಪ್ರೇರಣೆ

ಗಳಗನಾಥರ ನಿಜವಾದ ಹೆಸರು ವೆಂಕಟೇಶ ತಿರಕೋ ಕುಲಕರ್ಣಿ. ತಮ್ಮ ಮನೆತನವಿದ್ದ ಊರಿನ ಹೆಸರನ್ನೇ ಕರ್ತೃನಾಮವಾಗಿ ಇಟ್ಟುಕೊಂಡರು. ತಮ್ಮ ಬಾಲ್ಯವನ್ನು ಅಲ್ಲಿಯೆ ಕಳೆದರು. ತಮ್ಮ ವಿದ್ಯಾಭ್ಯಾಸದ ಬಗ್ಗೆ ಗಳಗನಾಥರು ಒಂದೆಡೆ ಹೀಗೆ ಹೇಳಿದ್ದಾರೆ: ''ನಾನು ಕೇವಲ ಗಾವಿಲನೆಂತಲೇ ಹೇಳಬಹುದು. ಯಾಕೆಂದರೆ ನಾನು ಹುಟ್ಟಿದ [೫ ಜನೆವರಿ ೧೮೬೯] ಊರು ಒಂದು ಹಳ್ಳಿಯು. ನಾನು ಕಲಿತ ನಾಲ್ಕೂ ಪಾಠಶಾಲೆಗಳು ಒಂದಕ್ಕಿಂತ ಒಂದು ಸಣ್ಣವಾದ ಹಳ್ಳಿಯವೇ. ನನಗೆ ದೊರೆತ ಶಿಕ್ಷಣವೆಂದರೆ ಧಾರವಾಡದ ಕನ್ನಡ ಟ್ರೇನಿಂಗ್ ಕಾಲೇಜದ ಮೂರು ವರ್ಷದ ಕೌದಿಯ ಚಂದದ ಹಂಡಬಂಡ ಶಿಕ್ಷಣವು.''

''[ಕನ್ನಡ] ಭಾಷೆಯ ಜ್ಞಾನವು ಕೇವಲ ಜನ್ಮಭಾಷೆಯೆಂಬ ಪ್ರಧಾನ ಕಾರಣದಿಂದ ವಿಸ್ತ್ರತವಾಗಬಹುದಷ್ಟರ ಮಟ್ಟಿಗೆ ಬೆಳವಣಿಗೆ ಹೊಂದಿದ್ದು. ಕೊಂಕಣಸ್ಥರ ಸಹವಾಸದಿಂದ ತಿಳಿಯಬಹುದಾದಷ್ಟು ಮರಾಠೀ ಭಾಷೆಯು ನನಗೆ ತಿಳಿಯುತ್ತಿರುವದು. ಇಂಗ್ಲೀಷ್ ಭಾಷೆಯ ಮೂಲಾಕ್ಷರಗಳನ್ನು ಸಾಲಾಗಿ ನನಗೆ ಬರೆಯಲಿಕ್ಕೆ ಬರುವುದಿಲ್ಲ. ಒಟ್ಟಿಗೆ ನಾನು ಯಾವ ಭಾಷೆಯ ಅಥವಾ ಶಾಸ್ತ್ರದ ಅಭ್ಯಾಸವನ್ನು ಸಂಕಲ್ಪಪೂರ್ವಕವಾಗಿ ಗುರುಮುಖದಿಂದ ಮಾಡಿದವನಲ್ಲವಾದ್ದರಿಂದ ನನ್ನಲ್ಲಿ ಯಾವ ಪಾಂಡಿತ್ಯವೂ ಇರುವುದಿಲ್ಲ. ತೆರಪಿಲ್ಲದೆ ನನ್ನಲ್ಲಿ ವಾಸಮಾಡಿಕೊಂಡಿರುವುದೆಂದರೆ ಪಾಮರತ್ವವು.''

ತಮಗೆ ದೊರೆತ ಶಿಕ್ಷಣ ಹೆಚ್ಚೆಂದರೆ ಪ್ರಾಥಮಿಕ ಶಿಕ್ಷಕರ ಟ್ರೇನಿಂಗ್ ಕಾಲೇಜಿನದು ಎಂದು ಗಳಗನಾಥರು ಹೇಳಿರುವರಷ್ಟೆ. ಆದರೆ ಆಗಿನ ಕಾಲಕ್ಕೆ ಕನ್ನಡದ ಮಟ್ಟಿಗೆ ಅದುವೆ ಶ್ರೇಷ್ಠ ಶಿಕ್ಷಣ ಮಂದಿರವೆನಿಸಿದ್ದಿತು. ೧೮೮೦ನೆಯ ದಶಕದ ಮುಂಬಯಿ ಕರ್ನಾಟಕದಲ್ಲಿ ಕಾಲೇಜ ಮಟ್ಟದ ಅಥವಾ 'ಪಂಡಿತ' ಪರೀಕ್ಷೆಯ ಮಟ್ಟದ ಬೇರಾವ ವಿದ್ಯಾಸಂಸ್ಥೆ ಇರಲಿಲ್ಲ. ಹೆಚ್ಚಿನ ವಿದ್ಯಾಭ್ಯಾಸ ಮಾಡಬೇಕೆನ್ನುವವರು ಪುಣೆ - ಮುಂಬಯಿಗಳಿಗೆ ಹೋಗುತ್ತಿದ್ದರು. ಹಾಗೆ ಅಲ್ಲಿ ಹೋಗಿ ಬಂದರೆಂದರೆ ಮರಾಠೀ ದೀಕ್ಷೆಯನ್ನೇ ಪಡೆದುಬಂದಂತೆ.

ಇಂಥ ಸ್ಥಿತಿಯಲ್ಲಿ ಕನ್ನಡ ಸಸಿಯು ಚಿಗುರಿದ್ದುದು ಟ್ರೇನಿಂಗ್ ಕಾಲೇಜಿನ ಆವರಣದಲ್ಲಿ ಮಾತ್ರ. ಅಲ್ಲಿಯ ಶಿಕ್ಷಕರು ಕನ್ನಡ ನಿಷ್ಠೆಯನ್ನು ಅವಿಚ್ಛಿನ್ನವಾಗಿ ಕಾಯ್ದುಕೊಂಡು ಬಂದಿದ್ದರು. ಆ ಟ್ರೇನಿಂಗ್ ಕಾಲೇಜಿನ ನಂದಾದೀಪದಿಂದ ಕಿರುಸೊಡರನ್ನು ಹೊತ್ತಿಸಿಕೊಂಡು ಹೋದ (trained) ಶಿಕ್ಷಕರು ಕನ್ನಡದ ಬೆಳಕನ್ನು ಹಳ್ಳಿ ಹಳ್ಳಿಗೆ ಕೊಂಡೊಯ್ದರು. ಟ್ರೇನಿಂಗ್ ಕಾಲೇಜಿನ ಕನ್ನಡ ವಾತಾವರಣ ಎಷ್ಟೊಂದು ಪ್ರಭಾವಶಾಲಿಯಾಗಿತ್ತೆಂದರೆ, ಚಿಂತಾಮಣಿ-ಪೇಟಕರ ಮೊದಲಾದ ಕೆಲವು ಶೈಕ್ಷಣಿಕ ಅಧಿಕಾರಿಗಳ ಮನೆಮಾತು ಮರಾಠಿ ಆಗಿದ್ದರೂ, ಕನ್ನಡ ಭಾಷೆ ಮತ್ತು ಶಿಕ್ಷಣ ವಿಚಾರಗಳಲ್ಲಿ ಅವರೂ ವಿಧಾಯಕವಾಗಿ ಪಾಲ್ಗೊಳ್ಳುವಂತಾಯಿತು.

ಹೀಗೆ ಕನ್ನಡಾಭಿಮಾನದ ದೀಕ್ಷಾಮಂದಿರವಾಗಿದ್ದ ಈ ಟ್ರೇನಿಂಗ್ ಕಾಲೇಜನ್ನು ಗಳಗನಾಥರು ೧೮೮೬ ರಲ್ಲಿ ಪ್ರವೇಶಿಸಿದರು. ಅವರಿಗೆ ಕನ್ನಡ ಭಾಷೆ-ಸಾಹಿತ್ಯಗಳನ್ನು ಕಲಿಸಿದವರು ಧೋಂಡೋ ನರಸಿಂಹ ಮುಳಬಾಗಲರು ಮತ್ತು ಇತಿಹಾಸ ವಿಷಯದ ಅಧ್ಯಾಪಕರಾಗಿದ್ದ ರಾ.ಹ. ದೇಶಪಾಂಡೆಯವರು. ಗಳಗನಾಥರ ಲೇಖನಕಲೆಗೆ ನೀರೆರೆದವರು. ಇವರಿಬ್ಬರಿಗಿಂತ ಹೆಚ್ಚು ಪ್ರಭಾವವನ್ನು ಬೀರಿದವರು, ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ರಾವಜೀ ಬಾಳಾಜಿ ಕರಂದೀಕರರು.

ಮೂರು ವರ್ಷಗಳ ಟ್ರೇನಿಂಗ್ ಕಾಲೇಜಿನ ಶಿಕ್ಷಣ ಮುಗಿಸಿದ ಮೇಲೆ ಅವರ ಮಾಸ್ತರಿಕೆಯು ಧಾರವಾಡ ಜಿಲ್ಲೆಯ ಶಿರಗುಪ್ಪಿ ಪ್ರಾಥಮಿಕ ಶಾಲೆಯಲ್ಲಿ ಆರಂಭವಾಯಿತು. ಮುಂದಿನ ಹತ್ತು ವರ್ಷಗಳಲ್ಲಿ ಹಲವಾರು ಗ್ರಾಮಗಳಲ್ಲಿ ವರ್ಗಾವಣೆಯಾದರೂ, ಜಿಲ್ಲಾಸ್ಥಳವಾದ ಧಾರವಾಡಕ್ಕೆ ಮೇಲಿಂದ ಮೇಲೆ ಹೋಗುತ್ತಿದ್ದರು. ಅವರಿಗೆ ಅಲ್ಲಿ ವಿಶೇಷ ಆಕರ್ಷಣೆ ಎಂದರೆ ಕರ್ನಾಟಕ ವಿದ್ಯಾವರ್ಧಕ ಸಂಘ (ಸ್ಥಾಪನೆ: ೧೮೯೦).

ಹೊಸ ಕಾಲದ ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ರೂಪಿಸುವ ಯಾವುದೇ ಸಂದರ್ಭವಿರಲಿ, ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಹೆಸರಿಸದೆ ಮುಂದುವರಿಯುವಂತಿಲ್ಲ. ಸಂಘವನ್ನು ಸ್ಥಾಪಿಸುವ ವಿಚಾರವು ರಾ.ಹ. ದೇಶಪಾಂಡೆ ಇವರ ಮನದಲ್ಲಿ ಮೊದಲು ಮೂಡಿತು. ಅದರ ಸಂಸ್ಥಾಪಕರಲ್ಲಿ ಅವರೇ ಪ್ರಮುಖರು. ಟ್ರೇನಿಂಗ್ ಕಾಲೇಜಿನ ಕೆಲವು ಅಧ್ಯಾಪಕರೂ ಜೊತೆಗೂಡಿದರು.

ಆಗಿನ ಕಾಲಕ್ಕೆ ಸ್ವತಃ ಕನ್ನಡಿಗರಲ್ಲಿಯೆ ಮನೆಮಾಡಿಕೊಂಡಿದ್ದ ಸ್ವಭಾಷೆಯ ಮೇಲಿನ ಅನಾಸ್ಥೆ-ಅನಾದರಗಳನ್ನು ಕಳೆಯುವಲ್ಲಿ ಸಂಘವು ಮಾಡಿದ ಕಾರ್ಯ

ಅಷ್ಟಿಷ್ಟಲ್ಲ. ಟ್ರೇನಿಂಗ್ ಕಾಲೇಜಿನಲ್ಲಿ ಕನ್ನಡ ನುಡಿಯ ಬಗ್ಗೆ ಆಸ್ಥೆ-ಅಭಿಮಾನಗಳು ಕುದುರಿದವಾದರೆ, ಸಂಘದಲ್ಲಿ ಆ ಕೆಲಸದ ಜೊತೆಗೆ ಕನ್ನಡ ಸಾಹಿತ್ಯ ನಿರ್ಮಿತಿಗೆ ಪ್ರೋತ್ಸಾಹಕೊಡುವ ಕಾರ್ಯವೂ ನಡೆಯಿತು.

ಕನ್ನಡದಲ್ಲಿ ಗ್ರಂಥರಚನೆ ಹಾಗೂ ಅವುಗಳ ವಾಚನ ಮತ್ತು ಪ್ರಸಾರ ಇವೇ ಸಂಘದ ಮುಖ್ಯ ಧ್ಯೇಯಗಳಾಗಿದ್ದವೆಂದರೂ ಸರಿ. ಗ್ರಂಥಕರ್ತರಿಗೆ 'ಇನಾಮು' ಕೊಡುವುದು ಮತ್ತು ಅವರ ಗ್ರಂಥಗಳನ್ನು ಪ್ರಕಟಿಸುವುದು ಸಂಘದ ಒಂದು ಪ್ರಮುಖ ಉದ್ದೇಶವಾಗಿತ್ತು. ಅದರಿಂದ ಲೇಖಕರಿಗೆ ಮರುಭೂಮಿಯಲ್ಲಿ ಜಲಾಶಯವನ್ನು ಕಂಡಂತಾಯಿತು. ಕನ್ನಡದಲ್ಲಿ ಸ್ವತಂತ್ರ ಕೃತಿಗಳನ್ನು ರಚಿಸಬೇಕು ಎಂಬ ಹಂಬಲವನ್ನು ಹಲವರಲ್ಲಿ ಹುಟ್ಟಿಸಿತು.

ಕನ್ನಡದಲ್ಲಿ ಸರಿಯಾಗಿ ನಾಲ್ಕು ವಾಕ್ಯ ಬರೆಯಲು ಅಥವಾ ಭಾಷಣ ಮಾಡಲು ಸಂಬಂಧಿಸಿದಂತೆ ವಿಷಯಗಳನ್ನು ಕೊಟ್ಟು ಸಂಘವು ಸ್ಪರ್ಧೆಗಳನ್ನು ನಡೆಸುತ್ತಿತ್ತು. ಸ್ಪರ್ಧೆಗಳಲ್ಲಿ ಗೆದ್ದವರಿಗೆ, ಸಂಘದ ವಾರ್ಷಿಕೋತ್ಸವದ ದಿವಸ ಪಾರಿತೋಷಕಗಳನ್ನು ಕೊಡುತ್ತಿದ್ದರು. ತರುಣ ಗಳಗನಾಥರು ಇಂಥ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದರು. ಹೀಗೆ ೯-೧೦ ವರ್ಷಗಳಿಂದ ತಪ್ಪದೇ ಅವರು ಒಂದಿಲ್ಲೊಂದು ಪಾರಿತೋಷಕಗಳನ್ನು ಪಡೆಯುತ್ತಿದ್ದರಿಂದ, ಸಂಘದವರು ಅವರಿಗೆ ''ಪಂಢರಪುರದ ವಾರಕರಿ'' ಎಂದು ವಿನೋದದಿಂದ ಅನ್ನುತ್ತಿದ್ದರಂತೆ.

ಈ ಹಿನ್ನೆಲೆಯಲ್ಲಿ ಅವರ ಪ್ರಥಮ ಕಾದಂಬರಿ - 'ಪದ್ಮನಯನಾ' ಎಂಬುವುದು ರಚಿತವಾಯಿತು. (೧೮೯೮). ಸ್ವತಂತ್ರ ಕಾದಂಬರಿಯನ್ನು ಬರೆದವರಿಗೆ ಇನಾಮು ಕೊಡುವುದಾಗಿ ವಿದ್ಯಾವರ್ಧಕ ಸಂಘವು ಸಾರಿದ್ದುದೇ ಈ ಕೃತಿ ರಚನೆಗೆ ಪ್ರೇರಣೆಯನ್ನೊದಗಿಸಿತು. 'ಪಾರಿತೋಷಕದ ಆಶೆಯನ್ನು ತೋರಿಸಿ, ಈ ಕಾದಂಬರಿಯನ್ನು ಬರೆಯಲ್ಹಚ್ಚಿದ ಕರ್ನಾಟಕ ವಿದ್ಯಾವರ್ಧಕ ಸಂಘದ ಉಪಕಾರವನ್ನು.... ಸ್ಮರಿಸದೆ ಇರೆನು' ಎಂದು ಅವರು ತಮ್ಮ ಪ್ರಸ್ತಾವನೆಯಲ್ಲಿ ಹೇಳಿದ್ದಾರೆ. 'ಮಾತೃಭಾಷಾ ಸೇವೆಯನ್ನು ಮಾಡಲೆಳಿಸಿ ನಾನು ಈ ಕಾದಂಬರಿಯ ರೂಪವಾದ ಅಲ್ಪ ಪ್ರಯತ್ನವನ್ನು ಮಾಡಿರುತ್ತೇನೆ. ಈ ಕಾದಂಬರಿ ಮುಖ್ಯವಾಗಿ ಶೃಂಗಾರ, ವೀರ, ಶೋಕಾದ್ಭುತರಸ ಪ್ರಧಾನವಾಗಿರುವುದು. ಕಥಾ ಸಂವಿಧಾನವು 'ನನ್ನ ಕಲ್ಪನೆಯದಿದ್ದು' ಹತ್ತೆಂಟು ಪುಟಗಳು ಮಾತ್ರ ಅನ್ಯ ಕಾದಂಬರಿಗಳ ಸಹಾಯದಿಂದ ಬರೆಯಲ್ಪಟ್ಟಿವೆ.

ಇದೊಂದು ಅದ್ಭುತರಮ್ಯ ಕಥಾನಕ. ರಾಕ್ಷಸರು ಮತ್ತು ಅವರ ಮಾಯಾವಿತನ, ಇವಲ್ಲದೆ ಬೇರೆ ಹಲವು ಅಲೌಕಿಕ ಘಟನೆಗಳು ಈ ಕಾದಂಬರಿಯಲ್ಲಿ ಬಂದಿವೆ. ಗಳಗನಾಥರ ಹೃದ್ಯವೂ ರೋಚಕವೂ ಆದ ಶೈಲಿಯ ಸ್ವರೂಪವನ್ನು ಈ ಪ್ರಥಮ ಕೃತಿಯಲ್ಲಿಯೆ ಕಾಣಬಹುದು. ಅಂತೆಯೇ ಈ ಕೃತಿ ಹಲವಾರು ಆವೃತ್ತಿಗಳನ್ನು ಕಂಡಿತು. ಕ್ರಿ.ಶ. ೧೯೨೩ರಲ್ಲಿ ಪ್ರಕಟವಾದ ನಾಲ್ಕನೆಯ ಆವೃತ್ತಿಗೆ 'ಪ್ರಬುದ್ಧ' ಪದ್ಮನಯನಾ ಎಂಬ ಶೀರ್ಷಿಕೆಯನ್ನು ಕೊಟ್ಟಿದ್ದಾರೆ. ಇದರ ಜನಪ್ರಿಯತೆ ಎಷ್ಟೆಂದರೆ, ಆಗಿನ ದಿನಗಳಲ್ಲಿ ಹಳ್ಳಿಗರು ಇದರ ದೊಡ್ಡಾಟಗಳನ್ನು ಕಟ್ಟಿ ಆಡಿದರಂತೆ.

ಅದಕ್ಕಿಂತ ಹೆಚ್ಚಾಗಿ ಈ ಕೃತಿಯು ಅನ್ಯ ಲೇಖಕರನ್ನು ಸೃಷ್ಟಿಸಿತು. ಇಪ್ಪತ್ತನೆಯ ಶತಮಾನದ ಓರ್ವ ಶ್ರೇಷ್ಠ ಕಾದಂಬರಿಕಾರರಾದ ದಿ. ಬಸವರಾಜ ಕಟ್ಟೀಮನಿಯವರು ಹೀಗೆ ಹೇಳಿದ್ದಾರೆ:

'ಪ್ರಬುದ್ಧ ಪದ್ಮನಯನಾ' ಗಳಗನಾಥರ ಪ್ರಥಮ ಕಾದಂಬರಿ. ನಾನು ಓದಿದ ಪ್ರಪ್ರಥಮ ಕಾದಂಬರಿಯೂ ಅದೇ. ಈಗಲೂ ನನಗೆ ನೆನಪಿದೆ. ಮನೆಯ ಪಡಸಾಲೆಯಲ್ಲಿ ಹೊಗೆ ಕಾರುವ ಚಿಮಣಿ ದೀಪದೆದುರು ರಾತ್ರಿಯಿಡೀ ನಿದ್ದೆಗೆಟ್ಟು ನಾನು ಆ ಕಾದಂಬರಿಯನ್ನು ಓದಿ ಮುಗಿಸಿದ್ದೆ. ಆ ರಮ್ಯ ಕಥಾಲೋಕ, ವಿಚಿತ್ರ ಹೆಸರುಗಳುಳ್ಳ ಪಾತ್ರಗಳು, ವಾಸ್ತವ ಜೀವನವನ್ನು ಮರೆಯಿಸಿ ವಾಚಕರನ್ನು ಸುಂದರವಾದ ಕಲ್ಪನಾ ಪ್ರಪಂಚದಲ್ಲಿ ವಿಹಾರ ಮಾಡಿಸುವ ಕೈಚಳಕ - ಇವು ನನ್ನಲ್ಲಿ ಸಾಹಿತ್ಯ ಪ್ರೀತಿಯನ್ನು ಹುಟ್ಟಿಸಿದವು. ನಾನು ಕಾದಂಬರಿಕಾರನಾಗಲು ಮೂಲ ಪ್ರೇರಣೆಯನ್ನು ಒದಗಿಸಿದ ಕೀರ್ತಿ ಗಳಗನಾಥರ 'ಪದ್ಮನಯನೆ'ಯದು.'

೩. ಶಿಕ್ಷಕ ವೃತ್ತಿ - ಪತ್ರಿಕೋದ್ಯಮ

ಧಾರವಾಡ ಜಿಲ್ಲೆಯ ಬಂಕಾಪುರ ಶಾಲೆಯಲ್ಲಿ ಇದ್ದಾಗ ಗಳಗನಾಥರಿಗೆ 'ಹೆಡ್‌ಮಾಸ್ತರ' ಎಂದು ಬಡತಿಯಾಯಿತು. ಆ ಕಾಲಕ್ಕೆ, ಕನ್ನಡ ಪಠ್ಯಪುಸ್ತಕಗಳ ನವೀಕರಣದ ಕೆಲಸಕ್ಕಾಗಿ ಪುಣೆಗೆ ಬಂದರು. (ಡಿಸೆಂಬರ್ ೧೯೦೪ - ಮಾರ್ಚ್ ೧೯೦೫ರ ವರೆಗೆ). ಮರಾಠಿಯಲ್ಲಿ ಹರಿ ನಾರಾಯಣ ಆಪ್ಟೆಯವರ ಕಾದಂಬರಿಗಳು ಜನಪ್ರಿಯವಾಗಿದ್ದ ಕಾಲವದು. ಅವರ ಸುಪ್ರಸಿದ್ಧ ಕಾದಂಬರಿ 'ಗಡ ಆಲಾ ಪಣ ಸಿಂಹ ಗೇಲಾ' ಅದೇ ಪ್ರಕಟವಾಗಿದ್ದಿತು. ಶಿವಾಜಿಯ ಸೇನಾನಿ ತಾನಾಜಿಯು ಸಿಂಹಗಡ ಕೋಟೆಯನ್ನು ಗೆದ್ದು ಕೊಟ್ಟ ಕಥಾನಕವು ಅದರಲ್ಲಿದೆ. ಗಳಗನಾಥರು ಅದನ್ನು ಒಂದೇ ಬಾರಿಗೆ ಓದಿ ಮುಗಿಸಿದರಂತೆ. ಹೀಗೆ ಆಪ್ಟೆಯವರ ಹಲವಾರು ಕಾದಂಬರಿಗಳನ್ನು ಓದಿದ್ದರ ಪರಿಣಾಮವಾಗಿ, ಐತಿಹಾಸಿಕ ಕಥನದ ಸ್ವರೂಪವು ಅವರ ಮನ ತಟ್ಟಿತೆನ್ನಬೇಕು.

ಪುಣೆಯ ಕೆಲಸವನ್ನು ಮುಗಿಸಿ, ಗಳಗನಾಥರು ಗುತ್ತಲ ಗ್ರಾಮದ ಪ್ರಾಥಮಿಕ ಶಾಲೆಯ ಮುಖ್ಯಾಧ್ಯಾಪಕರಾಗಿ ಕೆಲಸ ಮಾಡಿದರು. ಅಲ್ಲಿ ಕಳೆದ ಮೂರುವರೆ ವರ್ಷಾವಧಿಯು (೧೯೦೫ - ೧೯೦೮) ಅವರ ಮಾಸ್ತರಿಕೆಯ ವೈಭವದ ಕಾಲವಾಗಿತ್ತು. ಆ ಶಾಲೆಯಲ್ಲಿ ಗಳಗನಾಥರ ಕಾಲದ ಒಂದು 'ವಿಸಿಟ್ ಬುಕ್' ಈಗಲೂ ಲಭ್ಯವಿದ್ದು, ಅದರಿಂದ ಅವರು ತಮ್ಮ ಶಿಕ್ಷಕವೃತ್ತಿಯನ್ನು ಹೇಗೆ ಕೈಗೊಂಡಿದ್ದರೆಂಬುದು ತಿಳಿದು ಬರುತ್ತದೆ. ಅಲ್ಲಿಗೆ ಬಂದ ಕೆಲವೇ ತಿಂಗಳಲ್ಲಿ ತಮ್ಮ ಶಿಸ್ತು, ವ್ಯವಸ್ಥೆಯ ಮಂತ್ರದಂಡದಿಂದ ಶಾಲೆಯ ವಾತಾವರಣವನ್ನೇ ಬದಲಿಸಿಬಿಟ್ಟರು. ಅದನ್ನು ಮನಗಂಡ ಆ ಊರಿನ ಓರ್ವ ಸದ್‌ಗೃಹಸ್ಥರು, ಶಾಲೆಯ ವಿಸಿಟ್ ಬುಕ್ಕಿನಲ್ಲಿ ಹೀಗೆ ಶರಾ ಬರೆದಿದ್ದಾರೆ: 'ನಾನು ಸುಮಾರು ೨೫ ವರ್ಷಗಳ ಲಾಗಾಯಿತು ಈ ಶಾಲೆಯ ಕಮೀಟಿದಾರಯಿದ್ದು... ಯೀಗಿರುವಷ್ಟು ಯೆಲ್ಲ ವಿಧದಿಂದಲೂ ಒಳ್ಳೇ ಸ್ಥಿತಿಯಲ್ಲಿ ಯೆಂದೂ ನೋಡಲಿಲ್ಲ.'

ಇದು ಎಜ್ಯುಕೇಶನಲ್ ಇನಸ್ಪೆಕ್ಟರರು ಬರೆದ ಶರಾ:

The Head Master takes exceptionally deep interest in the discharge of his duties.... Very few schools in the district can

boast of such efficiency. The Assistants instead of disliking vigorous discipline appear well pleased and show their appreciation of it, even in the absence of Head Master. (21 October 1905).

ಮುಖ್ಯಸ್ಥರು ಇಲ್ಲದಾಗಲೂ ಕೈಕೆಳಗಿನವರು ಅವರ ಬಗ್ಗೆ ಮೆಚ್ಚುಗೆ ಮತ್ತು ಗೌರವಗಳನ್ನು ಇಟ್ಟುಕೊಳ್ಳುವ ಪರಿಸ್ಥಿತಿ ಅದೆಷ್ಟು ಕಡೆಗೆ ಕಂಡು ಬಂದೀತು?

ಗಳಗನಾಥರ ಶಿಕ್ಷಣ ವ್ಯವಸ್ಥೆ ಹೇಗಿತ್ತು? ಅವರ ಕಾಲಕ್ಕೆ ಶಾಲೆಯಲ್ಲಿ ಎರಡು ಬಗೆಯ ಬಜೆಟ್ ಇತ್ತಂತೆ. ಒಂದು, ಸರಕಾರದಿಂದ ಬರುವ ಹಣದ್ದು. ಎರಡನೆಯ ಬಜೆಟ್, ಕಲಿಸಬೇಕಾದ ಪಾಠಗಳಿಗೆ ಸಂಬಂಧಿಸಿದ್ದು! ಮುಂಬರುವ ತಿಂಗಳಲ್ಲಿ ಯಾರು ಯಾರು ಅಭ್ಯಾಸದ ಎಷ್ಟೆಷ್ಟು ಭಾಗವನ್ನು ಮಾಡಿ ಮುಗಿಸಬೇಕೆಂಬುದನ್ನು ಮುಂಚಿತವಾಗಿ ಗೊತ್ತುಪಡಿಸುತ್ತಿದ್ದರಂತೆ - ಗಳಗನಾಥರು.

ಯಾವುದೇ ಊರಲ್ಲಿರಲಿ, ಗಳಗನಾಥರು ಈ ಊರಿನವರ ಸುಖ ದುಃಖದಲ್ಲಿ ಪಾಲ್ಗೊಳ್ಳುತ್ತಿದ್ದರು. ಒಂದು ಉದಾಹರಣೆ: ಹೊಳೆ, ಹಳ್ಳ ಯಾವುದೂ ಗುತ್ತಲ ಊರಿನ ಬಳಿಯಲ್ಲಿ ಇಲ್ಲ. ಬೇಸಿಗೆ ಬಂದಿತೆಂದರೆ ಜನರ ಗೋಳು ಹೇಳತೀರದು. ಗಳಗನಾಥರು ಈಗಿನ ಕಾಲದ ಶ್ರಮದಾನದ ರೀತಿಯಲ್ಲಿ ವಿದ್ಯಾರ್ಥಿಗಳನ್ನು ಮತ್ತು ಉಪಶಿಕ್ಷಕರನ್ನು ಸೇರಿಸಿಕೊಂಡು ಶಾಲೆಯ ಹತ್ತಿರದಲ್ಲಿ ದೊಡ್ಡ ಬಾವಿಯನ್ನು ತೋಡಿಸಲು ಅಣಿಯಾದರು. ವಿಶೇಷ ಪರಿಶ್ರಮಪಟ್ಟು ನಿಧಿಯನ್ನು ಸಂಗ್ರಹಿಸಿದರು. ಕ್ರಿ.ಶ. ೧೯೦೭ರಲ್ಲಿ ಆ ರೀತಿ ಸಿದ್ಧವಾದ ಬಾವಿ ಇಂದಿಗೂ ಅಸ್ತಿತ್ವದಲ್ಲಿದೆ.

ಗಳಗನಾಥರು ಗುತ್ತಲದಲ್ಲಿ ಇರುವಾಗ ತಾವು ಕಲಿತಿದ್ದ ಟ್ರೇನಿಂಗ್ ಕಾಲೇಜಿನಲ್ಲಿ ಅಧ್ಯಾಪಕರೆಂದು ಬಡತಿಯಾಯಿತು. ಸಾಮಾನ್ಯವಾಗಿ ಪದವೀಧರರಿಗೆ ಆ ಸ್ಥಾನ ಮೀಸಲು. ಆದರೆ ಅದುವರೆಗೆ ಯಾವ ಪ್ರಾಥಮಿಕ ಶಾಲಾ ಮಾಸ್ತರರಿಗೂ ಆ ಗೌರವ ದೊರೆತಿರಲಿಲ್ಲ. ಈ ಬಡತಿಯ ಹಿಂದೆ ಗಳಗನಾಥರ ನೆಚ್ಚಿನ ಗುರುಗಳಾದ ರಾ.ಬಾ. ಕರಂದೀಕರರ (ಆಗ ಅವರು ಈ ಭಾಗದ ಡೆ.ಎಜು. ಇನಸ್ಪೆಕ್ಟರರು) ಕೈವಾಡ ಇದ್ದಿತು.

ಆ ಸ್ಥಾನದಲ್ಲಿ ಅವರು ಒಳ್ಳೆಯ ಸಂಬಳವನ್ನು ಪಡೆದು ನೌಕರಿಯ ಮುಂದಿನ ಹತ್ತು ವರ್ಷಗಳನ್ನು ಸುಖವಾಗಿ ಕಳೆಯಬಹುದಿತ್ತು. ಆದರೆ ನೌಕರಿಗೇ ರಾಜೀನಾಮೆಯಿತ್ತರು.

ಇಲ್ಲಿ ಗಳಗನಾಥರ ಮನೋವೃತ್ತಿಯ ಒಂದು ವಿಶಿಷ್ಟ ಒಲವನ್ನು ಕಾಣಬಹುದು. ಅದೆಂದರೆ ಸದ್ಗುರು ಸಮಾಗಮದ ವಿಚಾರದಲ್ಲಿ ಅವರಿಗಿದ್ದ ಆತ್ಯಂತಿಕ ನಿಷ್ಠೆ. ಅವರ ಮೊದಲ ಕಾದಂಬರಿಯಾದ 'ಪದ್ಮನಯನಾ'ದಲ್ಲಿಯೆ ಈ

ನಿಷ್ಠೆಯ ಹೊಳಹು ಇದೆ. ಮುಂದಿನ ಬದುಕಿನುದ್ದಕ್ಕೂ, ಅದರಂತೆ ಅವರ ಬಹುತರ ಎಲ್ಲ ಕೃತಿಗಳಲ್ಲಿಯೂ ಗುರು-ಸಾಧುಜನರ ಪ್ರಭಾವ, ಕೃಪೆ, ಉಪದೇಶಾದಿಗಳು ತಪ್ಪದೇ ಕಾಣಿಸಿಕೊಂಡಿವೆ.

ಕ್ರಿ.ಶ. ೧೯೦೮ರ ಸುಮಾರಿಗೆ ಗಳಗನಾಥರು ಕುಟುಂಬ ಸಮೇತ ಆಗಡಿಯಲ್ಲಿಯೇ ನೆಲೆನಿಂತರು. ತಮ್ಮ ಆಧ್ಯಾತ್ಮಿಕ ಗುರುಗಳಾದ ಶ್ರೀ ಶೇಷಾಚಲ ಸಾಧುಗಳ ನಿತ್ಯ ಸನ್ನಿಧಿಯಿಂದಾಗಿ 'ಧನ್ಯೋಽಸ್ಮಿ' ಎಂದುಕೊಂಡರು. ಲೌಕಿಕ ಸ್ವರೂಪದ ಶಾಲಾಶಿಕ್ಷಕ ವೃತ್ತಿಯನ್ನು ಕೈಬಿಟ್ಟರೂ ಗುರುಕುಲ ಮಾದರಿಯ ಒಂದು ಪಾಠಶಾಲೆಯನ್ನು ತೆರೆಯಬೇಕು, ವೇದ ವೇದಾಂಗಗಳ ಹಾಗೂ ಚತುಃಶಾಸ್ತ್ರಗಳ ಅಧ್ಯಯನಕ್ಕೆ ಅಲ್ಲಿ ಆಸ್ಪದವಿರಬೇಕು ಎಂಬ ವಿಚಾರ ಅವರದು. ಮನವೊಪ್ಪಿದ ಯಾವುದೇ ಕೆಲಸವಿರಲಿ ಅದಮ್ಯ ಉತ್ಸಾಹದಿಂದ ಕಾಯಾ ವಾಚಾ ಮನಸಾ ಅದರಲ್ಲಿ ತಮ್ಮನ್ನು ಪೂರ್ಣವಾಗಿ ತೊಡಗಿಸಿಕೊಳ್ಳುವುದು ಗಳಗನಾಥರ ಹುಟ್ಟು ಗುಣವೇ ಆಗಿದ್ದಿತು.

ಶ್ರೀ ಶೇಷಾಚಲಸಾಧುಗಳೆದುರು ತಮ್ಮ ಯೋಚನೆ / ಯೋಜನೆಗಳನ್ನು ಪ್ರಸ್ತಾಪಿಸಿ, ಕಾರ್ಯಪ್ರವೃತ್ತರಾದರು. ಅವರ ಎಂದಿನ ಶಿಸ್ತು, ವ್ಯವಸ್ಥೆಯ ಪರಿಣಾಮವಾಗಿ, ಮುಂದಿನ ಮೂರು-ನಾಲ್ಕು ವರ್ಷಗಳಲ್ಲಿಯೇ ೮೦ ಜನಕ್ಕೆ ಮೇಲ್ಪಟ್ಟು ವಿದ್ಯಾರ್ಥಿಗಳು ಪಾಠಶಾಲೆಯಲ್ಲಿ ಕಲಿಯತೊಡಗಿದರು. ಅವರೆಲ್ಲರಿಗೆ ಉಚಿತ ಊಟ ವಸತಿ. ಕಲಿಸಲ್ಲು ಆ ಆ ಶಾಸ್ತ್ರ ವಿಷಯಗಳಲ್ಲಿ ಪಂಡಿತ-ಪರಿಣತರನ್ನು ಅವರವರ ಊರು ಬಿಡಿಸಿ ಆನಂದವನದಲ್ಲಿ ನೆಲೆಗೊಳಿಸಿದರು. ಪಾಠಶಾಲೆಯನ್ನು ನಡೆಸಿಕೊಂಡು ಹೋಗಲು ಹಣ ಬೇಕು. ಜನತೆಗೆ ಆ ಕುರಿತ ಮನವಿ ಮಾಡಿಕೊಳ್ಳಲು ಮತ್ತು ಪಾಠಶಾಲೆಯ ಆಗುಹೋಗುಗಳನ್ನು ತಿಳಿಯಪಡಿಸಲು ಪತ್ರಿಕೆಯೊಂದು ಬೇಕು ಎಂದೆನಿಸತೊಡಗಿತು, ಗಳಗನಾಥರಿಗೆ. ಪತ್ರಿಕಾ ಪ್ರಪಂಚದಲ್ಲಿ ಆ ಮುಂದೆ ಒಂದು ವಿಕ್ರಮವನ್ನೇ ಪ್ರಸ್ಥಾಪಿಸಿದ 'ಸದ್ಬೋಧ ಚಂದ್ರಿಕೆ' ಆರಂಭವಾದದ್ದು ಈ ಕಾರಣದಿಂದ.

ಮೊದಲ ವರ್ಷದಿಂದ ಧಾರಾವಾಹಿಯಾಗಿ ಕಾದಂಬರಿಗಳನ್ನು ಕೊಡತೊಡಗಿದ್ದರಿಂದ, ೧೯೧೧ರಲ್ಲಿ ಚಂದಾದಾರರ ಸಂಖ್ಯೆ ೨೩೦೦ಕ್ಕೆ ಏರಿತು. ಈ ಏರಿಕೆಗೆ ಯಾರೂ ಹೆಮ್ಮೆ ಪಡಬೇಕಾದದ್ದೇ - ಆಗಿನ ದಿನಗಳಲ್ಲಿ. ಆದರೆ ಗಳಗನಾಥರಿಗೆ, ತಮ್ಮ ಪಾಠಶಾಲೆಗೆ ಮುಂತಾದ ಧಾರ್ಮಿಕ ಕಾರ್ಯಗಳಿಗೆ ಹೆಚ್ಚು ಹಣ ಬೇಕಾಗಿತ್ತು. ಅದಕ್ಕೆಂದು ಅವರಿಗೆ ತೋಚಿದ ಉಪಾಯಗಳೆಂದರೆ, ಪುಟಗಳನ್ನು ಹೆಚ್ಚು ಮಾಡಬೇಕು, ಹಾಗೂ ಚಂದಾಹಣವನ್ನು ಕಡಿಮೆ ಮಾಡಬೇಕು! ಅದರಿಂದ

ಚಂದಾದಾರರ ಸಂಖ್ಯೆಯೇನೊ ಏರಿತು. ಆದರೆ ಹೆಚ್ಚು ಹಣ ಬರುವ ದೃಷ್ಟಿಯಿಂದ ಚಂದಾದಾರ ಸಂಖ್ಯೆ ಇನ್ನೂ ಏರಬೇಕಿತ್ತು. ಏನು ಉಪಾಯ? ಪತ್ರಿಕೆಯ ಪುಟಗಳನ್ನು ಇನ್ನೂ ಅಷ್ಟು ಹೆಚ್ಚಿಸುವುದು. ಈ ನಿರ್ಧಾರದಿಂದಾಗಿ ಪ್ರತಿ ಸಂಚಿಕೆ ೩೨ರಿಂದ ೪೮ ಪುಟಗಳಷ್ಟಾಯಿತು. ಆಗ ಕರ್ನಾಟಕ ಪತ್ರಿಕಾ ಪ್ರಪಂಚದಲ್ಲೇ ಅದುವರೆಗೆ ಆಗದಿದ್ದ ಪವಾಡವೊಂದು ನಡೆದುಹೋಯಿತು; ಚಂದಾದಾರರ ಸಂಖ್ಯೆ ಏಳು ಸಾವಿರದ ಗಡಿಯನ್ನು ದಾಟಿತು (೧೯೧೪).

ಪತ್ರಿಕೆಯ ಈ ಶೀಘ್ರ ಪ್ರಸಾರಕ್ಕೆ ಅವರು ಒಂದರ ಮೇಲೊಂದು ಕಾದಂಬರಿಯನ್ನು ಕೊಡುತ್ತಿದ್ದುದೇ ಆಗಿದೆ. 'ಪದ್ಮನಯನೆ' ಮರುಮುದ್ರಣ ಗೊಂಡಿತು. ಅನಂತರ 'ಕಮಲಕುಮಾರಿ', 'ವೈಭವ', 'ಮೃಣಾಲಿನಿ'...

ಧಾರಾವಾಹಿಯಾಗಿ ಒಂದೆರಡು ಗ್ರಂಥಗಳು ಆ ಮುಂಚೆ ಮೈಸೂರು ಕಡೆಯ ಪತ್ರಿಕೆಗಳಲ್ಲಿ ಬಂದಿದ್ದವು. ಆದರೆ ಅವುಗಳ ಚಂದಾದಾರರ ಸಂಖ್ಯೆಯಲ್ಲಿ ಅಂಥ ಹೆಚ್ಚಳವೇನೂ ಆಗಿರಲಿಲ್ಲ. ಅಂತೂ ಅಂದಿನ ಕಾಲದಲ್ಲಿ ಕನ್ನಡದಲ್ಲಿ ಯಾವ ಪತ್ರಿಕೆಯೂ ಏಳು ಸಾವಿರದ ಚಂದಾದಾರರನ್ನು ಪಡೆದಿರಲಿಲ್ಲ.

''ಮೊರದಲ್ಲಿ ಎಳಗೂಸಾಗಿ ಮಲಗಿದ್ದ ಚಂದ್ರಿಕೆಯು ಈಗ ಕರ್ನಾಟಕ ಪ್ರಾಂತದಲ್ಲಿ ದುಡು ದುಡು ಓಡಾಡುತ್ತಿದ್ದಾಳೆ. ಧಾರವಾಡ, ವಿಜಾಪುರ, ಬೆಳಗಾವಿ ಜಿಲ್ಲೆಗಳಲ್ಲಿ ಅವಳದು ವೇಗದ ನಡಿಗೆ. ಮೈಸೂರಲ್ಲಿ ಗಾಂಭೀರ್ಯದ ನಡಿಗೆ; ಕಾರವಾರ, ಹೈದರಾಬಾದ, ಮದ್ರಾಸ್‌ಗಳಲ್ಲಿ ಅವಳದು ಮಂದವಾದ ನಡಿಗೆ. ಇನ್ನು ಕನ್ನಡ ಪ್ರಾಂತದಿಂದ ಬಹು ದೂರ ಇದ್ದ ಕನ್ನಡಿಗರು ಕರೆದರೂ ಚಂದ್ರಿಕೆಯು ಬೆದರದೆ ತಟ್ಟನೆ ಹೋಗುತ್ತಿದ್ದಾಳೆ. ಕರೆದವರ ಕೈಗೂಸು ಆಕೆ.'' ರೂಪಕಾಲಂಕಾರದಲ್ಲಿ ಈ ಮಾತನ್ನು ಅವರು ಹೇಳಿದ್ದರೂ, ಚಂದಾದಾರರೇ ಚಂದ್ರಿಕೆಯನ್ನು ಎತ್ತಿ ಮುದ್ದಾಡಿಸುವವರು ಎಂದು ಮನಸಾರೆ ನಂಬಿದ್ದರು.

ವಾಚಕರಾದರೂ ಅಷ್ಟೇ ಆತ್ಮೀಯತೆಯಿಂದ ಚಂದ್ರಿಕೆಯನ್ನು ಕಂಡರು. ಒಬ್ಬನ ಪ್ರತಿಕ್ರಿಯೆ ಹೀಗಿದೆ:

''ನನಗೆ ವಾಚನಾಭಿರುಚಿಯು ಏನೂ ಇದ್ದಿಲ್ಲವೆಂದರೂ ಅಡ್ಡಿಯಿಲ್ಲ. ಚಂದ್ರಿಕೆಯನ್ನು ಓದಹತ್ತಿದ್ದರಿಂದ ಬೆಳೆದ ವಾಚನಾಭಿರುಚಿ ನನ್ನನ್ನು ದಂಗುಬಡಿಸಿಬಿಟ್ಟಿದೆ.'' (ಶಂಕರರಾವ್ ಐರಣಿ, ಇರಿಗೇಶನ್ ಹೆಡ್ ಕ್ಲಾರ್ಕ್)

ಆಗಿನ ಕಾಲದ ಪತ್ರಿಕೆಗಳಿಗೆ ಚಂದಾಹಣವೇ ಗಳಿಕೆಯ ಮುಖ್ಯಸಾಧನ (ಜಾಹೀರಾತುಗಳಲ್ಲ). ಚಂದಾದಾರರಾಗಲು ಹೆಚ್ಚು ಜನ ಮುಂದೆ ಬರಬೇಕೆಂದು ಗಳಗನಾಥರು ಪತ್ರಿಕೆಯಲ್ಲಿ ಮೇಲಿಂದ ಮೇಲೆ ಮನವಿಯನ್ನು ಮಾಡುತ್ತಲಿದ್ದುದರ ಫಲವಾಗಿ ಎಷ್ಟೋ ವಾಚಕರು ಆ ಕೆಲಸದಲ್ಲಿ ಸಕ್ರಿಯವಾಗಿ ಪಾಲ್ಗೊಂಡರು.

''ತಮ್ಮ ಸದ್ಬೋಧ ಚಂದ್ರಿಕೆಯ ನಾಲ್ಕನೆಯ ವರ್ಷದ ಬಾಲಲೀಲೆಗಳನ್ನು ನೋಡಿ ಆದ ಆನಂದವನ್ನು ಬಾಯಿಂದ ವರ್ಣಿಸಲಿಕ್ಕೆ ಎಷ್ಟು ಪ್ರಯತ್ನ ಮಾಡಿದರೂ ಆಗದೆ ಹೋಯಿತು. ಕೆಳಗಿನ ೧೧ ಜನರನ್ನು ನಿಮ್ಮ ವರ್ಗಣಿದಾರರ ಲಿಸ್ಟಿನಲ್ಲಿ ಸೇರಿಸಿಕೊಂಡು ಅವರಿಗೆ ಪತ್ರಿಕೆ ಕಳಿಸಬೇಕು'' (ವ್ಯಾ.ಅ. ಹೆರಗಲ್ಲ, ಶಾಲಾ ಮಾಸ್ತರ).

ಓದುಗರು ಪತ್ರಿಕೆಯೊಂದನ್ನು ಶುದ್ಧವಾಗಿ ಮೆಚ್ಚಿಕೊಂಡು ಇತರ ಅನೇಕರಿಗೆ ಚಂದಾದಾರರಾಗಿರೆಂದು ಹೇಳುವುದೇ ಅಲ್ಲದೆ ಚಂದಾಹಣವನ್ನು ತಾವಾಗಿ ಕೂಡಿಸಿ ಕಳಿಸುವುದು ಈಗಿನ ಕಾಲದಲ್ಲಿ ಸಹ ಅಪೂರ್ವವಾದದ್ದು. ಮುಳಗುಂದ ಊರಿನ ಕೆಲವರು ಒಂದು ರವಿವಾರ ಸೇರಿ, ಊರಿನಲ್ಲಿ ತಿರುಗಾಡಿ ೫೦-೬೦ ಜನ ಹೊಸ ಚಂದಾದಾರರ ಪಟ್ಟಿಯನ್ನು ಕಳಿಸಿದರು.

ಮೈಸೂರ ಬಳಿಯ ಚಾಮರಾಜನಗರದಿಂದ ಬಂದ ಇನ್ನೊಂದು ಪತ್ರ ಗಮನಿಸುವ ಹಾಗಿದೆ:

''ಚಂದ್ರಿಕೆ ಲೋಕಾನಂದಿನಿ ಅಹುದು, ಅದನ್ನಾದರಿಸದವನು ಪಶುತುಲ್ಯನೇ ಸರಿ. ನಾನು ನನ್ನ ಪತ್ರಿಕೆಯೊಡನೆ, ಆನಂದಪಾತ್ರಳಾದ ಚಂದ್ರಿಕೆಗೂ ಯಥೋಚಿತ ಸಹಾಯ ಮಾಡಲು ಸಂಕಲ್ಪಿಸಿರುವೆನು. ಸದ್ಯಕ್ಕೆ ಇಬ್ಬರು ವರ್ಗಣಿದಾರರನ್ನು ಮಾಡಿರುವೆನು''

'ನನ್ನ ಪತ್ರಿಕೆಯೊಡನೆ?' ಹೌದು; ಅವರು ಮೈಸೂರ ಕಡೆಯ ಸುಪ್ರಸಿದ್ಧ ಪತ್ರಿಕೆಯಾಗಿದ್ದ 'ಕರ್ನಾಟಕ ಕಾದಂಬರೀ ಸಂಗ್ರಹ'ದ ಸಂಪಾದಕರಿದ್ದರು.

''ಚಂದ್ರಿಕೆಯು ಹ್ಯಾಗೇ ಇರಲಿ. ಪದ್ಮನಯನಾ ಎಂಬ ಕೀರ್ತಿಶಾಲಿ ಮಗಳನ್ನು ಹಡೆದಿದ್ದಾಳೆ. ಈ ಉಭಯ ಸ್ತ್ರೀಯರನ್ನು ಪುರುಷರು ಸ್ತೋತ್ರ ಮಾಡಿ ಸಹಾಯ ಮಾಡಲು ಮುಂದೆ ಬಂದದ್ದರಲ್ಲಿ ನನಗೇನೂ ಮಹತ್ವ ಕಾಣುವುದಿಲ್ಲ. ಪುರುಷರು ಸ್ತ್ರೀಯರನ್ನು ವರ್ಣನೆ ಮಾಡುವುದು ಸಹಜಿಕವೇ. ಅದಿರಲಿ, ನನಗೆ ಎಂಥ ತ್ರಾಸು ಇದ್ದರೂ ಅವರಿಬ್ಬರನ್ನು ನೆನದರೆ ಸಾಕು... ಈ ಉಭಯತರನ್ನು ಕಳಿಸಿಕೊಡುವುದರ

ದೆಶೆಯಿಂದ ಪತ್ರ ಹಾಕಿದ್ದು, ನೀವು ಇನ್ನೂ ಕಳಿಸಿಕೊಟ್ಟಿಲ್ಲ. 'ಪದ್ಮನಯನಾ' ಇವರನ್ನು ಕೂಡ್ಲೆ ಕಳಿಸಿಕೊಡಬೇಕು'' (ಯಮುನಾಸಾನಿ ನಾಯ್ಕಿಣಿ, ಕಾಮನ ಕಟ್ಟಿ, ಧಾರವಾಡ).

ತಮ್ಮ ಪತ್ರಿಕೆಯ ಪ್ರಸಾರವರ್ಧನೆಯ ಬಗ್ಗೆ ಗಳಗನಾಥರು ವಿಶಿಷ್ಟವೆನಿಸುವ ರೀತಿಯಲ್ಲಿ ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದಾರೆ. ಆ ಪ್ರಕಾರ ಚಂದ್ರಿಕೆಯ ನಾಲ್ಕು ಸಾವಿರದ ಪ್ರಸಾರವು ೨೭ ಜಿಲ್ಲೆಗಳಲ್ಲಿಯ ೧೬೦ ಸಬ್‌ಪೋಸ್ಟ್‌ಗಳಲ್ಲಿ, ೧೨೦೦ ಊರುಗಳಲ್ಲಿ ಇದ್ದಿತಂತೆ. ಜಾತಿಯ ಪ್ರಕಾರ ಲೆಕ್ಕ ಬೇಕೆ? ಅದನ್ನೂ ಕೊಟ್ಟಿದ್ದಾರೆ!

೨೨೦೦ ಜನ ಬ್ರಾಹ್ಮಣರು, ೧೨೦೦ ಜನ ವೀರಶೈವರು, ೫೦ ಜನ ಮುಸಲ್ಮಾನರು, ೨೫ ಜನ ಕ್ರೈಸ್ತರು, ೫೧೫ ಜನ ಕುರುಬ ಜನಾಂಗದವರು ಇತ್ಯಾದಿ. ಅದರಂತೆ ಸ್ತ್ರೀಯರು ತಾವಾಗಿ ಚಂದಾದಾರರಾಗಲು ಮುಂದೆ ಬಂದವರು ೧೨೫ ಜನ. ಆಗಿನ ಕಾಲದಲ್ಲಿ ಇದೊಂದು ಗಣನೀಯವಾದ ಸಂಖ್ಯೆಯೆ.

ಒಂದೊಮ್ಮೆ ಅವರು ಅದರ ಲೆಕ್ಕವನ್ನೂ ಕೊಟ್ಟಿದ್ದಾರೆ. ನಾಲ್ಕು ಸಾವಿರ ಚಂದಾದಾರರಿಂದ ಬಂದ ನಾಲ್ಕು ಸಾವಿರ ರೂ. ಹಣದಲ್ಲಿ ಕಾಗದ, ಮುದ್ರಣ ಕೆಲಸಗಾರರ ಸಂಬಳ, ಅಂಚೆವೆಚ್ಚ ಇತ್ಯಾದಿಗಳಿಗೆ ೨೭೫೦ ರೂ. ವೆಚ್ಚವಾಗಿ, ಪಾಠಶಾಲೆಗಳಿಗೆ ವಿನಿಯೋಗಿಸುವುದರಲ್ಲಿ ಗಳಗನಾಥರಿಗೆ ಯಾವ ಬಗೆಯ ಸಂಕೋಚ, ಮರೆಮಾಚುವಿಕೆ ಇದ್ದಿಲ್ಲ. ಏಕೆಂದರೆ, ಚಂದ್ರಿಕೆ ಜನ್ಮ ತಾಳಿದ್ದೇ ಅದಕ್ಕಾಗಿ. ತಮ್ಮ ನಿಲುಮೆಯನ್ನು ಅವರು ಸಮರ್ಥಿಸಿಕೊಂಡ ಬಗೆಯನ್ನು ಗಮನಿಸಬೇಕು:

''ಸ್ವಭಾವ ಸುಂದರಿಯಾದ ಚಂದ್ರಿಕೆಗೆ ತನ್ನ ಪೋಷಕರಾದ ಚಂದಾದಾರರ ಮೇಲೆ ಎಂದಿಗೂ ಆಕೆಯ ಪ್ರೇಮ ಬಹಳ. ಅಂತೇ ಆಕೆಯ ಮೊದಲನೆಯ ವರ್ಷ ಕೇವಲ ೨೪ ಪುಟಗಳಂತೆ ತಿಂಗಳಿಗೆ ಕೊಡುತ್ತಿದ್ದಾಗ ಚಂದಾಹಣವನ್ನು ರೂ. ೧-೬-೦ ತಕ್ಕೊಳ್ಳುತ್ತಿದ್ದಳು. ಈಗ ೪೮ ಪುಟಗಳು; ಆದರೆ ಒಂದೇ ರೂ. ಆಕೆಯು ವಿದ್ಯಾಪಕ್ಷಪಾತಿ, ಧರ್ಮತತ್ಪರಗಳು, ಪಾಠಶಾಲೆಯ ಅಧ್ಯಾಪಕರ ವೇತನ, ಬ್ರಹ್ಮಚಾರಿಗಳ ಅನ್ನ, ವಸ್ತ್ರ ವೆಚ್ಚಗಳನ್ನು ತಾನೇ ಸಾಗಿಸಬೇಕೆಂದು ಹೆಣಗುತ್ತಾಳೆ. ಮೇಲಾಗಿ ಹುಡುಗಿಯ ಮನಸ್ಸು ಉದಾರ! ಮಂದಿ ಉಣ್ಣಲಿ, ತಿನ್ನಲಿ, ನೆಟ್ಟಗಿರಲಿ ಎಂದು ಇಚ್ಛೆ ಬಹಳ. ಅಂದಬಳಿಕ, ಪ್ರಿಯ ವಾಚಕರೇ, ಚಂದ್ರಿಕೆಗೆ ವಸ್ತ್ರ-ಒಡವೆಗಳನ್ನು ಮಾಡಿಸಲಿಕ್ಕೆ ದುಡ್ಡು ಹ್ಯಾಗೆ ಉಳಿಯಬೇಕು? ನೀವೇ ಹೇಳಿರಿ. ಆಕೆಯ ಸಾಧಾರಣ ಪೌಷ್ಟಿಕ ಆಹಾರ, ಸಾಕಷ್ಟು ಭೂಷಣವಾದ ವಸ್ತ್ರ, ಹಣೆಗೆ

ಬೊಟ್ಟು ಕುಂಕುಮ-ಇಷ್ಟನ್ನು ದೇವರು ನಡೆಸಿಕೊಟ್ಟರೆ ಸಾಕು. ಹೆಚ್ಚಿನದೆಲ್ಲ, ಆಕೆ ಧರ್ಮಕಾರ್ಯಕ್ಕೆ ಬಯಸುವವಳೇ ಸರಿ.''

ಪತ್ರಿಕೆಯು ಬಾಹ್ಯ ಸೌಂದರ್ಯವಿಲ್ಲದೆ, ಸಾದಾರೀತಿಯಿಂದ ಹೊರಡುತ್ತಿದ್ದುದಕ್ಕೆ ವಾಚಕರು ತಕರಾರು ಮಾಡಿದ್ದಾಗ, ಉತ್ತರರೂಪಿಯಾಗಿ ಮೇಲಣ ಮಾತನ್ನು ಹೇಳಿದ್ದಾರೆ. ಗಳಗನಾಥರ ಕಾದಂಬರಿಗಳ ಮುಂದಿನ ಭಾಗವನ್ನು ಓದಲು ವಾಚಕರು ಉತ್ಸುಕರಿದ್ದಾಗ, ಪತ್ರಿಕೆಯು ತಡವಾಗಿ ಹೊರಡುತ್ತಿದ್ದುದಕ್ಕೂ ಅನೇಕ ವಾಚಕರಿಂದ ತಕರಾರುಗಳು ಬರುತ್ತಿದ್ದವು. ಅವಕ್ಕೆ ಉತ್ತರವಾಗಿ ಗಳಗನಾಥರು ಒಮ್ಮೆ ಹೀಗೆ ಬರೆದರು:

''ಚಂದ್ರಿಕೆಯು ಹೊತ್ತಿಗೆ ಸರಿಯಾಗಿ ಬರುವುದಿಲ್ಲೆಂಬ ದೋಷವು ನಮ್ಮ ಪಾಲಿಗೆ ಗುಣವಾಗಿ ಪರಿಣಮಿಸಿದೆ. ನಮ್ಮ ವಾಚಕರು ಟಕ್ಕು ಹಿಡಿದು ಆತುರತೆಯಿಂದ ಚಂದ್ರಿಕೆಯ ಹಾದೀ ನೋಡುತ್ತ, ಬೇಗನೆ ಯಾಕೆ ಬರುವುದಿಲ್ಲೆಂದು ಆಕೆಗೆ ಬಾಯಿ ಮಾಡುವಷ್ಟು ಜಾಗರೂಕರೂ ವಾಚನಾಭಿರುಚಿಯುಳ್ಳವರೂ ಆಗಿರುವರೆಂಬುದು ಇದರಿಂದ ಗೋಚರವಾಗುತ್ತದೆ. ತಡವಾದದ್ದಕ್ಕೆ ಹಿರಿಯರಿಂದ ಸಿಟ್ಟು ಮಾಡಿಸಿಕೊಂಡರೆ ತಪ್ಪಿಲ್ಲ. ''ನೀನು ಗುಣಹೀನೆ' ಎಂಬ ಚಂಡು ಹಿಡಿದು ದಬ್ಬಿಸಿಕೊಂಡರೆ ಮಾತ್ರ ಕಷ್ಟ... ಸಿಕ್ಕ ವಿಷಯಗಳನ್ನು ತುಂಬಿಕೊಂಡು ಹೋದರೆ ಚಂದಾದಾರರು ಚಂಡಿ ಹಿಡಿದು ದೂಡಲಿಕ್ಕಿಲ್ಲೇನು! ಆದ್ದರಿಂದ ಉತ್ತಮ ಸೇವೆಯಿಂದ ಚಂದಾದಾರರ ಸಿಟ್ಟು ಇಳಿಸಿ 'ಶಭಾಸ್! ತಡವಾಗಿ ಬಂದರೂ ಆನಂದಪಡಿಸಿದಳು' ಎಂಬ ಉದ್ಗಾರವನ್ನು ಹೊರಡಿಸಲು ಆಕೆಯು ಇಚ್ಛಿಸುವಳು.''

ಸಂಚಿಕೆಗಳು ತಡವಾಗಿ ತಲುಪಿದ್ದುದರ ಇನ್ನೊಂದು ಕಾರಣ - ಅಂಚೆ ಖಾತೆಯವರ ನಿಧಾನ. ಆನಂದವನವು ಸಣ್ಣ ಊರಿನ ಸಬ್ - ಪೋಸ್ಟ್ ಆಫೀಸು. ಚಂದ್ರಿಕೆಯ ವಿ.ಪಿ.ಗಳು, ಮನಿ ಆರ್ಡರುಗಳು - ಇವನ್ನು ಒಬ್ಬನೇ ವ್ಯಕ್ತಿ ನಿಭಾಯಿಸಬೇಕು. ಪತ್ರಿಕೆಯ ಪ್ರಸಾರವು ನಾಲ್ಕು ಸಾವಿರದಿಂದ ಆರೇಳು ಸಾವಿರ ಆದಾಗ, ಸಂಚಿಕೆಗಳನ್ನೆಲ್ಲ ಚಕ್ಕಡಿಯಲ್ಲಿ ತುಂಬಿಸಿ, ಆರು ಮೈಲು ದೂರದ ತಾಲೂಕು ಸ್ಥಳವಾದ ಹಾವೇರಿಯಲ್ಲಿರುವ ಅಂಚೆ ಕಛೇರಿಗೆ ಹೋಗಿ ರವಾನಿಸುತ್ತಿದ್ದರು. ಆ ಪ್ರಸಂಗವಾದರೂ, ಕನ್ನಡ ಪತ್ರಿಕೋದ್ಯಮದ ಚರಿತ್ರೆಯಲ್ಲಿ ಅಪೂರ್ವವಾದದ್ದು.

ನಾಲ್ಕು ಸಾವಿರದ ಅಂಕಿಯನ್ನು ದಾಟಿ ಆ ಮುಂದೆ ಭರದಿಂದ ಬೆಳೆದದ್ದಕ್ಕೆ ಅವರ ಕಾದಂಬರಿಗಳ ಪ್ರಕಟನೆಯೇ ಕಾರಣ ಎಂಬುದನ್ನು ನೋಡಿದ್ದೇವೆ. ಅದರಲ್ಲಿಯೂ 'ಕುಮುದಿನಿ'ಯಿಂದಾಗಿ ಈ ಪವಾಡ ಜರುಗಿರಲು ಸಾಕು.

'ಕುಮುದಿನಿ'ಯು ಗಳಗನಾಥರ ಸ್ವತಂತ್ರ ಐತಿಹಾಸಿಕ ಕಾದಂಬರಿ. ಕರ್ನಾಟಕ ಇತಿಹಾಸದ ಹಿನ್ನೆಲೆಯುಳ್ಳದ್ದು. ಈ ಕೃತಿಗೆ ಕೊಟ್ಟ ಇನ್ನೊಂದು ಹೆಸರು 'ಬಾಲಕ್ಕೆ ಬಡಿದಾಟ' ವಿಜಯನಗರದ ವೀರರು ತಮ್ಮ ಆನೆಯಂಥ ಸಾಮ್ರಾಜ್ಯವನ್ನು ಕಳೆದುಕೊಂಡು ಬಾಲದಂಥ ಚಂದ್ರಗಿರಿಯ ಸಂಸ್ಥಾನಕ್ಕಾಗಿ ತಮ್ಮೊಳಗೆ ಬಡಿದಾಡಿದ್ದನ್ನು ವರ್ಣಿಸಿರುವುದರಿಂದ, ಈ ಹೆಸರು. ಚಂದ್ರಗಿರಿ ರಾಜ್ಯವನ್ನು ಜಗರಾಯನೆಂಬುವನು ಅನ್ಯಾಯವಾಗಿ ಹಿಡಿದುಕೊಂಡಿದ್ದಾಗ, ರಾಜಮನೆತನದ ರಂಗರಾಯನ ಪಕ್ಷವನ್ನು ವಹಿಸಿದ್ದ ಎಚ್ಚಮನಾಯಕನು ಅವನನ್ನು ಸೋಲಿಸಿದ್ದರ ಕಥಾನಕ ಇಲ್ಲಿದೆ. ಅವನ ಪತ್ನಿಯೇ ಕುಮುದಿನಿ. ಲಗ್ನ ದಿನವೇ ಪತಿಯನ್ನು ಪ್ರಾಣಾಪಾಯದಿಂದ ರಕ್ಷಿಸಿದವಳು; ಜೊತೆಗೆ ಸತ್ಸಂಗದಿಂದ ಪುನೀತಳಾದವಳು. ಜಗರಾಯನು ರಂಗರಾಯನನ್ನು ಸೆರೆಯಲ್ಲಿಟ್ಟಾಗ ಕುಮುದಿನಿಯು ಉಪಾಯದಿಂದ, ಒಬ್ಬ ರಾಜವಂಶೀಯ ಮಗುವನ್ನು ಪಾರು ಮಾಡಿದಂಥ ವೀರ ರಮಣಿ. ಅವಳ ಪಾತ್ರ ಸೃಷ್ಟಿ, ಕನ್ನಡ ಕಾದಂಬರೀ ಪ್ರಪಂಚದಲ್ಲಿ ಚಿರಕಾಲ ಉಳಿಯುವಂತಹುದು. ಸ್ವಾಮಿನಿಷ್ಠೆಯ ವೀರಾಗ್ರಣಿಯಾದ ಎಚ್ಚಮನಾಯಕನದೂ ಅತ್ಯಂತ ಮನಸೆಳೆಯುವ ಪಾತ್ರವಾಗಿದ್ದು, ಹಳ್ಳಿಹಳ್ಳಿಗಳಲ್ಲಿ ದೊಡ್ಡಾಟಗಳ ಮೂಲಕ ರಂಗಪ್ರಯೋಗವನ್ನು ಕಂಡು ಜನಮನವನ್ನು ರಂಜಿಸಿದೆ.

'ಕುಮುದಿನಿ'ಯನ್ನು ಕುರಿತು ಸದ್ಬೋಧ ಚಂದ್ರಿಕೆಯ ವಾಚಕರ ಪ್ರತಿಕ್ರಿಯೆ ಮೇರೆವರಿದು ಹರಿಯಿತು. ಕುಮುದಿನಿಯು ರಾಜಕುವರನೊಬ್ಬನನ್ನು ಯುಕ್ತಿಯಿಂದ ಕರೆದೊಯ್ದ ಮೇಲೆ, ಜಗರಾಯನಿಂದ ಆದೇಶ ಹೊಂದಿ ಚಿನ್ನ ಓಬಲನೆಂಬ ಕ್ರೂರನು ಸೆರೆಮನೆಗೆ ಬಂದು ಉಳಿದವರನ್ನೆಲ್ಲ ಸಂಹರಿಸುತ್ತಾನೆ. ಅದೊಂದು ಭೀಕರ ಸನ್ನಿವೇಶ:

'''ಕುಮುದಿನಿ' ಕಾದಂಬರಿಯನ್ನು ನಾಲ್ಕು ಜನ ಮಿತ್ರರು ಕೂಡಿ ಓದುತ್ತಿದ್ದೆವು, ಅದರೊಳಗಿನ 'ಅಂತಕನ ಕೋಲಾಹಲ' ಎಂಬ ೧೨ನೆಯ ಪ್ರಕರಣವನ್ನು ಓದುವಾಗ ಅದರೊಳಗಿನ ಚಿನ್ನಓಬಲನ ಕ್ರೂರತನವನ್ನು ಆಗಿನ ದುಃಖದ ಪ್ರಸಂಗವನ್ನು ಓದಿ ನಮ್ಮೊಳಗಿನ ಒಬ್ಬ ಮಿತ್ರರು ಮೂರ್ಛಿತರಾದರು. ಯೋಗ್ಯ ಉಪಚಾರದಿಂದ ಅವರು ಎಚ್ಚೆತ್ತ ಮೇಲೆ ಕಾದಂಬರಿಯನ್ನೇ ಮುಟ್ಟದಾದರು. ಚಿನ್ನಓಬಲನೆಂಬ ವ್ಯಕ್ತಿಯ ಕ್ರೂರತನವು ನಿಜವಾಗಿ ಘಟಿಸಿದ್ದೇ ಆದರೆ ಆ ನೀಚನು ಇವೊತ್ತಿಗೂ ರೌರವ ನರಕದಲ್ಲಿರಬಹುದು'' (ಎಂ. ಗಣೇಶರಾವ, ಕ್ಲಾರ್ಕ್, ಜೋಗಿಮಠ, ವಿಟ್ಲ, ದಕ್ಷಿಣ ಕನ್ನಡ ಜಿಲ್ಲೆ). (ಮೂರ್ಛೆ ತರಿಸಿದ ಆ ಪ್ರಕರಣದ ಕೆಲ ಭಾಗವನ್ನು ಅನುಬಂಧ-೩ರಲ್ಲಿ ನೋಡಬಹುದು)

ಅಗಡಿಯಲ್ಲಿದ್ದುದು ಹ್ಯಾಂಡ್ ಪ್ರೆಸ್. ಅದರಲ್ಲಿ ೪೮ ಪುಟಗಳ ಏಳು ಸಾವಿರ ಪ್ರತಿಗಳನ್ನು ಮುದ್ರಿಸುವುದು ಕಷ್ಟದ್ದಾಗಿ ತೋರಿತೆಂದು, ಸಾಲ ಮಾಡಿ, ದೊಡ್ಡ ಮುದ್ರಾಯಂತ್ರವನ್ನು ತರಲಾಯಿತು. ಆದರೆ ಪ್ರಥಮ ಮಹಾಯುದ್ಧದಿಂದಾಗಿ ಪತ್ರಿಕೆಗೆ ಸಾಕಷ್ಟು ಪೆಟ್ಟು ಬಿದ್ದಿತು. ಸಾಲ ತೀರುವಿಕೆಯ ಕಾರಣದಿಂದ ಪತ್ರಿಕೆಯ ಚಂದಾಹಣವನ್ನು ೧ ರೂ. ಯಿಂದ ೧-೪-೦ಗೆ ಏರಿಸಲಾಯಿತು. ಇಷ್ಟು ವರ್ಷ ಇಳಿಸಿದ ಬೆಲೆಯಲ್ಲಿ ಪತ್ರಿಕೆಯನ್ನು ಪಡೆದು ಸವಿಹತ್ತಿದ ಜನಕ್ಕೆ ಬೆಲೆ ಏರಿಕೆ ರುಚಿಸಲಿಲ್ಲವೇನೋ. ಅಂದಿನಿಂದ (೧೯೧೫) ಚಂದ್ರಿಕೆಯನ್ನು ಮುದ್ದಾಡುತ್ತಿದ್ದವರ ಸಂಖ್ಯೆ ಭರದಿಂದ ಇಳಿಯುತ್ತ ಹೋಯಿತು. ಇದು ಸಾಲದೆಂಬಂತೆ ಗಳಗನಾಥರಿಗೆ ಎಲ್ಲ ರೀತಿಯಿಂದಲೂ ಆಧಾರಸ್ತಂಭದಂತಿದ್ದ ಶೇಷಾಚಲಸಾಧುಗಳು ನಿರ್ಯಾಣ ಹೊಂದಿದರು (೧೯೧೭). ಅದರ ಮರುವರ್ಷವೆ ಗಳಗನಾಥರು ಅಗಡಿಯನ್ನೇ ಬಿಡಬೇಕಾಗಿ ಬಂದದ್ದರಿಂದ, 'ಸದ್ಬೋಧ ಚಂದ್ರಿಕೆಯ' ಮೂಲಕವಾದ ಪತ್ರಿಕೋದ್ಯಮ ಸಾಹಸವನ್ನು ಅವರು ಕೈಬಿಡಬೇಕಾಯಿತು. ಒಂದು ಪತ್ರಿಕೆಯನ್ನು ಬಾಲಿಕೆಯೆಂಬಂತೆ ವ್ಯಕ್ತೀಕರಿಸಿ, ಅವಳಲ್ಲಿ ಪರಕಾಯ ಪ್ರವೇಶ ಮಾಡಿ, ಓದುಗರೊಡನೆ ಜ್ವಲಂತ ಸಂಪರ್ಕವನ್ನು ಬೆಳೆಸಿದ್ದುದು 'ನ ಭೂತೋ ನ ಭವಿಷ್ಯತಿ' ಸಾಲಿಗೆ ಸೇರುವಂತಹದಾಗಿದೆ.

'ಸದ್ಬೋಧ ಚಂದ್ರಿಕೆ'ಯನ್ನು ಹೊರಡಿಸುವಲ್ಲಿ ಗಳಗನಾಥರ ಉದ್ದೇಶ ಒಂದು ಮೇಲ್ಮಟ್ಟದ ಸಾಹಿತ್ಯಿಕ ಪತ್ರಿಕೆಯನ್ನು ತಾನು ಹೊರತರಬೇಕೆಂಬುದಾಗಿರಲಿಲ್ಲ. ಬದಲಾಗಿ, ತಮಗೆ ಅತ್ಯಂತ ಪ್ರಿಯವಾದ ತಮ್ಮ ಧಾರ್ಮಿಕ ಶ್ರದ್ಧೆಗೆ ಅನುಗುಣವಾದ ಪಾಠಶಾಲೆಗೆ ಅದು ಪೋಷಕವಾಗಬೇಕೆಂಬುದೇ ಅವರ ಉದ್ದೇಶವಾಗಿದ್ದಿತು. ಅವರು ಕಾದಂಬರಿ ಲೇಖನಕ್ಕೆ ತೊಡಗಿದ್ದುದಕ್ಕೂ ಇದೇ ಮೂಲಪ್ರೇರಣೆ ಎನ್ನುವುದನ್ನು ಗಮನಿಸಿದ್ದೇವೆ. ಎಂದರೆ ಉತ್ಕೃಷ್ಟ ರೀತಿಯ ಕಾದಂಬರಿ 'ಸದ್ಬೋಧ ಚಂದ್ರಿಕೆ'ಯಲ್ಲಿ ಪ್ರಕಟವಾದರೆ ಪತ್ರಿಕೆಯ ಪ್ರಸಾರ ಹೆಚ್ಚಿ, ಅದರಿಂದ ಬರುವ ಲಾಭಾಂಶವನ್ನು ವೈಧಿಕಧರ್ಮ ಪ್ರಸಾರಕ್ಕೆ ವಿನಿಯೋಗಿಸಲು ಸಾಧ್ಯ ಎಂದವರು ಯೋಚಿಸಿದ್ದರು. ಲೌಕಿಕ ದೃಷ್ಟಿಯಲ್ಲಿ ಅದೊಂದು ಹೊರೆಯಾದರೂ ಅವರಿಗೆ ಅದು ಪುಣ್ಯಸಾಧನೆಯ ವಿಷಯವಾಗಿದ್ದಿತು. ಅವರ ಉದ್ದೇಶ ಏನೇ ಇರಲಿ, ಸ್ವಯಂ ಪ್ರತಿಭಾಶಾಲಿಗಳಾದುದರಿಂದ ಅವರ ಕಾದಂಬರಿಗಳು ಸಾಮಾನ್ಯ ಜನತೆಯ ಮನಸ್ಸನ್ನು ಸೆರೆಹಿಡಿದವು.

೪. 'ಗಳಗನಾಥ ಸುರಸ ಗ್ರಂಥಮಾಲೆ'

ಅವರು ಆನಂದವನ-ಅಗಡಿಯನ್ನು ತ್ಯಜಿಸಿ, ಪತ್ರಿಕೆಯನ್ನೂ ಪಾಠಶಾಲೆಯನ್ನೂ ಬಿಟ್ಟುಕೊಡಬೇಕಾಯಿತಲ್ಲವೆ. ಗಳಗನಾಥರೋ ಛಲವಂತರು. ಮರುತಿಂಗಳಲ್ಲಿಯೇ ಹಾವೇರಿಯಲ್ಲಿ 'ಶ್ರೀ ಶೇಷಾಚಲ ವೇದ ಮತ್ತು ಸಂಸ್ಕೃತ ಪಾಠಶಾಲೆ'ಯನ್ನು ಆರಂಭಿಸಿದರು. ಗಳಗನಾಥರನ್ನು ವಿಶೇಷವಾಗಿ ನೆಚ್ಚಿಕೊಂಡಿದ್ದ ಕೆಲವು ಅಧ್ಯಾಪಕರೂ, ವಿದ್ಯಾರ್ಥಿಗಳೂ ಈ ಹೊಸ ಪಾಠಶಾಲೆಯನ್ನು ಸೇರಿಕೊಂಡರು.

''ವೃಕ್ಷಗಳ ಸಸಿಗಳನ್ನು ಕಿತ್ತು ಹಚ್ಚುವುದರಿಂದ ಅವು ಕಸುವಿನಿಂದ ಬೆಳೆಯುವವು. ಪಾಠಶಾಲಾರೂಪವಾದ ವೃಕ್ಷದ ಹನ್ನೊಂದು ವರ್ಷದ ಸಸಿಯನ್ನು ಆನಂದವನದ ದೂಷಿತ ಪರಿಸ್ಥಿತಿಯಿಂದ ಕಿತ್ತುಕೊಂಡು ಹೋಗಿ... ಹಾವೇರಿಯಲ್ಲಿ ಹಚ್ಚಿಸಿರುವುದರಿಂದ ಅದು ಫಲಿಸುವುದು ಎಂದು ಭಾವಿಸಿರುವೆವು.''

ಗಳಗನಾಥರು ತಮ್ಮ ಗ್ರಂಥವೊಂದರ ಪ್ರಸ್ತಾವನೆಯಲ್ಲಿ ಹೇಳಿದ ಮಾತುಗಳಿವು. ಸಸಿಯನ್ನು ಕಿತ್ತಿ ಹಚ್ಚಿ ಬೆಳೆಸುವುದು ಸಾಧ್ಯ, ಆದರೆ ಅದು ವೃಕ್ಷವೆ ಆಗಿದ್ದಾಗ ಅದನ್ನು ಪುನರುಜ್ಜೀವಿಸುವುದಕ್ಕೆ ಭಗೀರಥ ಪ್ರಯತ್ನವೇ ಬೇಕು. ಗಳಗನಾಥರು ಆ ಸಾಹಸಕ್ಕಿಳಿದು ವಿಶ್ವಾಮಿತ್ರನಂತೆ ಪ್ರತಿ-ಸೃಷ್ಟಿಯ ಪಣವನ್ನೇ ತೊಟ್ಟರು. ಅವರು ಸ್ವತಃ ಯಾವ ಪಾಠವನ್ನೂ ಹೇಳುತ್ತಿರಲಿಲ್ಲ. ಆದರೆ ಪಾಠಶಾಲೆಯ ಸಂಚಾಲನದ ಸಂಪೂರ್ಣ ಹೊಣೆ ಅವರದ್ದಾಗಿತ್ತು. ಬೆಳಿಗ್ಗೆ ನಾಲ್ಕು ಗಂಟೆಗೆ ವಿದ್ಯಾರ್ಥಿಗಳನ್ನು ಎಚ್ಚರಿಸುವುದರಿಂದ ಹಿಡಿದು, ಇಡೀ ದಿನ ಬಿಡುವಿಲ್ಲದಂತೆ ಅವರು ಕಾರ್ಯಪ್ರವೃತ್ತರಾಗಿರುತ್ತಿದ್ದರು. ಪಾಠಶಾಲೆಗೆ ಸಂಬಂಧಿಸಿದಂತೆ ಅದರ ಪ್ರತಿಯೊಂದು ಕೆಲಸದಲ್ಲಿಯೂ ಅವರ ಗಮನವಿರುತ್ತಿತ್ತು. ಆಗಾಗ ಅಧ್ಯಾಪಕರ ಪ್ರವಚನವನ್ನು ತಾವೂ ತುಸು ಹೊತ್ತು ಆಲಿಸುತ್ತಿದ್ದರು. ಮಧ್ಯೆ ಪ್ರಶ್ನೆಗಳನ್ನು ಕೇಳಿ ಚರ್ಚೆ ಮಾಡಿದರೆಂದರೆ ವಿದ್ಯಾರ್ಥಿಗಳಿಗೂ ಅದರ ಪ್ರಯೋಜನ ಒದಗುತ್ತಿತ್ತು. ಈ ಮಧ್ಯೆ ಪತ್ರವ್ಯವಹಾರ, ಜನರ ಭೇಟಿ, ಪ್ರೂಫ್ ತಿದ್ದುವುದು ಮತ್ತು ಸ್ವಂತದ ಲೇಖನ ಕಾರ್ಯ.

ಮಧ್ಯಾಹ್ನ ಹಾಗೂ ಇತರ ಬಿಡುವಿನ ವೇಳೆಯಲ್ಲಿ ತಾವು ಬರೆಯುತ್ತಿದ್ದ ಕಾದಂಬರಿಯ ರಸವತ್ತಾದ ಭಾಗಗಳನ್ನು ವಿದ್ಯಾರ್ಥಿಗಳಿಗೂ ಓದಿ ಹೇಳುತ್ತಿದ್ದರು. ವಿಶೇಷತಃ ವೀರಾವೇಶದ ಪ್ರಸಂಗಗಳನ್ನು ವರ್ಣಿಸಿದಾಗ, ಹುಡುಗರಲ್ಲಿ ಆವೇಶ ಉಕ್ಕಿ

ಹರಿಯುತ್ತಿದ್ದುದನ್ನು ಗಮನಿಸುತ್ತ, ತಮ್ಮ ಲೇಖನದ ಪರಿಣಾಮ ಹೀಗೆಯೇ ವಿಶಾಲ ವಾಚಕವೃಂದದ ಮೇಲೆ ಆಗಬಲ್ಲುದೆಂದು ನೆನೆದು ಕೃತಾರ್ಥ ಭಾವನೆಯನ್ನು ತಾಳುತ್ತಿದ್ದರು.

ಪಾಠಶಾಲೆಗೆ ಪೋಷಣೆ ನೀಡಬೇಕಾದ ಗ್ರಂಥೋದ್ಯಮಕ್ಕೆ ಅವರ ಹೆಚ್ಚಿನ ಸಮಯ ವಿನಿಯೋಗವಾಗಲೇಬೇಕಿತ್ತು. 'ಗಳಗನಾಥ ಸುರಸ ಗ್ರಂಥಮಾಲೆ'ಯ ಹೆಸರಿನಿಂದ ಒಂದೊಂದಾಗಿ ಕೃತಿಗಳನ್ನು ಹೊರತರತೊಡಗಿದರು. ಇತರ ಕೆಲವರಿಗೂ ಬರೆಯಲು ಪ್ರೇರೇಪಿಸಿದರು. ಅವನ್ನು ಪ್ರಕಟಿಸಿದರು. (ಉದಾ. ಜಂತಲಿ ಮಹಾದೇವ ಶಾಸ್ತ್ರಿಗಳ 'ಬಂಧವಿಮೋಚನ') ಹಾಗೂ 'ಸದ್ಬೋಧ ಚಂದ್ರಿಕೆ'ಯಲ್ಲಿ ಬಿಡಿ ಲೇಖನ ರೂಪವಾಗಿದ್ದವುಗಳನ್ನು ಮುಂದುವರಿಸಿ ಇಲ್ಲವೆ ವಿಸ್ತರಿಸಿ ಈ ಗ್ರಂಥಮಾಲೆಯ ಪ್ರಕಟನೆಗಳನ್ನಾಗಿ ಮಾಡಿದರು. ಪ್ರತಿಯೊಂದರ ಮುದ್ರಣ ಐದು ಸಾವಿರ ಪ್ರತಿಗಳದ್ದು. ಆಗಿನ ಕಾಲದಲ್ಲಿ ಬಹು ದೊಡ್ಡ ಮೊತ್ತದ ಪುಸ್ತಕ ಮುದ್ರಣವದು. ಅದೂ ತಮ್ಮದೆ ಆದ ಪ್ರೆಸ್ ಇಲ್ಲದಿರುವಾಗ, ಜಿಲ್ಲಾ ಸ್ಥಳವಾದ ಧಾರವಾಡಕ್ಕೆ ಹೋಗಿ ಮುದ್ರಿಸಿಕೊಂಡು ಬರಬೇಕು. ಹಾವೇರಿಯಂಥ ಸಣ್ಣ ಊರಿನಲ್ಲಿದ್ದುಕೊಂಡು ಅವುಗಳ ಮಾರಾಟದ ವ್ಯವಸ್ಥೆಯಾಗಬೇಕು. ಹಾಗಿದ್ದರೂ ಅಲ್ಲಿಯ ವಾಸ್ತವ್ಯದ ಕೆಲವೇ ವರ್ಷಗಳಲ್ಲಿ ಮೂವತ್ತಕ್ಕೆ ಮೇಲ್ಪಟ್ಟು ಸಣ್ಣ-ದೊಡ್ಡ ಕೃತಿಗಳನ್ನು ಅವರು ಹೊರತಂದುದು ಅವರ ಕಾರ್ಯಸಾಮರ್ಥ್ಯದ ವೇಗವನ್ನು ಸೂಚಿಸುತ್ತದೆ.

ಇತ್ತ 'ಸದ್ಬೋಧ ಚಂದ್ರಿಕೆ' ಅವರ ಕೈಬಿಟ್ಟಿತಲ್ಲವೆ. ಅದಕ್ಕೆ ಪ್ರತಿಯಾಗಿ 'ಸದ್ಗುರು' ಎಂಬ ಪತ್ರಿಕೆಯನ್ನು ಆರಂಭಿಸಿದರು. 'ಸದ್ಗುರು' ಹೌದು, ತಮ್ಮ ಸಾಧನೆ-ಶ್ರೇಯಸ್ಸುಗಳಿಗೆಲ್ಲ ಗುರುಗಳಾದ ಶ್ರೀ ಶೇಷಾಚಲರೇ ಕಾರಣರೆಂದು ಪ್ರತಿಕ್ಷಣವೂ ನೆನೆಯುತ್ತಿದ್ದರು. ಆಗಿನ ಅವರ ಗಳಿಕೆ ಚೆನ್ನಾಗಿದ್ದಿತು. ಆದ್ದರಿಂದ ತಮ್ಮದೇ ಆದ ಪ್ರೆಸ್ ಸ್ಥಾಪಿಸಿದರು. ಅಲ್ಲಿಂದ ಅವರ ಹೊಸ ಬರವಣಿಗೆ ಮತ್ತು ಹಿಂದಿನ ಕೃತಿಗಳ ಮರುಮುದ್ರಣ ಇವು ಭರದಿಂದ ಸಾಗಿದವು. ಹೀಗೆ ಆನಂದವನದಲ್ಲಿ ನಡೆಯುತ್ತಿದ್ದ ಗ್ರಂಥಲೇಖನ, ಪತ್ರಿಕೆ, ಪ್ರೆಸ್, ಪಾಠಶಾಲೆ, ಗೋಶಾಲೆ, ಅತಿಥಿಸೇವೆ ಎಲ್ಲವೂ ಕೇವಲ ಒಂದೆರಡು ವರ್ಷಗಳಲ್ಲಿಯೇ ಸೃಷ್ಟಿಯಾದುವಲ್ಲದೆ ಅವರ ಅದಮ್ಯವಾದ ಕಾರ್ಯೋತ್ಸಾಹ, ಅವ್ಯಾಹತವಾದ ಪರಿಶ್ರಮಗಳಿಂದಾಗಿ ಊರ್ಜಿತ ಸ್ಥಿತಿಯನ್ನು ಹೊಂದಿದವು.

ಕಾದಂಬರಿ ಮಾತ್ರವಲ್ಲದೆ ಲೌಕಿಕ ಹಾಗೂ ಧಾರ್ಮಿಕ ವಿಷಯಗಳ ಮೇಲಿನ ಬಗೆಬಗೆಯ ಬರಹ ಈ ನಾಲ್ಕೈದು ವರ್ಷಗಳ ಒಂದು ಅವಿಭಾಜ್ಯ ಉಪಕ್ರಮವಾಗಿದ್ದಿತು. ಅವುಗಳ ಹಿಂದೆ, ಮನುಷ್ಯನ ಬದುಕು ಹಸನಾಗಿರಬೇಕು ಎಂಬ

ಕಳಕಳಿ ಉದ್ದಕ್ಕೂ ಒಡೆದು ತೋರುವಂತಿದ್ದಿತು. 'ಸದ್ಬೋಧ ಚಂದ್ರಿಕೆ'ಯಲ್ಲಿ 'ಗೃಹಶಿಕ್ಷಣ' 'ದುಡ್ಡು' ಮೊದಲಾದ ವಿಷಯಗಳ ಮೇಲೆ ಸ್ಫುಟಲೇಖನಗಳನ್ನು ಬರೆದಿದ್ದರು. ಇವು ಒಂದೊಂದೂ ಪರಿಪೂರ್ಣವಾದ, ಅಥವಾ ಸುದೀರ್ಘ ಬರಹಗಳು. ಅವನ್ನೆಲ್ಲ ಸೇರಿಸಿ 'ಸುಂದರ ಲೇಖಸಮುಚ್ಚಯ' ಎಂಬ ಸಂಕಲನವನ್ನು ಹೊರತಂದರು.

ಜೊತೆಗೆ ಸ್ತ್ರೀಯರ ಕುಟುಂಬ ಜೀವನದ ಬಗ್ಗೆಯೂ ಅವರು ಸಾಕಷ್ಟು ಚಿಂತನೆ ಮಾಡಿದ್ದರ ಫಲವಾಗಿ 'ದಾಂಪತ್ಯ', 'ಕುಟುಂಬ' ಪುಸ್ತಕಗಳು ಬೆಳಕನ್ನು ಕಂಡವು. ಈ ದಿಕ್ಕಿನಲ್ಲಿಯ ಇನ್ನೊಂದು ಗ್ರಂಥವೆಂದರೆ 'ಭಗವತಿ ಕಾತ್ಯಾಯಿನಿ'. ''ಕನ್ನಡದಲ್ಲಿ ಎಲ್ಲ ಬಗೆಯ ಪುಸ್ತಕಗಳಿಗೆ ಕೊರತೆಯಿರುವಾಗ ಸ್ತ್ರೀಯರಿಗೆ (ಮಾತ್ರ) ತಕ್ಕ ಪುಸ್ತಕಗಳ ಕೊರೆತೆಯಿರುವುದೆಂದು ಬರೆಯುವುದು ಅಪ್ರಾಸಂಗಿಕವೇ ಸರಿ. ಈ ಕೊರತೆಯನ್ನು ಅಂಶತಃ ದೂರ ಮಾಡುವ ಉದ್ದೇಶದಿಂದ ನಾವು ಈ ಪುಸ್ತಕವನ್ನು ಬಹು ಆಸೆಯಿಂದ ಬರೆದಿರುವೆವು'' ಎಂದಿದ್ದಾರೆ. ಇದರ ರಚನೆಯಲ್ಲಿ ಮರಾಠಿಯಲ್ಲಿಯ 'ಯಾಜ್ಞವಲ್ಕ್ಯಚರಿತೆ' (ಸಾಂಬದೀಕ್ಷಿತ ಕಾರೇಕರ ವಿರಚಿತ) ಮತ್ತು 'ಮೈತ್ರೇಯಿ' ಎಂಬ ಮರಾಠೀ ಕೃತಿಗಳು ಸಾಕಷ್ಟು ಆಸರೆಯನ್ನೊದಗಿಸಿವೆ. ಆದರೂ ಕಾತ್ಯಾಯಿನಿ, ಮೈತ್ರೇಯಿ, ಕಾತ್ಯಾಯಿನಿ, ಯಾಜ್ಞವಲ್ಕ್ಯ, ಇವರ ನಡುವಿನ ಗೃಹಧರ್ಮಸೂತ್ರ ರೂಪವಾದ ಸಂಭಾಷಣೆಗಳು ಹಾಗೂ 'ವರಪ್ರದಾನ' ಎಂಬ ನಾಲ್ಕನೇ ಪ್ರಕರಣವು ಗಳಗನಾಥರ ಸ್ವಂತದ ವಿಚಾರ ಸರಣಿಯನ್ನೇ ಹೊಂದಿವೆ. ಇದೇ ಪುಸ್ತಕ ಮುಂದೆ 'ಸದ್ಗುಣ ಸಂಭ್ರಮ'ವೆಂಬ ಹೆಸರಿನಿಂದ ಪುನಃ ಮುದ್ರಣವಾಯಿತು.

'ಮಗಳಿಗೆ ತಂದೆಯ ಓಲೆಗಳು' ಜವಾಹರಲಾಲ ನೆಹ್ರೂ ತಮ್ಮ ಮಗಳಿಗೆ ಬರೆದ ಪತ್ರಗಳು ನಮಗೆ ಪರಿಚಿತ. ಗಳಗನಾಥರು ತಮ್ಮ ಹಿರಿಯ ಮಗಳ ಗೃಹಿಣೀ ಜೀವನ ಸುಖಮಯವಾಗಿರಬೇಕೆಂಬ ಉದ್ದೇಶದಿಂದ ಮಗಳನ್ನು ಸಂಬೋಧಿಸಿ 'ಸದ್ಗುರು' ಪತ್ರಿಕೆಯಲ್ಲಿ ಲೇಖನ ಮಾಲೆಯನ್ನು ಆರಂಭಿಸಿದರು. ಅದುವೆ 'ಕನ್ಯಾಶಿಕ್ಷಕ' (ಸು. ೧೯೨೦-೨೧).

ಮುಂದೆ ಕೆಲವು ಕಾಲದ ನಂತರ ಅವರ ಎರಡನೆಯ ಮಗಳ ಮದುವೆಯೂ ನೆರವೇರಿತು. (ಗಳಗನಾಥರಿಗೆ ಗಂಡು ಮಕ್ಕಳಿರಲಿಲ್ಲ) ಇಬ್ಬರೂ ಹೆಣ್ಣುಮಕ್ಕಳ ಮೇಲೆ ಅವರಿಗೆ ಅತೀವ ಮಮತೆ. ಹಾಗೆಂದೋ ಏನೋ, ಅಳಿಯಂದಿರು 'ಮನೆಯಳಿಯ'ರಾಗಿಬಿಟ್ಟರು. ಪರಿಣಾಮವೆಂದರೆ ಅವರ ಸಮಸ್ತ ಕುಟುಂಬವು

ಗ್ರಂಥೋದ್ಯಮದಲ್ಲಿ ಪಾಲ್ಗೊಂಡಿತು. ಅಡುಗೆ ಸೌಟನ್ನು ಹಿಡಿದ ಕೈ ಅಚ್ಚಿನ ಮೊಳೆಗಳನ್ನೂ ಜೋಡಿಸುವಂತಾಯಿತು.

ಇನ್ನೀಗ ಅವರ ಆಗಿನ ಕಾದಂಬರಿಗಳನ್ನು ಗಮನಿಸೋಣ. ದ್ವಿತೀಯ ಹಂತದ ಎಂದರೆ ಹಾವೇರಿಯಲ್ಲಿ ಇದ್ದಾಗಿನ ಕಾಲದಲ್ಲಿ ಅವರು ಮತ್ತೊಮ್ಮೆ ಮರಾಠರ ಕಥಾನಕಗಳನ್ನು ಎತ್ತಿಕೊಂಡರು. ಹಿಂದಿನ ಎರಡು ಮರಾಠ ಚರಿತ್ರೆಯ ಕಾದಂಬರಿಗಳಾದ 'ಈಶ್ವರೀಸೂತ್ರ' ಹಾಗೂ 'ಕಮಲಕುಮಾರಿ' ಇವುಗಳಲ್ಲಿ ಶಿವಾಜಿಯು ತೋರಣಗಡವನ್ನು, ತಾನಾಜಿಯು ಕೊಂಡಾಣಾದುರ್ಗವನ್ನು ವಶಪಡಿಸಿಕೊಂಡ ಕಥೆಯಿತ್ತು. ೧೯೧೮ರಲ್ಲಿ ಹಾವೇರಿಯ ವಾಸ್ತವ್ಯದಲ್ಲಿ ಬರೆಯಲಾದ 'ಮರಾಠರ ಅಭ್ಯುದಯ'ದಲ್ಲಿ ಶಿವಾಜಿಯು ಅಫಝುಲ್ಖಾನನ ವಧೆ ಮಾಡಿದ ಮುಖ್ಯ ಪ್ರಸಂಗವಿದೆ. ಜೊತೆಗೆ ಶಿವಾಜಿಯನ್ನೆ ಕೊಲೆ ಮಾಡಬಯಸಿದ್ದ ತಾರಾ ಎಂಬವಳ ಕಥಾನಕವೂ ತಳಕುಗೊಂಡಿದೆ.

ಮರುವರ್ಷ ಹೊರಬಂದ 'ಛತ್ರಪತಿ' ಕಾದಂಬರಿಯಲ್ಲಿ ಔರಂಗಜೇಬನು ಶಿವಾಜಿಯನ್ನು ಬಗ್ಗುಬಡಿಯಲು ದಿಲೇರ್‌ಖಾನ ಮತ್ತು ಜಯಸಿಂಗರನ್ನು ದಕ್ಷಿಣಕ್ಕೆ ಕಳಿಸಿದಾಗ, ಶಿವಾಜಿಯು ತನ್ನ ಪ್ರಮುಖ ದುರ್ಗಗಳನ್ನೆಲ್ಲ ಕಳೆದುಕೊಂಡು ಆಗ್ರಾಕ್ಕೆ ಹೋದದ್ದು ಅಲ್ಲಿಯ ಸ್ಥಾನಬದ್ಧತೆಯಿಂದ ಪಾರಾಗಿ ಬಂದು, ಪುನಃ ಎಲ್ಲ ಕೋಟೆಗಳನ್ನು ಮರಳಿ ಪಡೆದು ಪಟ್ಟಾಭಿಷಿಕ್ತ ಛತ್ರಪತಿಯಾದ ಕಥನ ಇದರಲ್ಲಿದೆ.

ಮುಂದಿನ ಮೂರು ಕಾದಂಬರಿಗಳಾದರೂ ಶಿವಾಜಿಗೆ ಸಂಬಂಧಪಟ್ಟವುಗಳೇ. 'ಗೃಹಕಲಹ'ದಲ್ಲಿ (೧೯೨೧) ಶಿವಾಜಿಯು ಬದುಕಿದ್ದಾಗಲೇ ಅವನ ಉತ್ತರಾಧಿಕಾರಿ ಯಾರೆಂಬುದರ ಒಳಜಗಳ ನಡೆದುದರ ಚಿತ್ರಣ ಬಂದಿದೆ. ಮೂಲ ಕಥೆ ಲ.ನಾ. ಜೋಶಿಯವರದು ('ಅಸ್ತೋದಯ'). ಹಾಗೆಂದು ಇದು ಮೂಲ ಕಾದಂಬರಿಯ ಭಾಷಾಂತರವಾಗಲೀ, ರೂಪಾಂತರವಾಗಲೀ ಇರುವುದಿಲ್ಲ. ಕಾದಂಬರಿಯು ಹೆಚ್ಚು ಬೋಧಪ್ರದವೂ ಮನೋರಂಜಕವೂ ಆಗುವುದಕ್ಕಾಗಿ ವಾಡಿಕೆಯ ಪದ್ಧತಿಯಂತೆ ಕುಗ್ಗಿಸುವಲ್ಲಿ ಕುಗ್ಗಿಸಿ, ಹಿಗ್ಗಿಸುವಲ್ಲಿ ಹಿಗ್ಗಿಸಿ, ಹೊಸ ವಿಷಯ ಸೇರಿಸಿ ಹೊಸ ಪಾಕವನ್ನು ತಾವು ಸಿದ್ಧಮಾಡಿದ್ದಾಗಿ ಹೇಳಿದ್ದಾರೆ.

ಹೀಗೆ ಅವರು ತಮ್ಮ ಕಾದಂಬರಿಗಳ ವಸ್ತುವನ್ನು ವಿವಿಧ ಮೂಲಗಳಿಂದ ತೆಗೆದುಕೊಂಡರೂ, ಅದನ್ನು ಬಳಸಿಕೊಳ್ಳುವಲ್ಲಿ ಇದೇ ರೀತಿ ಸ್ವೋಪಜ್ಞತೆಯನ್ನು ತೋರಿದ್ದಾರೆ.

ಈ ಕಾದಂಬರಿಯನ್ನು ರಚಿಸುವಲ್ಲಿ, ಅವರ ಕಾಲದ ಯಾವುದೋ ಒಳಜಗಳ ಅವರ ಮನದಲ್ಲಿ ತುಡಿಯುತ್ತಿದ್ದಿತು. ಪ್ರಸ್ತಾವನೆಯಲ್ಲಿ ಅದರ ಸುಳಿವು ಇದೆ; ದೇಶಬಾಂಧವರೆನಿಸಿಕೊಳ್ಳುವ ನಮ್ಮಲ್ಲಿ ಕಲಹವಿರುವುದು ಸರ್ವಥಾ ಹಿತವಲ್ಲ, 'ಆದ್ದರಿಂದ ನಾವು ಬ್ರಾಹ್ಮಣ-ಬ್ರಾಹ್ಮಣೇತರ ಶುಷ್ಕ ಪಂಗಡ ಮಾಡಿಕೊಂಡು, ಪರಸ್ಪರ ಕಲಹ ಬೆಳೆಸಿ ಆತ್ಮಘಾತದ ಹಾದಿಯನ್ನು ಹಿಡಿಯಬಾರದೆಂದು ನಾವು ಇಲ್ಲಿಯೂ ಹೇಳಿಕೊಳ್ಳುವೆವು. ನಮ್ಮಲ್ಲಿಯ ತಪ್ಪುಗಳನ್ನು ತಿದ್ದಲಿಕ್ಕೆ ಮಂದಿಯೇಕೆ? ನಾವೇ ನಮ್ಮನಮ್ಮೊಳಗೆ ಕಿವಿಹಿಂಡಿ ತಿದ್ದಿಕೊಂಡರಾಯಿತು.'

'ಗೃಹಕುಲ'ದಲ್ಲಿ ಬಂದಿದ್ದ ಸಂಭಾಜಿಯ ಕಥೆಯು 'ಶಿವಪ್ರಭುವಿನ ಪುಣ್ಯ' ಕಾದಂಬರಿಯಲ್ಲಿ ಮುಂದುವರೆದಿದೆ. ಔರಂಗಜೇಬನು ಮರಾಠಾ ರಾಜ್ಯವೃಕ್ಷವನ್ನು ನಿರ್ಮೂಲ ಮಾಡಬೇಕೆಂದು ಅದೆಷ್ಟು ಸಾಹಸಪಟ್ಟರೂ ಶಿವಪ್ರಭುವಿನ ಪುಣ್ಯ ಅದನ್ನು ರಕ್ಷಿಸಿತು ಎಂಬುದು ಇದರ ತಿರುಳು.

ಇದೇ ಅವಧಿಯಲ್ಲಿ (೧೯೧೯) ಬರೆದ 'ಕುರುಕ್ಷೇತ್ರ'ವು ಪೇಶ್ವೆಯರ ಕಾಲದ ಕಥಾನಕವಾಗಿದೆ. ಪೇಶ್ವೆಯರು ಅತಿ ಗರ್ವದಿಂದ ಮೆರೆದು, ಅನಂತರ ಪಾಣಿಪತ ಯುದ್ಧದಲ್ಲಿ ಅದೆಂತು ಮಣ್ಣುಮುಕ್ಕಿದರೆಂಬ ಆವಿದ್ಧ ಸನ್ನಿವೇಶ ಇಲ್ಲಿದೆ. ಈ ಕೃತಿಗೂ ಮರಾಠೀ ಕಾದಂಬರಿಯೊಂದರ ಆಧಾರವಿದೆ. (ನಾ.ವಿ. ಬಾಪಟ ವಿರಚಿತ 'ಪಾಣಿಪತಚೀ ಮಾಹಿಮ') ಅತಿ ಗರ್ವವು ಅನರ್ಥಕಾರಿ ಎಂಬುದಕ್ಕೆ ಪ್ರಸ್ತಾವನೆಯಲ್ಲಿ ಇನ್ನೂ ಹಲವು ರಾಜರ ದೃಷ್ಟಾಂತಗಳನ್ನು ಕೊಟ್ಟಿದ್ದಾರೆ.

ಹೀಗೆ ಮರಾಠರ ಇತಿಹಾಸಕ್ಕೆ ಸಂಬಂಧಪಟ್ಟ ಕಾದಂಬರಿಗಳು ಒಂದರ ಮೇಲೊಂದು ಬಂದುವಷ್ಟೆ. ಕರ್ನಾಟಕದ ಚರಿತ್ರೆಯನ್ನು ಆಧರಿಸಿ ತಾವು ಬರೆದಿಲ್ಲವಲ್ಲ ಎಂಬ ಯೋಚನೆ ಮೂಡಿತು. ಕರ್ನಾಟಕದಲ್ಲಿ ಶೂರರು, ಧೀರರು ಆಗಿ ಹೋದವರಿಲ್ಲವೇ? ಎಂದು ಕೇಳಿಕೊಂಡು ತಾವೇ ಉತ್ತರಿಸಿದ್ದಾರೆ.

''ಕನ್ನಡಿಗರ ಅಭಿಮಾನವನ್ನು ಹೆಚ್ಚಿಸುವಂಥ ಕನ್ನಡ ವೀರರ ಕಾದಂಬರಿಗಳು, ಕನ್ನಡ ಸತ್ಪುರುಷರ ಚರಿತ್ರೆಗಳು... ಮೊದಲಾದ ವಿಷಯಗಳನ್ನು ಕುರಿತು ಬರೆದ ಗ್ರಂಥಗಳ ಕೊರತೆಯು ವಿಶೇಷವಾಗಿರುವುದೆಂಬುದನ್ನು ಬಲ್ಲೆವು. ಚಾಲುಕ್ಯರು ಕದಂಬರು, ಹೊಯ್ಸಳರು, ವಿಜಯನಗರದ ಅರಸರು, ಮೊದಲಾದವರ ದಿವ್ಯ ಚಾರಿತ್ರ್ಯಗಳಾದರೂ ನಮ್ಮ ಕಣ್ಣಮುಂದೆ ಕಟ್ಟಿರುತ್ತವೆ. ಆದರೆ ಬಹು ದಿವಸದ ಹಿಂದಿನ ಆ ನಮ್ಮ ಪೂರ್ವಜರ ದಿವ್ಯ ಚಾರಿತ್ರ್ಯಗಳ ಮೇಲೆ ರಜಪೂತರು ಮುಸಲ್ಮಾನರ,

ಮರಾಠರ ದಿವ್ಯ ಚಾರಿತ್ರ್ಯಗಳ ರಾಶಿಯೇ ಬಿದ್ದು ನಮ್ಮವರ ಆ ದಿವ್ಯಚಾರಿತ್ರ್ಯಗಳು ಮರೆಯಾಗಿವೆ. ಇನ್ನು ಮೇಲೆ ಪ್ರಸಿದ್ಧ ಕನ್ನಡ ರಾಜರ ವಂಶಗಳಲ್ಲಿಯ ಉಜ್ವಲ ಪ್ರಸಂಗಗಳನ್ನು ಕುರಿತು ಕಾದಂಬರಿಗಳನ್ನು ಬರೆಯಬೇಕೆಂದು ಸಂಕಲ್ಪ ಮಾಡಿರುವೆವು. ಈ ಕೆಲಸಕ್ಕೆ ಸಾಧನ ಸಾಮಗ್ರಿಗಳು ಕಡಿಮೆಯಾಗಿರುವುದರಿಂದ ಸಂಭಾಳಿಸಿ ನಮ್ಮಿಂದ ಕೆಲಸ ಮಾಡಿಸಿಕೊಳ್ಳಬೇಕು.''

'ಮರಾಠರ ಅಭ್ಯುದಯ' ಕಾದಂಬರಿಯ ಪ್ರಸ್ತಾವನೆಯಲ್ಲಿ ಬರೆದ ಮಾತುಗಳಿವು. ಆ ಮುಂದೆ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಸಂಬಂಧಿಸಿದ, ವಿದ್ಯಾರಣ್ಯರ ಚರಿತ್ರೆಯನ್ನೊಳಗೊಂಡಿರುವ ಕಾದಂಬರಿಯನ್ನು ಬರೆಯಲುದ್ಯುಕ್ತರಾದರು. ಸಾಮಾನ್ಯವಾಗಿ ಅವರ ಕಾದಂಬರಿಗಳು ೨೫೦-೩೫೦ ಪುಟಗಳನ್ನು ಪರಿಮಿತಿಯವಾಗಿದ್ದು ಈ ಕಾದಂಬರಿ 'ಮಾಧವ ಕರುಣಾವಿಲಾಸವು' ಮಾತ್ರ ೭೭೦ ಪುಟಗಳನ್ನು ದಾಟಿದೆ. ಉಳಿದ ಕಾದಂಬರಿಗಳ ಲೇಖನವು ತಿಂಗಳೊಪ್ಪತ್ತಿನಲ್ಲಿ ಮುಗಿದಿದ್ದರೆ, ಇದು ಒಂದೆರಡು ವರ್ಷಗಳನ್ನೇ ತೆಗೆದುಕೊಂಡು ೧೯೩೨ರಲ್ಲಿ ಹೊರಬಂದಿತು.

''ಪ್ರಚಂಡವಾದ ಸುರಸ ತಾತ್ವಿಕ ಐತಿಹಾಸಿಕ ಕಾದಂಬರಿಯು ಮುಗಿದದ್ದರಿಂದ ತನ್ನ ತಲೆಯ ಮೇಲಿನದೊಂದು ದೊಡ್ಡ ಭಾರವು ಇಳಿದಂತಾಗಿ ನನಗೆ ಹಿಡಿಸಲಾರದಷ್ಟು ಸಂತೋಷವಾಗಿರುವುದು, ನನ್ನ ಲೇಖನ ವ್ಯವಸಾಯದ ೧೮ ವರ್ಷಗಳ ಅವಧಿಯಲ್ಲಿ ಇಷ್ಟು ಗೌರವದ ಹಾಗೂ ಇಷ್ಟು ದೊಡ್ಡದಾದ ಮತ್ತು ಸ್ವತಂತ್ರ ವಿಚಾರದ ಪುಸ್ತಕವನ್ನು ನಾನು ಬರೆಯಲೇ ಇಲ್ಲ''

ಈ ಕಾದಂಬರಿಯ ಮೂಲಕ ಕನ್ನಡಿಗರ ಇತಿಹಾಸವನ್ನು ಕಥನಿಸುವ ಅವರ ಬಹು ದಿನದ ಹಂಬಲ ಕೈಗೂಡಿದ್ದರಿಂದ ಅವರಲ್ಲಿ ಕೃತಾರ್ಥತೆಯ ಭಾವನೆ ಮೂಡಿದ್ದು ಸಹಜ. ಅದಕ್ಕಿಂತ ಮಿಗಿಲಾಗಿ, ತಮ್ಮ ಧಾರ್ಮಿಕ ವಿಚಾರಗಳನ್ನು ವ್ಯಕ್ತಪಡಿಸಲು ಇದೊಂದು ಸಂದರ್ಭವನ್ನು ವಿಶೇಷವಾಗಿ ಅವರು ಬಳಸಿಕೊಂಡರು.

ಈ ಕಾದಂಬರಿಯ ೩೮ನೆಯ ಪ್ರಕರಣವು 'ಅಸಹಯೋಗ'ವನ್ನು ಕುರಿತದ್ದು. ಅದರ ಒಂದು ಅಂಶದ ವಿವರಣೆಗಾಗಿ ಭಾಗವತ ಪುರಾಣವನ್ನು ಅವಲಂಬಿಸಬೇಕಾಗಿ ಬಂದಿತಂತೆ. ಈ ಪುರಾಣವನ್ನೇಕೆ ಕನ್ನಡಿಗರಿಗಾಗಿ ಒದಗಿಸಬಾರದು ಎಂದು ಅವರಿಗೆ ಅನಿಸಿತು. 'ಭಾಗವತಾಮೃತ' ಗ್ರಂಥವನ್ನು ಬರೆಯತೊಡಗಿದರು. ಅದೆಂಥ ಶ್ರದ್ಧೆ! ಪ್ರತಿದಿನ ಶುಚಿರ್ಭೂತರಾಗಿಯೇ ಬರೆಯುವುದಕ್ಕೆ ಆರಂಭ. ಒಂದೊಂದು ಸ್ಕಂದ

ಮುಗಿಯುತ್ತಲೂ ಆ ಸ್ಕಂದಗಳ ಸಂಖ್ಯೆಯಷ್ಟು ಬ್ರಾಹ್ಮಣರಿಗೆ ಭೋಜನ. ಈ ಬಗೆಯ ಧಾರ್ಮಿಕ ನಿಷ್ಠೆಯು ಅದರ ಬರವಣಿಗೆಯನ್ನು ದ್ರುತಗೊಳಿಸಿದ್ದರಿಂದ, ಆರುನೂರು ಪುಟಗಳಷ್ಟು ಬರಹವು ಬಲು ಬೇಗ ಮುಗಿಯುವಂತಾಯ್ತು. ಮಾತ್ರವಲ್ಲ, ಅದರ ಮುದ್ರಣ ಕಾರ್ಯವನ್ನು ಸಹ ನಾಲ್ಕೇ ತಿಂಗಳಲ್ಲಿ ಮುಗಿಸಿಬಿಟ್ಟರು (೧೯೨೨). ಇದರ ರಚನೆಯಲ್ಲಿ ಮೂಲ ಭಾಗವತವಂತೂ ಸರಿಯೇ, ಜೊತೆಗೆ ಚಿಪಳೂಣಕರರ ಮರಾಠೀ ಅನುವಾದವನ್ನೂ ಗಮನಿಸಿದ್ದರು. ಯಾವುದನ್ನೂ ಇದ್ದುದಿದ್ದಂತೆ ಅನುವಾದಿಸುವ ಜಾಯಮಾನ ಅವರದಲ್ಲ ಎಂಬುದನ್ನು ನೋಡಿದ್ದೇವೆ. ಆದ್ದರಿಂದ ಕಥಾಂಶವನ್ನು ಆಯ್ದುಕೊಳ್ಳುವಲ್ಲಿ ಮತ್ತು ಧಾರ್ಮಿಕ ವಿಚಾರಗಳನ್ನು ಮಂಡಿಸುವಲ್ಲಿ ಅವರು ಇಲ್ಲಿಯೂ ಸ್ವೋಪಜ್ಞತೆಯನ್ನು ಮೆರೆಸಿದ್ದಾರೆ. 'ಸಂದಿಗೊಂದಿಗಳಲ್ಲಿದ್ದ ಉತ್ತಮೋತ್ತಮ ವಿಚಾರಗಳನ್ನು ಹುಡುಕಿ ಅತ್ಯಂತ ಕಾರ್ಪಣ್ಯದಿಂದ' ಭಾಗವತದ ಸಾರವನ್ನು ಒದಗಿಸಿದ್ದುದಾಗಿ ಪೀಠಿಕೆಯಲ್ಲಿ ಹೇಳಿಕೊಂಡಿದ್ದಾರೆ.

ವಿಷ್ಣು ಸರ್ವೋತ್ತಮತ್ವವನ್ನು ಸಾರುವ ಭಾಗವತವನ್ನು ಇಷ್ಟೊಂದು ಶ್ರದ್ಧೆಯಿಂದ ಬರೆದು ಮುಗಿಸಿದ ಮರುವರ್ಷವೆ 'ಶೈವ ಸುಧಾರ್ಣವ'ವನ್ನು ಹೊರತಂದದ್ದು ಸೋಜಿಗವೆನಿಸಬಹುದು. ಗಳಗನಾಥರಿಗೆ ಪುರಾಣಗಳ ಬಗ್ಗೆ ಸಮಾನ ಭಾವದ ಗೌರವವಿದ್ದಿತು. ಈ ಕುರಿತು ಅವರ ನಿಲುಮೆ ಯಾವ ಕಾಲಕ್ಕೂ ಸ್ಪೃಹನೀಯವಾದದ್ದು:

''ಶಿವ ವಿಷ್ಣ್ವಾದಿ ದೇವತೆಗಳ ಶ್ರೇಷ್ಠತ್ವಕ್ಕೆ ಬಡಿದಾಡುತ್ತ ಶೈವ ಪುರಾಣಗಳನ್ನು ವೈಷ್ಣವರೂ, ವೈಷ್ಣವ ಪುರಾಣಗಳನ್ನು ಶೈವರೂ ನೋಡದೆ ಇರುವರು. ಪತಿವ್ರತಾ ಸ್ತ್ರೀಗೆ ತನ್ನ ಪತಿಯೇ ಅಧಿದೈವವಾಗಿ ತೋರುವಂತೆ, ಶೈವರಿಗೆ ಶಿವನೂ ವೈಷ್ಣವರಿಗೆ ವಿಷ್ಣುವೂ ಅಧಿದೈವಗಳಾಗಿ ತೋರುವುದು ಸ್ವಾಭಾವಿಕವು. ಲೋಕವು ಭಿನ್ನ ರುಚಿಯುಳ್ಳದ್ದಾದ್ದರಿಂದ ಆ ಭಿನ್ನ ರುಚಿಗೆ ತಕ್ಕಂತೆ ಒಬ್ಬ ಪರಮಾತ್ಮನೇ ಹಲವು ನಾಮ-ರೂಪ-ಕ್ರಿಯೆಗಳಿಂದ ಹಲವು ದೇವತೆಗಳಾಗಿ ವರ್ಣಿಸಲ್ಪಟ್ಟಿರುವನೆಂದು ನಾನು ತಿಳಿದಿರುತ್ತೇನೆ. ಮದುವೆಯ ಮದುಮಗನು ದೈವಸ್ವರೂಪನೆಂದು ತಿಳಿದು ಆತನಿಗೆ ಸರ್ವರೂ ಶ್ರೇಷ್ಠತ್ವ ಕೊಟ್ಟು ಮನ್ನಿಸಿ ನಡೆದುಕೊಳ್ಳುವಂತೆ, ಭಕ್ತರನ್ನು, ಮನ್ನಿಸಲು ಯಾವುದೊಂದು ಪುರಾಣದಲ್ಲಿ ಅಗ್ರಗಣ್ಯವಾಗಿ ನಿಂತ ದೇವತೆಗೆ ಉಳಿದ ದೇವತೆಗಳೆಲ್ಲರೂ ಆತನ ಸಹವರ್ತಿಗಳಾಗಿ ನಡೆದುಕೊಂಡಿರುವರು... ಆದ್ದರಿಂದ ಪುರಾಣಗಳೊಳಗಿನ ಕಥೆಗೆ ಮಹತ್ವ ಕೊಡದೇ ಆ ಕಥೆಗಳಿಂದ ಉಂಟಾಗುವ

ಪರಿಣಾಮಕ್ಕೂ ಆ ಪುರಾಣ ರಚನೆಯ ಉದ್ದೇಶಕ್ಕೂ ಲಕ್ಷ್ಯ ಕೊಟ್ಟರೆ ಅವು ಎಲ್ಲರಿಗೂ ಮಾನ್ಯವಾಗುವವು. ವೈಷ್ಣವರು ಶೈವಪುರಾಣಗಳನ್ನು ಓದುವಾಗ ಶಿವನ ಸ್ಥಾನದಲ್ಲಿ ವಿಷ್ಣುವನ್ನು ಕುಳ್ಳಿರಿಸಿದರೆ ತತ್ವದೃಷ್ಟಿಯಿಂದ (ಚರಿತ್ರ ದೃಷ್ಟಿಯಲ್ಲಿ), ಆ ಶೈವ ಪುರಾಣಗಳು ವೈಷ್ಣವ ಪುರಾಣಗಳೇ ಆಗುವವು. ಇದೇ ಮಾತು ಶೈವರಿಗೂ ಹತ್ತುವುದು. ಒಟ್ಟಿಗೆ ಪುರಾಣೋಕ್ತ ಕಥೆಗಳಿಂದ ಹೊರಡುವ ತತ್ವಗಳೂ ದೇವತೆಗಳ ಉಪಾಸನೆಯಿಂದುಂಟಾಗುವ ಭಕ್ತಿ-ಜ್ಞಾನ-ವೈರಾಗ್ಯಗಳೂ ಮುಖ್ಯವೆಂದು ತಿಳಿದರೆ ವಾದಕ್ಕೆ ಹಾದಿಯೇ ಉಳಿಯುವುದಿಲ್ಲ.''

'ಶೈವಸುಧಾರ್ಣವ' ಗ್ರಂಥವು ಶಿವಪಂಚಾಕ್ಷರೀ ಮಂತ್ರದ ಮಹಿಮೆಯಿಂದ ಆರಂಭವಾಗಿ ಶಿವಲೀಲೆಗಳ ವಿಸ್ತಾರವಾದ ವರ್ಣನೆಗಳು ತುಂಬಿಕೊಂಡಿವೆ. ಸಿದ್ಧಮುನೀಶ್ವರ ಎಂಬುವರು ವಿವೇಕಶೀಲ ಮುಂತಾದ ಶಿಷ್ಯರಿಗೆ ಶಿವಲೀಲೆಗಳನ್ನು ನಿರೂಪಿಸಿದಂತೆ ಸಂಯೋಜಿಸಲಾಗಿದೆ. ಅಲ್ಲಲ್ಲಿ ಶಿಷ್ಯರು ಕೇಳಿದ ಪ್ರಶ್ನೆಗಳಿಗೆ ಚರಿತ್ರೆ (ಅಳಿಯ ಮಲ್ಲಾರಿ ದೀಕ್ಷಿತರು ಬರೆದದ್ದು), ಶೈವ ಭಕ್ತಿಯ ತಾತ್ವಿಕ ವಿವೇಚನೆ ಹಾಗೂ ಪಾರಾಯಣದ ದೃಷ್ಟಿಯಿಂದ ಕೊಟ್ಟಿರುವ ಕೆಲವು ಶಿವಸ್ತುತಿ ಶ್ಲೋಕಗಳು-ಇವು ಈ ಸುಧಾರ್ಣವದಲ್ಲಿ ಸ್ಥಾನವನ್ನು ಪಡೆದಿವೆ.

ತಿಳಿಯಬೇಕಾದ ಮಾತೆಂದರೆ, ಶೈವಸುಧಾರ್ಣವವು ಬಹು ಮಟ್ಟಿಗೆ ಸ್ವತಂತ್ರ ಕೃತಿಯಾಗಿದೆ. ಎಂದರೆ ಒಂದೆರಡು ಗ್ರಂಥಗಳನ್ನು ಮಾತ್ರ ಆಧಾರವಾಗಿಟ್ಟುಕೊಂಡು ಬರೆದುದಲ್ಲ. ಆದರೆ ಅದರ ರಚನೆಯ ಕಾಲಕ್ಕೆ ಲಿಂಗಪುರಾಣ, ಶೈವಪುರಾಣಗಳಲ್ಲದೆ, 'ರಾಜಶೇಖರ ವಿಳಾಸ' 'ಗಿರಿಜಾ ಕಲ್ಯಾಣ'-ಮೊದಲಾದ ಹಳೆಯ ಕನ್ನಡ ಕಾವ್ಯಗಳು, ಬೇಕಾದ ವಸ್ತುವನ್ನು ಒದಗಿಸಿವೆ. ಇಷ್ಟಲ್ಲದೆ ಮಹಾಭಾರತ, ಭಾಗವತ-ಇವುಗಳಲ್ಲಿಯ ವಿಚಾರಗಳನ್ನು ಗಮನಿಸಿದ್ದಾರೆ. ಈ ಕೃತಿಯ ಪ್ರತ್ಯೇಕ ಗುಣವೆಂದರೆ, ಪ್ರತಿ ಪ್ರಕರಣದ ಕೊನೆಗೆ ಅದರಲ್ಲಿ ಬಂದಿರುವ ವಿಷಯಗಳಿಗೆ ಆಕರಗಳನ್ನು ಸೂಚಿಸಿದ್ದು.

೫. ಸಂಚಾರಿ ಮಾರಾಟಗಾರ

ಈ ಎಂಟು ವರ್ಷಗಳ ಗ್ರಂಥೋದ್ಯಮದಲ್ಲಿ ಗಳಗನಾಥರು ಗಳಿಸಿದುದು ಸುಮಾರು ಐವತ್ತು ಸಾವಿರ ರೂಪಾಯಿಗಳು. ಆಗಿನ ಕಾಲದ ಯಾವ ಲೇಖಕ, ಪ್ರಕಾಶಕನಿಗೂ ಇಷ್ಟೊಂದು ಗಳಿಕೆ ಇದ್ದಿರಲಾರದು. ಆದರೆ ಅದೆಲ್ಲ ವೆಚ್ಚವಾಗಿ ಬಿಟ್ಟ ಮೇಲೆ ಹನ್ನೆರಡು ಸಾವಿರ ರೂ.ಗಳ ಸಾಲ ಇದ್ದಿತು!

ಸಾಲ ಹೇಗಾಯಿತೆಂದು ಅವರ ಮಾತನಲ್ಲಿಯೇ ಕೇಳೋಣ:

''ಮಹಾಯುದ್ಧದ ಕಾಲ. ರೂಪಾಯಿ ಕೊಟ್ಟರೆ ಕೇವಲ ಎರಡು ಸೇರು ಕಾಳು; ಕೇಳಿದ ಪದಾರ್ಥಗಳೆಲ್ಲ ಮಿತಿ ಮೀರಿ ತುಟ್ಟಿ. ಪಾಠಶಾಲೆಯ ನಲವತ್ತು ವಿದ್ಯಾರ್ಥಿಗಳ ಎರಡು ಹೊತ್ತಿನ ಊಟ. ಎಂಟು ಜನ ಪ್ರಾಧ್ಯಾಪಕರ ಮಾಶಾಸನದ ೨೦೦ ರೂ. ವೆಚ್ಚ. ಪ್ರಿಂಟಿಂಗ್ ಪ್ರೆಸ್‌ನಲ್ಲಿ ನೌಕರರ ನೂರಾರು ರೂಪಾಯಿ ಪಗಾರ, ತನ್ಮಧ್ಯೆ ಎಂಟು ಸಾವಿರ ರೂಪಾಯಿಗಳನ್ನು ಕೊಟ್ಟು ಮುದ್ರಣ ಸಾಧನಗಳನ್ನು ಕೊಳ್ಳಬೇಕಾದ ಪ್ರಸಂಗ... ಆಮೇಲೆ ಕೇಳುವುದೇನು? ಹೊಳೆಯ ನೀರು ಏರಿದಂತೆ ಗಳಗನಾಥರ ಸಾಲವು ಭರದಿಂದ ಏರತೊಡಗಿತು'' (೧೯೨೩).

ಈ ರೀತಿಯಾಗಿ ತಮ್ಮ ಗ್ರಂಥೋದ್ಯಮಕ್ಕೂ ಧಾರ್ಮಿಕ ಕಾರ್ಯಗಳಿಗೂ ಬಿಡಿಸಲಾಗದ ತಳಕು ಹಾಕಿದ್ದುದು ಇತರರಿಗೆ ಸಮಂಜಸವೆನಿಸಲಿಲ್ಲ. ಆದರೆ ಗಳಗನಾಥರ ಜೀವನದೃಷ್ಟಿಯೇ ಅದಾಗಿದ್ದಿತು. ''ಸರಸ್ವತಿಯು ನನ್ನಿಂದ ಗ್ರಂಥ ಬರೆಯಿಸುತ್ತಾಳೆ. ಅದೇ ವಿದ್ಯಾದೇವತೆಯು ಪಾಠಶಾಲೆ ಹಾಕಿಸುತ್ತಾಳೆ'' ಎಂದೇ ಅವರು ಬಗೆದಿದ್ದರು.

ಹೇಗೂ ದುಬಾರಿಯ ದಿನಗಳು. ಅದಕ್ಕನುಗುಣವಾಗಿ ಗ್ರಂಥಗಳ ಬೆಲೆಯನ್ನು ಹೆಚ್ಚಿಸಬಹುದಿತ್ತಲ್ಲವೆ? ಗಳಗನಾಥರಿಗೆ ಅದು ಸರ್ವಥಾ ಒಗ್ಗದು. ೨೨೦ ಪುಟಗಳ 'ಮಾಧವ ಕರುಣಾವಿಲಾಸ'ದ ಬೆಲೆ ಕೇವಲ ೩ ರೂಪಾಯಿಗಳು. ಯಾರಾದರೂ ತಮ್ಮ ಗ್ರಂಥಗಳಿಗೆ ನಿಗದಿತ ಬೆಲೆಗಿಂತ ಹೆಚ್ಚು ಹಣವನ್ನು ಕೊಡಬಂದರೆ ಅವರು ಅದನ್ನು ತಕ್ಷಣ ಹಿಂದಿರುಗಿಸುತ್ತಿದ್ದರು.

ಇತ್ತ ಸಾಲ ಇದ್ದಿತಲ್ಲ. ತಮಗೆ ಸಾಲ ಕೊಟ್ಟ ಒಬ್ಬೊಬ್ಬರನ್ನು ತಮ್ಮ ಗ್ರಂಥಗಳ ಪ್ರಸ್ತಾವನೆಗಳಲ್ಲಿ ಕೃತಜ್ಞತೆಯಿಂದ ನೆನೆದಿದ್ದಾರೆ. ಈ ಸಾಲದ ಬಗ್ಗೆ ಅವರು ವ್ಯಕ್ತಪಡಿಸಿದ ಇನ್ನೂ ಕೆಲವು ವಿಚಾರಗಳಿವು:

''ಸಾಲದ ಮೂಲಕ ಈಗ ಮೂರು ವರ್ಷಗಳಿಂದ ಅನೃತದ ಸ್ವಾತಂತ್ರವನ್ನೇ ಕಳೆದುಕೊಂಡ ನಾನು ನನ್ನ ಧನಕೋ ಜನರ ಧರ್ಮೌದಾರ್ಯ, ಸೌಜನ್ಯಗಳಿಗಾಗಿ ಅವರನ್ನು ಅಭಿನಂದಿಸದೇ ಇರಲಾರೆನು... ಈ ಜನರಲ್ಲಿ ಒಬ್ಬರಾದರೂ ಅಸಲನ್ನಂತೂ ಇರಲಿ, ಬಡ್ಡಿಯನ್ನು ಕೇಳಿದವರಲ್ಲ. ಈ ಎಲ್ಲ ಪುಣ್ಯವಂತರು ಸಾಲಗಾರನಾದ ನನಗೆ ಹಣಕ್ಕಾಗಿ ವರಾತ ಮಾಡಿ ನನ್ನ ಚಿತ್ತವನ್ನು ಚಂಚಲವಾಗಿ ಮಾಡಿದ್ದರೆ, ನಾನು ಈಗ ಎರಡು ವರ್ಷಗಳ ಅವಧಿಯಲ್ಲಿ ಸರಾಸರಿ ೧೬೦೦ ಪುಟದ ಮೂರು ಪುಸ್ತಕಗಳನ್ನು ಬರೆದು ಪ್ರಿಂಟು ಮಾಡಿಸುವುದು ಸಾಧ್ಯವಿಲ್ಲ. ಋಣಭಾರದ ನೆವದಿಂದ ಇಂಥ ಹಲವು ಪುಸ್ತಕಗಳು ಶ್ರೀಗುರು ಪ್ರೇರಣೆಯಿಂದ ನನ್ನ ಮುಖಾಂತರ ಬಡಬಡ ಹೊರ ಬೀಳಬೇಕೆಂಬ ಆತುರತೆ ನನ್ನಲ್ಲಿ ಹೆಚ್ಚುತ್ತಿರುವುದು. ಇಂಥ ಗ್ರಂಥಗಳ ವ್ಯವಸಾಯದಿಂದ ನಾನು ಕೃತಜ್ಞನಾಗಿರುವುದು ಅವಶ್ಯವು.''

ಆದರೆ ಸಾಲವೋ ಹನುಮನ ಬಾಲದಂತೆ ಬೆಳೆಯುತ್ತ ನಡೆಯಿತು. ಅದರ ದುಷ್ಪರಿಣಾಮವೆಂದರೆ ಅವರು ಲೇಖನ ವ್ಯವಸಾಯವನ್ನೇ ಕೆಲಕಾಲ ನಿಲ್ಲಿಸಿಬಿಟ್ಟರು. ಮತ್ತು ತಮ್ಮ ವಾರ್ಧಕ್ಯದ ಕಡೆಗೆ ಗಮನ ಕೊಡದೇ ಸ್ವತಃ ಪುಸ್ತಕಗಳನ್ನು ಹೊತ್ತುಕೊಂಡು ಮಾರಾಟಕ್ಕೆಂದು ಹೊರಬಿದ್ದರು. ಈ ಕೆಲಸಕ್ಕಾಗಿ, ಸುಮಾರು ೪೦ ಸಾವಿರ ರೂಪಾಯಿ ಬೆಲೆ ಬಾಳುವ ಮುದ್ರಿತ ಪುಸ್ತಕಗಳ ಸಂಗ್ರಹ ಹೇಗೂ ಇದ್ದಿತು.

ಲೇಖನ, ಪ್ರಕಾಶನ ಹಾಗೂ ಮಾರಾಟ ಇವು ಮೂರು ಆಗಿನ ಕಾಲದ ಭಾಷಾ ಸೇವೆಯ ಅಂಗಗಳೆ. ಆದರೆ ಶ್ರೇಷ್ಠಮಟ್ಟದ ಲೇಖಕನೊಬ್ಬ ತನ್ನ ಲೆಕ್ಕಣಿಕೆಯನ್ನು ಬದಿಗಿರಿಸಿ, ಭಾಷಾಸೇವೆ ಮತ್ತು ವಿದ್ಯಾದಾನ ಕಾರ್ಯಗಳಿಗೆ ತನ್ನವೇ ಪುಸ್ತಕಗಳನ್ನು ಮಾರಾಟಮಾಡಲೆಂದು ಹೊರಬಿದ್ದ ಪ್ರಸಂಗವು ಕನ್ನಡ ಸಾಹಿತ್ಯೇತಿಹಾಸದಲ್ಲಿ ಒಂದು ಅಪೂರ್ವ ಘಟನೆಯಾಗಿದೆ. ಇದಕ್ಕಾಗಿ ಗಳಗನಾಥರು ಬೇಸರಿಸಲಿಲ್ಲ. ''ಇಂಥ ಸುಯೋಗವನ್ನು ಸರ್ವೇಶ್ವರನು ಒದಗಿಸಿಕೊಟ್ಟದ್ದಕ್ಕಾಗಿ ನನಗೆ ಪರಮಾನಂದವಾಗಿರುವುದು. ಯಾಕೆಂದರೆ ಪ್ರಾಮುಖ್ಯವಾಗಿ ಪುಸ್ತಕ ಮಾರಾಟವಾದಾಗ ನನಗಾದ ಅನುಭವ ಲಾಭವನ್ನು ನಾನು ಇಷ್ಟೇ ಎಂದು ಹೇಳುವ ಹಾಗಿಲ್ಲ'' ಎಂಬುದಾಗಿ ಒಂದು ಪ್ರಸ್ತಾವನೆಯಲ್ಲಿ ಉಲ್ಲೇಖಿಸಿದ್ದಾರೆ. ಅವರಿಗೆ

ಬೇಸರವನ್ನು ಬರಿಸಿದ ಒಂದೇ ಒಂದು ವಿಷಯವೆಂದರೆ, ಲೆಕ್ಕಣಿಕೆಯನ್ನು ಬದಿಗಿರಿಸಬೇಕಾಗಿ ಬಂದದ್ದು. "ಇದೂ ಒಂದು ಲೋಕಸೇವೆಯೆಂದು ತಿಳಿದು ಈಶ್ವರಾಧೀನವೆಂಬ ಭಾವದಿಂದ, ನಿಸ್ಪೃಹರಾಗಿ ಲೇಖನಕಾರ್ಯ ಸಾಗಿಸುವವರು ಶ್ರೇಷ್ಠ ಲೇಖಕರು. ಆದರೆ ಅಂಥ ಯೋಗ್ಯತೆಯಂತು ಇರಲಿ, ಹೊಸ ಪುಸ್ತಕ ಬರೆದರೆ ಸದ್ಗುರುವು ಹೊಸ ದುಡ್ಡು ಕೊಡುವನೆಂದು ತಿಳಿಯದೇ ಸಾಲವಾಯಿತಲ್ಲ ಎಂಬ ಚಿಂತೆಯಿಂದ ಬರೆಯುವುದನ್ನೇ ಬಿಟ್ಟುಕೊಟ್ಟದ್ದು ಗಳಗನಾಥರಲ್ಲಿಯ ಉದಾತ್ತ ಗುಣದ ಕೊರತೆಯೇ ಸೈ" ಅವರ ಸಂಚಾರಿ ಮಾರಾಟದ ಅಧಿಕೃತ ಉಲ್ಲೇಖವು 'ಸಂಸಾರಸುಖ' ಕಾದಂಬರಿಯ ಪ್ರಸ್ತಾವನೆಯಲ್ಲಿ ದೊರೆಯುತ್ತದೆ. 'ಪುಸ್ತಕಗಳಿಗಾಗಿ ಲೋಕಾಶ್ರಯ'ವನ್ನು ಪಡೆಯುವ ಉದ್ದೇಶದಿಂದ ಮೊದಲು ಗದುಗಿಗೆ ಹೋದರಂತೆ. ಅಲ್ಲಿ ಇದ್ದ ನೀಲಕಂಠರಾಯರೆಂಬವರು ಗಳಗನಾಥರನ್ನು ಸಕುಟುಂಬವಾಗಿ ೩-೪ ತಿಂಗಳ ಕಾಲ ತಮ್ಮ ಮನೆಯಲ್ಲಿಯೇ ನಿಲ್ಲಿಸಿಕೊಂಡರು. ಅವರ ಉಪಕಾರ ಸ್ಮರಣೆಗಾಗಿ ಗಳಗನಾಥರು ಆ ಕಾದಂಬರಿಯನ್ನು ನೀಲಕಂಠರಾಯರಿಗೆ ಅರ್ಪಿಸಿದ್ದಾರೆ.

ಮುಂದುವರಿದ ಈ ಸಂಚಾರಿ ಮಾರಾಟದಿಂದ ಧಾರವಾಡ ಜಿಲ್ಲೆಯೊಂದರಿಂದಲೇ ಅವರ ೮ ಸಾವಿರ ರೂಪಾಯಿಗಳ ಸಾಲವು ತೀರಿತು! ಅನಂತರ ಇತರ ಜಿಲ್ಲೆಗಳಲ್ಲಿಯೂ ಸಂಚಾರ ಮಾಡಿದರು. ಈ ನಿಮಿತ್ತದಿಂದ ನಾಡಿನಾದ್ಯಂತ ಜನರಿಗೆ ಗಳಗನಾಥರ ದರ್ಶನ ಆಗತೊಡಗಿತು. ಅವರ ಕಾದಂಬರಿಗಳನ್ನು ಕಳೆದ ೧೫ ವರ್ಷಗಳಿಂದ ಓದುತ್ತಿದ್ದವರು ಈಗ ತಾವು ಧನ್ಯರಾದೆವೆಂದು ತಿಳಿದುಕೊಂಡವರು ಅದೆಷ್ಟೋ ಜನ.

ಕ್ಷಾತ್ರವೃತ್ತಿಯನ್ನು ಪ್ರತಿ ಕಾದಂಬರಿಯಲ್ಲಿ ಮೂಡಿಸಿದ್ದ ಗಳಗನಾಥರ ವ್ಯಕ್ತಿತ್ವವು ಅನೇಕರಿಗೆ ಭವ್ಯವಾಗಿದ್ದಿರಬೇಕು ಎಂದೆನಿಸಿತು. ಆದರೆ ಅವರ ರೂಪ, ನಡೆ ಮತ್ತು ನುಡಿಗಳು ತೀರ ಸಾದಾ ಹಾಗೂ ಸೌಮ್ಯವಾಗಿದ್ದವು. ಬಗಲಗಸಿಯ ಅಂಗಿ, ಧೋತರ, ರುಮಾಲು ಮತ್ತು ಕಿರಿಯಂಚಿಯ ಉತ್ತರೀಯ, ಹಣೆಯ ಮೇಲೆ ಅಡ್ಡನಾಮ. ಇವು ಅವರ ವೇಷ-ಭೂಷಣಗಳು. ಸನಾತನ ಧರ್ಮವನ್ನು ಪ್ರತಿಬಿಂಬಿಸುವಂತಹವು. ಮುಖಮುದ್ರೆ ಅತಿ ಸಾದಾ. ನೆರೆಗೂದಲಿನ ಹುಬ್ಬು, ಮೀಸೆ. ಸುಕ್ಕುಗಟ್ಟಿದ ಚರ್ಮ, ತಿಳಿಗಪ್ಪಿನ ಬಣ್ಣ. ಆದರೆ ಸಂಭಾಷಣೆಗೆ ತೊಡಗಿದರೆಂದರೆ ಅವರ ವಿಶುದ್ಧ ವಿಚಾರ ಸರಣಿ, ಗುರುತಿನವರ ಬಗ್ಗೆ ಕಳಕಳಿ ಹಾಗೂ ಧಾರ್ಮಿಕ ನಿಷ್ಠೆ ವ್ಯಕ್ತವಾಗಿ ಅವರ ಯೋಗ್ಯತೆಯು ಕಲ್ಪನೆಗೆ ಬರುವಂತಿದ್ದಿತು.

ತಮ್ಮ ಸಾಲ ತೀರುವೆಗೆ ಮೈಸೂರು ಸಂಸ್ಥಾನವು ಹೆಚ್ಚು ಅನುಕೂಲವೆಂದು ಗಳಗನಾಥರಿಗೆ ಅನಿಸಿತು. ಸದ್ಬೋಧ ಚಂದ್ರಿಕೆಗಿದ್ದ ಏಳು ಸಾವಿರ ಚಂದಾದಾರರಲ್ಲಿ ಮೂರು ಸಾವಿರ ಜನ ಮೈಸೂರಿನವರೇ ಇದ್ದುದ್ದನ್ನು ನೆನೆದುಕೊಂಡರು. ಬೆಂಗಳೂರಿಗೆ 'ಕಲ್ಯಾಣಪುರಿ' ಎಂಬ ಮತ್ತೊಂದು ಹೆಸರಿದೆಯೆಂದು ಕೇಳಿದ್ದರು. ತಮ್ಮಂತಹ ದಿನ ಹೋದ, ದಣಿದ ಲೇಖಕರ ಕಲ್ಯಾಣವನ್ನು ಕಲ್ಯಾಣಪುರಿ ಮಾಡುವುದೆಂಬ ನಂಬಿಗೆಯಿಂದ ಮೂವರನ್ನು ಸಹಾಯಕ್ಕೆಂದು ಕರೆದುಕೊಂಡು ಬೆಂಗಳೂರಿಗೆ ಹೊರಟರು (ಅಕ್ಟೋಬರ್ ೧೯೨೭).

ಮೊದಲ ೮-೧೦ ದಿನಗಳಲ್ಲಿ ಬಂದ ಕೆಲಸದಲ್ಲಿ ಅವರು ಏನೂ ಯಶಸ್ವಿಯಾಗಿರಲಿಲ್ಲ. ಸಂಗಡಿಗರೂ ಮರಳಿ ಹೋಗುವ ಸೂಚನೆ ಮುಂದಿಡುತ್ತ 'ಗಾಡಿಯ ವೆಚ್ಚದ ಮಟ್ಟಿಗೆ ಪುಸ್ತಕಗಳನ್ನು ಯಾರಾದರೂ ಬುಕ್‌ಸೆಲರ್‌ರಿಗೆ ಕೊಟ್ಟುಬಿಡೋಣ' ಎಂದು ಹೇಳಿದರು. ಮರುಕ್ಷಣ ಗಳಗನಾಥರ ಛಲಗಾರಿಕೆ ಜಾಗೃತವಾಯಿತು. ''ನಾನು ಬೆಂಗಳೂರಿನಲ್ಲಿ ಒಂದು ಸಾವಿರ ರೂಪಾಯಿಗಳಾನ್ನಾದರೂ ಸಂಪಾದಿಸದೆ ಊರಿಗೆ ಹಿಂತಿರುಗಲಿಕ್ಕಿಲ್ಲ'' ಎಂದು ನಿರ್ಧರಿಸಿದರು. ಮುಂದಿನ ಎರಡು ಮೂರು ತಿಂಗಳಲ್ಲಿ ನಾಲ್ವರೂ ಸೇರಿ ೨ ಸಾವಿರ ರೂಪಾಯಿ ಬೆಲೆಯ ಪುಸ್ತಕಗಳನ್ನು ಮರಾಟ ಮಾಡಿದರಂತೆ.

ಆದರೆ ಗಳಗನಾಥರು ಸ್ವತಃ ಮಾರಾಟಕ್ಕೆ ಹೊರಟದ್ದು ಒಂದೆರಡು ದಿನ ಮಾತ್ರ. ಬೆಂಗಳೂರು ವಾಸ್ತವ್ಯದ ಕಾಲದಲ್ಲಿ ಅವರು ಮಾಡಿದ ವಿಶೇಷ ಕೆಲಸವೆಂದರೆ ಒಂದಲ್ಲ, ನಾಲ್ಕು ಗ್ರಂಥಗಳನ್ನು ಬರೆದು ಮುಗಿಸಿದ್ದು. ಅವುಗಳಲ್ಲಿ ಮೂರನ್ನು ಅಲ್ಲಿಯೇ ಮುದ್ರಣ ಮಾಡಿಸಿ ಪ್ರಕಟಿಸಿದರು. ಅವೆಂದರೆ ರಜಪೂತರ ಇತಿಹಾಸಕ್ಕೆ ಸಂಬಂಧಿಸಿದ 'ರಾಣಿ ಮೃಣಾಲಿನಿ' ಮತ್ತು 'ರಾಣಾ ರಾಜಸಿಂಹ' ಹಾಗೂ ಅಗಡಿಯ ಶೇಷಾಚಲ ಸಾಧುಗಳೊಡನೆ ತಮ್ಮ ಒಡನಾಟವುಳ್ಳ ಆತ್ಮಚರಿತ್ರೆಯ ಸ್ವರೂಪದ 'ಸದ್ಗುರು ಪ್ರಭಾವ'.

ಹೀಗೆ ಒಂದು ಮೆಟ್ಟಿಗೆ ನಾಲ್ಕು ಪುಸ್ತಕಗಳನ್ನು ರಚಿಸಲು ಅಪ್ರತ್ಯಕ್ಷವಾಗಿ ಕಾರಣರಾದವರು ಬೆಂಗಳೂರಿನ ಆಗಿನ ಕೆಲವು ಗಣ್ಯ ಲೇಖಕರು. ಸುಮಾರು ಎರಡು ದಶಕಗಳ ಕಾಲ ಅವ್ಯಾಹತವಾಗಿ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದ ಗಳಗನಾಥರ ಬಗ್ಗೆ, ಸ್ವಾಭಾವಿಕವಾಗಿ ಅವರಲ್ಲಿ ಆದರಭಾವ ಮೂಡಿದ್ದಿತು. ಗಳಗನಾಥರ 'ಧರ್ಮರಹಸ್ಯ' ಹಾಗೂ ಒಂದೆರಡು ಕಾದಂಬರಿಗಳು ಮೈಸೂರು ಸಂಸ್ಥಾನದ ಶಾಲೆಗಳಲ್ಲಿ ಪಠ್ಯಗಳಾಗಿದ್ದವು.

ಆ ಮೊದಲು ಮೈಸೂರು-ಬೆಂಗಳೂರುಗಳತ್ತ ಗಳಗನಾಥರು ಹೋದವರಲ್ಲವಾದ್ದರಿಂದ ಅವರನ್ನು ಭೇಟಿಯಾಗುವ ಯೋಗ ದೊರೆತದ್ದು ತಮ್ಮ ಭಾಗ್ಯವೆಂದು ಹೆಚ್ಚಿನವರು ತಿಳಿದಿದ್ದರು. ಹಾಗೆ ಭೇಟಿಯಾದವರೆಂದು, ಎಂ. ಶಾಮರಾವ್ (ಮೈಸೂರು ಸಂಸ್ಥಾನದ ಶಿಕ್ಷಣವೇತ್ತರು), ಆರ್. ನರಸಿಂಹಾಚಾರ್ಯ (ಪ್ರಾಕ್ತನವಿಶಾರದರು), ಕರ್ಪೂರ ಶ್ರೀನಿವಾಸರಾಯರು, ಬೆಳ್ಳಾವೆ ವೆಂಕಟನಾರಾಯಣಪ್ಪ, ಟಿ.ಎಸ್. ವೆಂಕಣ್ಣಯ್ಯ, ಹೊಸಕೆರೆ ಚಿದಂಬರಯ್ಯ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ತಿ.ತಾ. ಶರ್ಮ-ಈ ಕೆಲವರು ಇಂದಿನ ತಲೆಮಾರಿನವರಿಗೆ ಪೂಜನೀಯರೆಂದೆನಿಸಿದವರು, ಗಳಗನಾಥರನ್ನು ಗೌರವದಿಂದ ಕಂಡು ಮಾತನಾಡಿಸಿದ್ದಾರೆ.

ಆಗೀಗ ಗಳಗನಾಥರಿಗೆ ಭಾಷಣಕ್ಕಾಗಿ ಆಮಂತ್ರಣಗಳು ಬಂದವು. ಅವರು ಆಯ್ದುಕೊಂಡ ವಿಷಯಗಳು ಸನಾತನ ಧರ್ಮಕ್ಕೆ ಒಂದಿಲ್ಲೊಂದು ರೀತಿಯಿಂದ ಸಂಬಂಧಪಟ್ಟವುಗಳಾಗಿದ್ದುವು. ಅವರದು ನೇರವಾದ ಹಾಗೂ ಸರಳ ರೀತಿಯ ಮಾತುಗಾರಿಕೆ. ಎದ್ದು ಕಾಣುವ ವಾಗ್ಮಿತೆ ಅವರದಲ್ಲ. ಆದರೆ ಯಾವುದೇ ವಿಷಯವಿರಲಿ, ಅದನ್ನು ಅತ್ಯಂತ ಶ್ರದ್ಧೆಯಿಂದ ಮಂಡಿಸುತ್ತಿದ್ದುದರಿಂದ ಅವರ ಭಾಷಣಗಳು ಶ್ರೋತೃಗಳ ಮನಸ್ಸನ್ನು ಸೆರೆಹಿಡಿಯುತ್ತಿದ್ದವು. ಒಮ್ಮೊಮ್ಮೆ ಸಭಿಕರ ಪ್ರಶ್ನೋತ್ತರಕ್ಕೆ ಅವಕಾಶವಿರುತ್ತಿತ್ತು. ಆಗ ಗಳಗನಾಥರ ವಿಚಾರಮಂಡನೆಗೆ ಉತ್ಸಾಹ ಉಕ್ಕೇರುತ್ತಿತ್ತು.

ಈ ಭೇಟಿ ಹಾಗೂ ಭಾಷಣಗಳಿಗೆ ಕಳಸವಿಡುವಂತೆ ಕರ್ನಾಟಕ ಸಾಹಿತ್ಯ ಪರಿಷತ್ತು ಅವರನ್ನು ಸಾರ್ವಜನಿಕ ರೀತ್ಯಾ ಸತ್ಕರಿಸಿತು. ಅಲ್ಲದೆ ''ಮ.ರಾ. ಗಳಗನಾಥರವರು ಕನ್ನಡದಲ್ಲಿ ಅನೇಕ ಪ್ರೌಢ ಗ್ರಂಥಗಳನ್ನು ರಚಿಸಿ ಅವುಗಳನ್ನು ಪ್ರಕಟಿಸಿ ಮಾಡಿರುವ ಕರ್ನಾಟಕ ವಾಙ್ಮಯ ಸೇವಾತಿಶಯಕ್ಕಾಗಿ ಅವರಿಗೆ ೨೫೦ ರೂಪಾಯಿಗಳ ಸಂಭಾವನೆಯನ್ನು ಕೊಡತಕ್ಕದ್ದು'' ಎಂಬ ನಿರ್ಣಯವನ್ನು ಸ್ವೀಕರಿಸಿತು.

ಈ ಸಂಚಾರಿ ಮಾರಾಟದ ವೃತ್ತಿಯನ್ನು ಗಳಗನಾಥರು ಮುಂದುವರಿಸಿದರು. 'ನಮ್ಮ ಸಾಲ ತೀರಿಸುವ ಪುಸ್ತಕಗಳು' ಎಂಬ ಹಣೆಪಟ್ಟಿಯನ್ನು ಹೊತ್ತ, ಪುಸ್ತಕಗಳುಳ್ಳ ತಮ್ಮ ಹಸಿಬೆಯನ್ನು ಹೊತ್ತುಕೊಂಡು ಹೊರಟರು - ಈ ಬಾರಿ ಕರ್ನಾಟಕದ ಉತ್ತರ ದಿಕ್ಕಿಗೆ. ಆಗಿನ ಕೆಲವು ಪ್ರಸಂಗಗಳು ಮೋಜಿನವೂ ಉದ್ಬೋಧಕವೂ ಆಗಿವೆ.

ರಾಷ್ಟ್ರೀಯ ಚಳುವಳಿಯಲ್ಲಿ ಪಾತ್ರವಹಿಸಿದವರೂ ಸ್ವತಃ ಪ್ರಕಾಶಕರೂ ಆಗಿದ್ದ ಬುರ್ಲಿ ಬಿಂದುಮಾಧವರು ಜ್ಞಾಪಿಸಿಕೊಂಡ ಇದೊಂದು ಪ್ರಸಂಗ: ಮಾರಾಟದ ಪುಸ್ತಕಗಳನ್ನು ಸಂಗಡ ತಂದಿದ್ದ ಗಳಗನಾಥರನ್ನು ಬುರ್ಲಿಯವರು ಧಾರವಾಡದಲ್ಲಿ ರಾವ್‌ಸಾಹೇಬ ಶಂಕರರಾವ್ ಕೊಣ್ಣೂರು ಎಂಬವರ ಮನೆಗೆ ಕರೆದುಕೊಂಡು ಹೋದರಂತೆ.

''ಏನು ಬುರ್ಲಿಯವರೇ, ನಿಮಗೆ ಇದೇ ಉದ್ಯೋಗ! ಒಮ್ಮೆ ರಾಷ್ಟ್ರೀಯ ಶಾಲೆಗೆ ಫಂಡು, ಎಂದು ಬರುವಿರಿ. ಮಗುದೊಮ್ಮೆ ವಿದ್ಯಾರ್ಥಿನಿಲಯಕ್ಕೆ ದಾನ ಕೇಳಲು ಬರುತ್ತೀರಿ. ಈಗ ಇವರನ್ನು ಕರೆತಂದಿದ್ದೀರಿ.''

ರಾವ್‌ಸಾಹೇಬರು ಹೀಗೆ ಜರಿದು ಮಾತಾಡಿದ್ದು ಬುರ್ಲಿಯವರಿಗೆ ಅನಿರೀಕ್ಷಿತವಾಗಿತ್ತು. ಯಾಕೆಂದರೆ ರಾಯರು ಜಾತ್ಯತಃ ಉದಾರ ಮನಸ್ಸಿನವರು. ಈಗ, ಗಳಗನಾಥರಂಥ ಹಿರಿಯರಿಗೆ ಅಪಮಾನವೆನಿಸುವ ರೀತಿಯಲ್ಲಿ ಆಡಿಬಿಟ್ಟರಲ್ಲ! ಎಂಬ ಕಳವಳ, ಬುರ್ಲಿಯವರಿಗೆ. ಆಗ ಗಳಗನಾಥರೇ ಹೇಳಿದರು.

''ರಾಯರೇ, ತಮಗೆ ಇಷ್ಟು ಬೇಸರವಾಗುತ್ತಿದ್ದರೆ ನಾವು ಹೋಗಿ ಬರುತ್ತೇವೆ. ನಾವೇನೂ ಭಿಕ್ಷೆ ಬೇಡಲು ಬಂದಿಲ್ಲ. ಸರಸ್ವತಿಯ ಸೇವೆಯಿದು ಎಂದು ತಿಳಿದವರು'' ಎಂದವರೇ ಪುಸ್ತಕದ ಗಂಟನ್ನು ಹೆಗಲಿಗೇರಿಸಿ ಹೊರಟುಬಿಟ್ಟರು.

ಕೊಣ್ಣೂರರು ಈ ಹಿಂದೆ ಗಳಗನಾಥರ ಕೆಲವು ಕಾದಂಬರಿಗಳನ್ನು ಓದಿದ್ದವರೆ. ಅದೇ ದಿನ ಆಪರಾಹ್ನದ ವೇಳೆಗೆ ಕೊಣ್ಣೂರು ರಾವಸಾಹೇಬರೇ ಬುರ್ಲಿಯವರ ಮನೆತನಕ ಬಂದು ಗಳಗನಾಥರ ಕಾಲು ಹಿಡಿದು ''ತಪ್ಪಾಯಿತು'' ಎಂದರಂತೆ. ಮಾತುಕತೆ ಮುಗಿದ ಮೇಲೆ ಗಳಗನಾಥರು ತಂದಿದ್ದ ಎಲ್ಲಾ ಪುಸ್ತಕಗಳ ಒಂದೊಂದು ಪ್ರತಿಯನ್ನು ಖರೀದಿಸಿ ಒಯ್ದರಂತೆ.

ಗಳಗನಾಥರೇ ಹೇಳಿದ ಅನುಭವ ಕಥನವಿದು: ''ನನ್ನ ಪುಸ್ತಕಗಳ ಮಾರಾಟಕ್ಕಾಗಿ ಹೈದರಾಬಾದಿಗೆ ಹೋಗಿದ್ದೆ. ನಮ್ಮ ಭಾಗದಿಂದ ಹೋಗಿ ಅಲ್ಲಿ ನೆಲೆಸಿದ್ದ ಡಾಕ್ಟರರೊಬ್ಬರ ಕಡೆಗೆ ಹೋದೆ. ನನ್ನ ಪುಸ್ತಕಗಳ ಗಂಟನ್ನು ಹೊತ್ತುಕೊಂಡು ಅವರ ದಾವಾಖಾನೆಯಲ್ಲಿ ಕಾಲಿರಿಸಿದೆ. ಅವರು ನನ್ನನ್ನು ಸ್ವಾಗತಿಸಲಿಲ್ಲ. ನಾನೇ ಒಂದು ಕುರ್ಚಿಯ ಮೇಲೆ ಕುಳಿತು, ನಾನಾರೆಂಬುದನ್ನು ಯಾತಕ್ಕಾಗಿ ಬಂದಿರುವೆನೆಂಬುದನ್ನು ಹೇಳಿದೆ. ಆಗ ಆ ಡಾಕ್ಟರರು ''ಓ! ನೀವೇ ಗಳಗನಾಥರೇನು? ನಿಮ್ಮ ಹೆಸರು ನಮ್ಮ

ಕಿವಿಗೂ ಬಿದ್ದಿತ್ತು. ನಮಸ್ಕಾರ, ನಮ್ಮ ಮನೆಯಲ್ಲಿ ಯಾರೂ ಕನ್ನಡ ಓದುವವರಿಲ್ಲ. ಇಲ್ಲಿ ಬೇರೆ ಕನ್ನಡಿಗರು ಸಾಕಷ್ಟು ಜನ ಇದ್ದಾರೆ. ಅವರ ಬಳಿಗೆ ಹೋದರೆ ಅಲ್ಪಸ್ವಲ್ಪ ಸಹಾಯ ದೊರಕೀತು!'' ಎಂದರು. ಆಗ ನಾನು ಅವರಿಗೆ ಬಿಚ್ಚುನುಡಿಗಳಲ್ಲಿ ಹೇಳಿದೆ. ''ನೀವೂ ಕನ್ನಡಿಗರೇ ಎಂದು ನಿಮ್ಮ ಬಳಿಗೆ ಬಂದಿದ್ದೇನೆ. ಪುಸ್ತಕಕ್ಕಾಗಿ ನೀವು ಮಾಡುವ ವೆಚ್ಚ ವ್ಯರ್ಥ ಹೋಗದು. ದಯಮಾಡಿ ಕೆಲವನ್ನಾದರೂ ಕೊಳ್ಳಿರಿ'' ಎಂದೆ. ಆಗ ಅವರು ಜೇಬಿನಿಂದ ಎಂಟಾಣೆ ನಾಣ್ಯವೊಂದನ್ನು ತೆಗೆದಿಟ್ಟು ಇಷ್ಟು ಬೆಲೆಗೆ ಯಾವ ಪುಸ್ತಕ ಬರುವುದೋ ಕೊಟ್ಟುಬಿಡಿರಿ'' ಎಂದು ನುಡಿದರು. ನಾನು ಅಷ್ಟೇ ಬೆಲೆಯ ಕಿರು ಪುಸ್ತಕವೊಂದನ್ನು ಅವರ ಮೇಜಿನ ಮೇಲೆ ಇರಿಸಿ ಹೊರಟು ಬಂದೆ.

ಆಶ್ಚರ್ಯದ ಸಂಗತಿ ಎಂದರೆ, ಅಂದೆಯೇ ರಾತ್ರಿ ಎಂಟು ಗಂಟೆಯ ಸುಮಾರಿಗೆ ಆ ಡಾಕ್ಟರರ ಹೆಂಡತಿ ನನ್ನನ್ನು ಹುಡುಕಿಕೊಂಡು ನಾನಿದ್ದಲ್ಲಿಗೆ ಬಂದರು. ಅವರು ಧಾರವಾಡ ಜಿಲ್ಲೆಯ ಬೊಮ್ಮನಹಳ್ಳಿಯವರಂತೆ. ನನ್ನ ಪುಸ್ತಕಗಳನ್ನು ಒಂದೂ ಬಿಡದೆ ಓದಿದ್ದರಂತೆ. ನಾನು ಒಂದು ಎಂಟಾಣೆಯ ಪುಸ್ತಕವೊಂದನ್ನು ಕೊಟ್ಟು ಹೋದ ವಿಷಯ ತಿಳಿದು ಪಶ್ಚಾತ್ತಾಪದ ಭಾವವನ್ನು ಮೂಡಿಸಿಕೊಂಡು ನನ್ನಲ್ಲಿಗೆ ಬಂದರು. ತಮ್ಮ ಪತಿಯ ನಡವಳಿಕೆಗಾಗಿ ನನ್ನಲ್ಲಿ ಕ್ಷಮೆಯನ್ನು ಯಾಚಿಸಿ, ಮರುದಿನ ಮಧ್ಯಾಹ್ನ ತಮ್ಮ ಮನೆಗೆ ಊಟಕ್ಕೆ ಬರಬೇಕೆಂದು ಔತಣವಿತ್ತರು. ಆಕೆಯ ಆತ್ಮೀಯ ಭಾವದ ಔತಣವನ್ನು ನಿರಾಕರಿಸಲು ನನ್ನಿಂದಾಗಲಿಲ್ಲ.

ಮರುದಿವಸ ನನ್ನನ್ನು ಕರೆದೊಯ್ಯಲು ಡಾಕ್ಟರರ ಕಾರು ಬಂತು. ಹೋದ ಮೇಲೆ ಸವಿಯಡಿಗೆಯ ಊಟ. ಆ ಮಹಾತಾಯಿಯ ಹೇಳಿಕೆಯಂತೆ ನನ್ನ ಪ್ರತಿಯೊಂದು ಪುಸ್ತಕದ ಒಂದೊಂದು ಪ್ರತಿಯನ್ನು ಅವರಿಗೆ ಕೊಟ್ಟಾಯಿತು. ಇನ್ನೂರಾ ಮೂವತ್ತು ರೂಪಾಯಿ - ಆ ಪುಸ್ತಕಗಳ ಬೆಲೆ. ಡಾಕ್ಟರರೇ ತಮ್ಮ ಪೆಟ್ಟಿಗೆಯಿಂದ ಅಷ್ಟು ಹಣ ತೆಗೆದುಕೊಟ್ಟರು. ಮೊದಲ ದಿನದ ತಮ್ಮ ಉಪೇಕ್ಷೆಯ ವರ್ತನೆಗಾಗಿ ಪಶ್ಚಾತ್ತಾಪವನ್ನು ವ್ಯಕ್ತಪಡಿಸಿದರು. ಇಂತಹ ಅನುಭವಗಳು ಮೇಲಿಂದ ಮೇಲೆ ಬರುತ್ತಲಿವೆ.''

ಪ. ರಾಮಕೃಷ್ಣಶಾಸ್ತ್ರಿ ಎಂಬ ಕನ್ನಡ ಲೇಖಕರೊಬ್ಬರ ಮನೆಗೆ ಗಳಗನಾಥರು ಪುಸ್ತಕ ಮಾರಾಟಕ್ಕಾಗಿ ಹೋಗಿದ್ದರಂತೆ. ಅವರ ತಾಯಿಯ ಬಳಿ ಹಣ ಇದ್ದಿಲ್ಲ. ಆಗ ಮನೆಯಲ್ಲಿಯ ಆಭರಣವನ್ನು ಒತ್ತೆ ಇಟ್ಟಾದರೂ ಪುಸ್ತಕ ಕೊಳ್ಳುವ ಆತುರವನ್ನು ತೋರಿದರಂತೆ! ಹೆಣ್ಣು ಮಕ್ಕಳ ಈ ವಾಚನಪ್ರೀತಿಯನ್ನು ಗಳಗನಾಥರು ಮೇಲಿಂದ ಮೇಲೆ ನೆನೆದಿದ್ದಾರೆ.

ಹಾಸ್ಯ ಲೇಖಕರೆಂದು ಹೆಸರಾಗಿದ್ದ ಬೀಚಿಯವರು ಹರಪನಹಳ್ಳಿಯ ಶಾಸ್ತ್ರಿಗಳೊಬ್ಬರ ವ್ಯಕ್ತಿಚಿತ್ರದಲ್ಲಿ ಕೊಟ್ಟ ಘಟನೆಯಿದು. ''ಶಾಸ್ತ್ರಿಗಳು ವೀರಶೈವರು. ಸಂಸ್ಕೃತ ಪಂಡಿತರು. ಊರಲ್ಲಿ ಒಂದು ಧರ್ಮಾರ್ಥ ಚಿಕಿತ್ಸಾಲಯವನ್ನು ನಡೆಸುತ್ತಿದ್ದರು. ಅಲ್ಲಿ ತುಂಬಾ ಜನ ರೋಗಿಗಳ, ಅವರ ಜೊತೆಗೆ ಬಂದವರ ದೊಡ್ಡ ಸಂದಣಿ. ಅಳುವ ಮಕ್ಕಳು, ಅವನ್ನು ಸಂತೈಸುವ ತಾಯಂದಿರು, ಅವರನ್ನು ಗದರಿಸುವ ಗಂಡಂದಿರು. ಒಬ್ಬರ ಮಾತು ಇನ್ನೊಬ್ಬರಿಗೆ ಕೇಳಿಸುವಂತಿಲ್ಲ. ಇತ್ತ ಶಾಸ್ತ್ರಿಗಳಿಗೂ ಕೆಲಸದ ಅವಸರ. ಇಂಥ ಹೊತ್ತಿನಲ್ಲಿ ಒಬ್ಬ ಮುದುಕ-ಹರಕಲು ಗಡ್ಡ, ಕೆಂಬಣ್ಣದ ಪಂಚೆ, ಭುಜಕ್ಕೊಂದು ನೇತಾಡುವ ಹಸಿಬಿ-ಇದ್ದವ-ನಿಂತಲ್ಲಿಂದಲೇ, ಶಾಸ್ತ್ರಿಗಳಿಗೆ ಕೂಗಿ ಹೇಳಿದ: ''ಪುಸ್ತಕ ನೋಡುತ್ತಿರೇನು?'' ''ಹೋಗಪ್ಪ ಮಾರಾಯ, ನಿನ್ನ ಪುಸ್ತಕ ಬ್ಯಾಡಾ. ಏನು ಸುಡುಗಾಡೂ ಬ್ಯಾಡಾ'' ಎಂದು ಮುಖ ಕಿವಿಚಿಕೊಂಡು ಗದರಿಸಿಬಿಟ್ಟರು ಶಾಸ್ತ್ರಿಗಳು. ಒಜ್ಜೆಯ ಹಸಿಬೆಯನ್ನು ಹೊತ್ತುಕೊಂಡು ಮುದುಕ ಹಾಗೇ ಹಿಂತಿರುಗಿದ.

ಆಸ್ಪತ್ರೆಯ ಕೆಲಸ ಮುಗಿಯಿತು. ಹಿಂಬದಿಗೇ ಇದ್ದ ಮನೆಗೆ ಬಂದ ಶಾಸ್ತ್ರಿಗಳು ಸ್ನಾನಕ್ಕಿಳಿದರು. ಶಿವಪೂಜೆ ಆಗಬೇಕು. ಮಣೆ ಹಾಕಿ, ವಿಭೂತಿ ಇಟ್ಟು, ಎಲ್ಲವನ್ನೂ ಅಣಿ ಮಾಡಿತ್ತು ಪುಟ್ಟ ಮಗಳು. ಆಚೆ ಮನೆಯವರೊಬ್ಬರು ಬಂದು ಕೇಳಿದರು: ''ಬುಕ್ಕಾ ಕೊಂಡುಕೊಂಡ್ರೇನು? ಗಳಗನಾಥರು ಬಂದಿದ್ರಲ್ಲಾ?'' ಅದನ್ನು ಕೇಳಿ ಹಾವು ತುಳಿದಂತಾದರು ಶಾಸ್ತ್ರಿಗಳು. ಆಚೆಮನೆಯವರು ಮುಂದುವರಿದು ''ಹಸಿಬಿ ಹೊತಗೊಂಡು ಬರಲಿಲ್ಲೇ ಮುದುಕ? ನಾನೇ ನಿಮ್ಮಲ್ಲಿಗೆ ಕಳಿಸಿದ್ದೆ'' ಶಾಸ್ತ್ರಿಗಳು ಬೀಚಿಯವರಿಗೆ ಹೇಳುವಾಗ 'ಶಿವಾ ಶಿವಾ' ಎಂದು ತಲೆಗೆ ಕೈಯಿಟ್ಟರು. ''ಎಂಥಾ ಮೂರ್ಖಪ್ಪಾ ನಾನು... ನನ್ನ ಮನೆ ಬಾಗಿಲಿಗೆ ಬಂದ ಗಳಗನಾಥರನ್ನು ಗದರಿಸಿ ಕಳಿಸಿಬಿಟ್ಟೆನಲ್ಲ. ಸರಸ್ವತಮ್ಮನಿಗೆ ನನ್ನ ಮನೆಯಲ್ಲೇ ಅಪಮಾನ. ನನ್ನ ಮನೆಯಾಗೇ!

ಎಂದೋ ನಡೆದ ಘಟನೆ. ಎಷ್ಟೋ ಬಾರಿ ಅವರಿವರಿಗೆ ಹೇಳಿದ್ದರು- ಈ ಘಟನೆಯನ್ನು. ಈಗ ಮತ್ತೆ ಶಾಸ್ತ್ರಿಗಳಿಗೆ ಕಣ್ಣಂಚಿನಲ್ಲಿ ನೀರು. ಮುಂದುವರಿಸಿದರು, ಹೇಳುವುದನ್ನು. ''ಸತ್ತೆ ಕೆಟ್ಟೆ ಅಂತ ಒಂದೇ ಓಟ ಓಡಿದೆ, ನೋಡು'' ''ಶಿವಪೂಜೆ?'' ಎಂದು ಕೇಳಿದರಂತೆ ಬೀಚಿ. ''ಅಲ್ಲೋ, ಶಿವ ತಗೋತಾನೇನು ನನ್ನ ಪೂಜೇನ? ಬಾಗಿಲಿಗೆ ಬಂದ ಶಿವನನ್ನೆ ಬೈದು ಕಳಿಸಿ ಇಲ್ಲಿ ಪೂಜೆ ಮಾಡಿದ್ರೆ ಏನು ಬಂತು?'' ಎಂದರು.

ಗಳಗನಾಥರನ್ನು ಊರಲ್ಲಿ ಪತ್ತೆ ಮಾಡುವುದು ಕಷ್ಟವಾಗಲಿಲ್ಲ. ಹೊರಗಿನ ದೇವಸ್ಥಾನದ ಬಾವಿಯಲ್ಲಿ ಸ್ನಾನ ಮುಗಿಸಿ ಸಂಧ್ಯಾವಂದನೆ ಮಾಡುತ್ತಿದ್ದರು. ಅವರನ್ನು ಕಂಡು ದೂರದಿಂದಲೇ ಶಾಸ್ತ್ರಿಗಳು ದೀರ್ಘದಂಡ ನಮಸ್ಕಾರ ಮಾಡಿದರು. ''ನನ್ನಿಂದ ಮಹಾಪರಾಧ ಆಗಿಬಿಟ್ಟಿತು, ಸ್ವಾಮಿ'' ಎಂದು ಮತ್ತೊಮ್ಮೆ ನುಡಿದರು. ಗಳಗನಾಥರ ಸ್ಥಿತಿ ಏನಾಗಿರಬೇಕು! ಎದ್ದು ಬಂದವರೇ, ಶಾಸ್ತ್ರಿಗಳನ್ನು ಕೈಹಿಡಿದೆತ್ತಿ, ಪ್ರತಿ ನಮಸ್ಕಾರ ಮಾಡಿದರಂತೆ. ಗಳಗನಾಥರಿಗೆ ಶಾಸ್ತ್ರಿಗಳ ಆಗ್ರಹದ ಔತಣ. ಆದರೆ ವೀರಶೈವರಾದ ತಮ್ಮ ಮನೆಯಲ್ಲಿ ಅವರು ಉಣ್ಣುವಂತಿಲ್ಲ ಎಂದುಕೊಂಡು, ''ಬ್ಯಾಡ ಸ್ವಾಮಿ. ನೀವೇ ಅಡಿಗೆ ಮಾಡಿಕೊಳ್ಳಿ, ಅಕ್ಕಿ, ಹಾಲು, ಮೊಸರು, ಕಾಯಿಪಲ್ಲೆ- ಎಲ್ಲಾ ಕಳಿಸಿಕೊಡ್ತೇನಿ'' ಎಂದರು. ಶಾಸ್ತ್ರಿಗಳ ವಿಶ್ವಾಸ, ಸದ್ಭಾವಗಳಿಗೆ ಗಳಗನಾಥರು ಮಾರು ಹೋದರು.

ಇಂಥ ಘಟನೆಗಳಿಗೆ ಲೆಕ್ಕವೇ ಇಲ್ಲ. ಗಳಗನಾಥರ ಗ್ರಂಥಗಳು ನಾಡಿನ ಮೂಲೆ ಮೂಲೆಗೂ, ಹರಿದು ಹೋಗಿದ್ದವು. ಹಳ್ಳಿಪಳ್ಳಿಗಳ ಮನೆಯಲ್ಲಿ ಅವು ಇದ್ದಾಗ ನೆರಮನೆಗಳವರು ಒಯ್ದು ಓದಿ ಸಂತೋಷಿಸಿದವರ ಸಂಖ್ಯೆಯೂ ಅಪಾರ. ಹೀಗಿರುತ್ತ ಅವರು ಆಗಿನ ಜನಮನದಲ್ಲಿ ಆರಾಧ್ಯಮೂರ್ತಿಗಳಾಗಿದ್ದರೆನ್ನುವುದರಲ್ಲಿ ಸಂದೇಹವಿಲ್ಲ. ಗೃಹಿಣಿಯರು, ವೃದ್ಧರು, ಪಂಡಿತರು, ಹಳ್ಳಿಗರು, ಶಾಲಾ ವಿದ್ಯಾರ್ಥಿಗಳು - ಎಲ್ಲರಿಗೂ ಅವರ ಹೆಸರು ಅಚ್ಚುಮೆಚ್ಚಿನದಾಗಿತ್ತು. ಪ್ರಕೃತದ ಸಂಚಾರದಿಂದ ಅವರ ಸುಸ್ವಭಾವ, ಪರಿಶುದ್ಧ ಆಚಾರವಿಚಾರ ಹಾಗೂ ಯೋಗ್ಯತೆ ಸುಸ್ಪಷ್ಟವಾಗಿ ಗೋಚರಿಸಿ, ಅವರ ಲೇಖನದಂತೆ ಅವರ ವ್ಯಕ್ತಿತ್ವವೂ ದೊಡ್ಡದೆಂಬ ಪರಿಜ್ಞಾನ ಮೂಡಿತು.

೬. ಕೊನೆಯ ಘಟ್ಟದ ಕೃತಿಗಳು

'ಮಾಧವ ಕರುಣಾವಿಲಾಸ' ವನ್ನು ಬರೆದಾದ ಮೇಲೆ (೧೯೨೩) ಕೆಲವು ಕಾಲ ಗಳಗನಾಥರು ಕಾದಂಬರೀ ರಚನೆಗೆ ತೊಡಗಿರಲಿಲ್ಲ. ಲೇಖನಿಯನ್ನು ಅವರು ಮತ್ತೆ ಕೈಗೆತ್ತಿಕೊಂಡು 'ಸಂಸಾರ ಸುಖ' ಎನ್ನುವ ಕಾದಂಬರಿಯನ್ನು ಬರೆದರು (೧೯೨೬). ಇದು ಅಕ್ಬರನ ಸಂಸಾರದ ಕಥೆ. ಆದರೆ ರಾಜತೃಷ್ಣೆಯ ದಾಹದಲ್ಲಿ ಸಿಲುಕಿದವರಿಗೆ ಸುಖವೆಲ್ಲಿರುತ್ತದೆ? ಪಟ್ಟಕ್ಕೆ ಹಕ್ಕುದಾರನಾದ ಸಲೀಮನಿಗೆ ಬದಲಾಗಿ, ಅವನ ಮಗ ಖುಸ್ರುವಿಗೆ ಅಕ್ಬರನು ಪಟ್ಟಗಟ್ಟ ಬಯಸಿದ್ದಾಗ, ಸಲೀಮ ತನ್ನ ಮಗನ ಕಣ್ಣನ್ನೇ ಕೀಳಿಸುವಂಥ ಉದ್ವೇಗಕಾರವಾದ ಸನ್ನಿವೇಶ ಇಲ್ಲಿದೆ. ಕೊನೆಗೆ ಸಲೀಮನ ರಾಣಿ ನೂರ್‌ಜಹಾನಳು ಖುಸ್ರುವಿನ ಕೊಲೆಗೈಸುತ್ತಾಳೆ. ಹಲವಾರು ಆವಿದ್ಧ ಸನ್ನಿವೇಶಗಳಿಂದ ಕೂಡಿದ ಈ ಕಾದಂಬರಿಯು ರಂಜನೀಯವಾಗಿದೆ. ಇದರ ಪಾತ್ರಗಳೆಲ್ಲ ಸುಖ ಲೋಲುಪವಾಗಿರುವಂತೆ ತೋರುವುದರಿಂದ ಸಂಸಾರಸುಖವು ಲೋಕೋಪಕಾರಕವಿರುತ್ತದೆಂಬ ವಿವರಣೆಯನ್ನು ಗಳಗನಾಥರು ತಮ್ಮ ಪ್ರಸ್ತಾವನೆಯಲ್ಲಿ ನೀಡಿದ್ದಾರೆ. ಮುಂದುವರಿದು "ಪ್ರಿಯ ವಾಚಕರೆ, ರಾಜ ಸಂಸಾರದಲ್ಲಿ ಇಂತಹ ಕಲಹ, ಕೊಲೆ, ಮೋಸಗಳು ದೊಡ್ಡ ಪ್ರಮಾಣದಲ್ಲಿ ಕಂಡುಬಂದರೆ ಬಡವರ ಸಂಸಾರದಲ್ಲಿ ಅವು ಸಣ್ಣ ಪ್ರಮಾಣದಲ್ಲಿ ಕಂಡುಬರುವವು" ಎಂದು ನುಡಿದಿದ್ದಾರೆ.

ಇತ್ತ 'ರಾಣಾರಾಜಸಿಂಹ' ಕಾದಂಬರಿಯೂ ಔರಂಗಜೇಬ ಹಾಗೂ ರಾಣಾ ರಾಜಸಿಂಹ ಇವರ ನಡುವಿನ ಘರ್ಷಣೆಯನ್ನು ಚಿತ್ರಿಸುತ್ತದೆ. ಔರಂಗಜೇಬನು ರೂಪನಗರದ ರಾಜಪುತ್ರಿ - ಚಂಚಲ ಕುಮಾರಿಯನ್ನು ಮದುವೆಯಾಗಬಯಸಿದಾಗ ರಾಣಾ ರಾಜಸಿಂಹನು ಗುಪ್ತವಾಗಿ ಧಾವಿಸಿ ಬಂದು (ರುಕ್ಮಿಣಿಯ ಪತ್ರರೂಪೀ ಮೊರೆಯನ್ನು ಕೇಳಿದ ಶ್ರೀಕೃಷ್ಣನಂತೆ) ಅವಳನ್ನು ಕರೆದೊಯ್ಯುತ್ತಾನೆ. ಗಳಗನಾಥರು ಈ ಕಾದಂಬರಿಯಲ್ಲಿ 'ಔರಂಗಜೇಬನಂತಹ ಬಲಾಢ್ಯ ಶತ್ರುವಿನ ಶಕ್ತಿಸರ್ವಸ್ವದ ಅಬ್ಬರದಲ್ಲಿಯೂ ತನ್ನ ಕೆಚ್ಚುಗಟ್ಟಿದ ಕ್ಷಾತ್ರವೃತ್ತಿಯನ್ನು ರಾಣಾರಾಜಸಿಂಹನು ತೋರಿಸುವುದನ್ನು, ನಮ್ಮ ಗಮನಕ್ಕೆ ತಂದಿರುವುದಾಗಿ ಹೇಳಿದ್ದಾರೆ. ಜೊತೆಗೆ

ಮನುಷ್ಯರ ಮೇಲೆ ಸತ್ಯ ಮಾರ್ಗದ, ಅದರಂತೆ ದುಷ್ಟ ಸಹವಾಸದ, ಪರಿಣಾಮಗಳನ್ನು ಚಿತ್ರಿಸುವ ಉದ್ದೇಶವನ್ನು ಗಳಗನಾಥರು ಇಟ್ಟುಕೊಂಡಿದ್ದರು.

ರಜಪೂತರ ವಿಷಯವಾಗಿ ಗಳಗನಾಥರು ಬರೆದ ಕೊನೆಯ ಕಾದಂಬರಿ 'ಧಾರ್ಮಿಕ ತೇಜ' ಎಂಬುದು. ಬುಂದೇಲಖಂಡದ ರಜಪೂತರು ತಮ್ಮ ಒಳಜಗಳಗಳ ಮೂಲಕ ಔರಂಗಜೇಬನಿಂದ ಹತವೀರ್ಯರಾಗಿ, ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡಾಗ, ಪ್ರಾಣನಾಥ ಪ್ರಭುವೆಂಬ ಗುರು ಅವರನ್ನು ಹುರಿದುಂಬಿಸಿ ಛತ್ರಸಾಲ ಎಂಬ ವೀರನಿಂದ ಸ್ವರಾಜ್ಯ ಸ್ಥಾಪನೆ ಮಾಡಿಸುತ್ತಾರೆ. ಇಲ್ಲಿ ಛತ್ರಸಾಲನು ಕಥಾನಾಯಕ; ಮೂಲ ಮರಾಠೀ ಕಾದಂಬರಿಯ ಶೀರ್ಷಿಕೆಯು ಅವನ ಹೆಸರಿನದೇ ಆಗಿದ್ದರೂ ಗಳಗನಾಥರು ತಮ್ಮ ಎಂದಿನ ಧಾರ್ಮಿಕ ಪಕ್ಷಪಾತಕ್ಕನುಗುಣವಾಗಿ ಕಾದಂಬರಿಗೆ 'ಧಾರ್ಮಿಕ ತೇಜ'ವೆಂದು ನಾಮಕರಣ ಮಾಡಿದ್ದಾರೆ.

ಇದಾದ ಮೇಲೆ ಅವರು ಕಾದಂಬರೀ ಪ್ರಕಾರವನ್ನು ಕೆಲಕಾಲ ಕೈಬಿಟ್ಟು, ಶುದ್ಧಾಂಗವಾಗಿ ಧಾರ್ಮಿಕವೆನಿಸುವ ಕೃತಿರಚನೆಯತ್ತ ಮನಗೊಟ್ಟರು. ಅದರ ಮೂಲ ಕಾರಣ ಅವರ ಷಷ್ಟ್ಯಬ್ದಿಪೂರ್ತಿ.

ಬೆಂಗಳೂರಿನಿಂದ ಹಿಂತಿರುಗಿದ ಕಾಲಕ್ಕೇ ಗಳಗನಾಥರಿಗೆ ಅರವತ್ತು ವರ್ಷದ ಗಡುವು ಸಮೀಪಿಸಿತ್ತು. ಸದಾ ಕರ್ತವ್ಯನಿರತರಾಗಿದ್ದ ಅವರ ಆಯುಷ್ಯಕ್ರಮಣವು ಸಾಗಿದ್ದರಲ್ಲಿ ಕಳೆದು ಹೋದ ಆಯುರ್ಮಾನದ ಕಲ್ಪನೆಯೇ ಅವರಿಗಿದ್ದಿಲ್ಲ. ಅಂತೂ ಧರ್ಮಪರಾಯಣರಾದ ಅವರು ತಮ್ಮ ಷಷ್ಟ್ಯಬ್ದಿ ಸಮಾರಂಭವನ್ನು ವೈಭವದಿಂದ ಆಚರಿಸಿದರು (೧೯೨೯). ತುಲಾಭಾರ ಮೊದಲಾದ ಧಾರ್ಮಿಕ ಕಾರ್ಯಗಳ ಜೊತೆಗೆ ಕೀರ್ತನ, ಪ್ರವಚನಗಳು ವಿಶೇಷ ಸಂಭ್ರಮದಿಂದ ಜರುಗಿದವು. ಕೆಲವು ದಿನಗಳು ಕಳೆದ ಬಳಿಕ ಕೂಡಲಿ ಶೃಂಗೇರಿ ಮಠದ ಯತಿಜನರನ್ನು ಬರಮಾಡಿಕೊಂಡು ಅವರ ಆಶೀರ್ವಾದವನ್ನು ಪಡೆದರು. ಹೀಗಾಗಿ ಧಾರ್ಮಿಕ ಕೃತಿರಚನೆಯತ್ತ ಮನದೊಲವು ಹರಿಯಿತು.

ಈ ಹಿಂದೆ ಭಾಗವತವನ್ನು ಹಾಗೂ ಶಿವಮಹಿಮೆಯನ್ನು ಕನ್ನಡಿಗರಿಗಾಗಿ ಒದಗಿಸಿದ್ದರು. ವಾಲ್ಮೀಕಿ ರಾಮಾಯಣವನ್ನು ರೂಪಾಂತರಿಸಬೇಕೆಂದೇನೊ ಇಟ್ಟುಕೊಂಡಿದ್ದರು. ಆದ್ದರಿಂದ ತುಳಸೀದಾಸ ರಾಮಾಯಣವನ್ನು ಕೂಡಾ ಅನುವಾದಿಸಿದ್ದರು. (೧೯೩೯). ಈಗುಳಿದದ್ದು ಮಹಾಭಾರತ ಒಂದೇ.

ಬೆಂಗಳೂರ ಯಾತ್ರೆಗೆ ಮುನ್ನವೇ ಅದರ ಅನುವಾದ ಕಾರ್ಯವನ್ನು ಆರಂಭಿಸಿದ್ದರು. ಆ ಮುಂದಿನ ಎರಡು ವರ್ಷಗಳಲ್ಲಿ ಅದನ್ನು ಮುಗಿಸಬೇಕೆಂದು ಸಂಕಲ್ಪ ಮಾಡಿದ್ದರು. ಕಾರ್ಯೋದ್ಯುಕ್ತರಾಗಿದ್ದಾಗಿನ ಲೇಖನ ಸಾಹಸ ಮೆಚ್ಚಬೇಕಾದದ್ದು. ಈ ಮಧ್ಯೆ ಅವರ ಇಬ್ಬರು ಮೊಮ್ಮಕ್ಕಳು ತೀರಿಹೋದರು. ಈ ರೀತಿಯ ಕೌಟುಂಬಿಕ ತಾಪತ್ರಯಗಳಿದ್ದರೂ ತಮ್ಮ ಸದ್ಗುರುವಿನ ಪ್ರಭಾವ ಹಾಗೂ ಷಷ್ಟ್ಯಬ್ದಿ ಕಾಲದ ಗುರುಹಿರಿಯರ ಆಶೀರ್ವಾದವು ತಮ್ಮ ಬೆಂಬಲಕ್ಕಿದೆಯೆಂದು ನಂಬಿ ಮುಂದುವರಿದರು. ಮಹಾಭಾರತದ ಅನುವಾದ ಕಾಲದಲ್ಲಿ ಚಿಪಳೂಣಕರರ ಹಾಗೂ ಅವರ ಸಹಲೇಖಕರ ಮರಾಠಿ ಅನುವಾದವೂ, ಮೈಸೂರ ಮಹಾರಾಜರ ಕೃಪೆಯಿಂದ ಪ್ರಕಟವಾಗಿದ್ದ ಕೃಷ್ಣರಾಜವಾಣಿವಿಲಾಸದ ಕನ್ನಡ ರೂಪವೂ ಗಳಗನಾಥರ ಅನುವಾದಕ್ಕೆ ಆಸರೆಯಾದವು. ಕೆಲವೇ ತಿಂಗಳಲ್ಲಿ ಆದಿಪರ್ವದ ಅನುವಾದವನ್ನು ಮುಗಿಸಿಬಿಟ್ಟರು.

ಈ ಮಧ್ಯೆ ಮೈಸೂರು ಮಹಾರಾಜಾ ಕಾಲೇಜಿನ ಕರ್ನಾಟಕ ಸಂಘದಿಂದ ಆಮಂತ್ರಣ ಬಂದಿತು. ಅದರ ಹಿನ್ನೆಲೆಯೆಂದರೆ ಎರಡು ವರ್ಷಗಳ ಹಿಂದೆ ಬೆಂಗಳೂರಿಗೆ ಹೋದಾಗ ಮೈಸೂರವರು, ತಮ್ಮಲ್ಲಿಗೂ ಗಳಗನಾಥರು ಬರಬಹುದೆಂದು ನಿರೀಕ್ಷಿಸಿದ್ದರೂ ಕೈಗೂಡಿರಲಿಲ್ಲ. ಅಂತೂ ೧೯೨೯ರ ಕೊನೆಯಲ್ಲಿ ಅವರನ್ನು ಬರಮಾಡಿಕೊಂಡರು. ಆ ಕಾಲಕ್ಕೆ ಗಳಗನಾಥರಿಗೆ ಅರ್ಪಿಸಿದ ಮಾನಪತ್ರದಲ್ಲಿಯ ಕೆಲವು ವಾಕ್ಯಗಳು ಗಮನಿಸುವಂತಿವೆ.

''ಈಗ ಮೂವತ್ತು ವರ್ಷಗಳಿಂದಲೂ ತಾವು ನಮ್ಮ ಸಾಹಿತ್ಯದ ಏಳ್ಗೆಗಾಗಿ ಶ್ರಮವೆಣಿಸದೆ ದುಡಿಯುತ್ತಿದ್ದೀರಿ. ಕನ್ನಡಿಗರಿಗೆಲ್ಲ ಐಕ್ಯಮತ ಭಾವವನ್ನು ಬಲಪಡಿಸುವುದರಲ್ಲಿ ತಮ್ಮ ಕಾದಂಬರಿಗಳಿಂದ ವಿಶೇಷ ಸಹಾಯವು ದೊರೆತಿರುವುದನ್ನು ಇಲ್ಲಿ ಹೇಳದಿರಲಾರೆವು. ಉತ್ತರ ಕರ್ನಾಟಕದೊಡನೆ ಬಳಕೆ ನಮ್ಮ ಮೈಸೂರು ಕಡೆಯವರೆಗೆ ಮುಖ್ಯವಾಗಿ ಉಂಟಾದುದು, ಅಲ್ಲಿಯ ಲೇಖಕರಲ್ಲಿ ಅಗ್ರಗಣ್ಯರಾದ ತಮ್ಮ ಮೂಲಕವೇ. ಪರಿಣತಿಯಿಂದಲೂ ಗ್ರಂಥಸಮೃದ್ಧಿಯಿಂದಲೂ ತಾವು ಅಖಿಲ ಕರ್ನಾಟಕಕ್ಕೆ ಪೂಜ್ಯರಾಗಿದ್ದೀರಿ, ಭೂಷಣರಾಗಿದ್ದೀರಿ... ಈ ವಯಸ್ಸಿನಲ್ಲಿ ಕೂಡ ತಾವು ಉತ್ಸಾಹದಿಂದಲೂ ಏಕನಿಷ್ಠೆಯಿಂದಲೂ ಮಾಡುತ್ತಿರುವ ಸಾಹಿತ್ಯ ಸೇವೆಯನ್ನು ನೋಡಿ ತರುಣರಾದ ನಾವೆಲ್ಲ ನಾಚಿ ತಮ್ಮಿಂದ ಉದ್ಯೋಗಶೀಲತೆಯ ಪಾಠವನ್ನು ಕಲಿಯಬೇಕಾಗಿದೆ...

ಈ ಆಮಂತ್ರಣ ಹಾಗೂ ಮಾನಪತ್ರದ ಸೂತ್ರಧಾರರು, ಕನ್ನಡದ ಕಣ್ವರೆನಿಸಿದ್ದ ಬಿ.ಎಂ. ಶ್ರೀಕಂಠಯ್ಯನವರು. ಅದರ ಬಗ್ಗೆ ಗಳಗನಾಥರಿಗೂ ಅದೆಂಥ ಗೌರವ! ತಾವು ಅದೇ ಮುಗಿಸಿದ್ದ ಆದಿಪರ್ವದ ಹಸ್ತಪ್ರತಿಯನ್ನು ಬಿ.ಎಂ. ಶ್ರೀಯವರ ಮುಂದಿರಿಸಿ ''ಇದನ್ನು ತಾವು ಮುಟ್ಟಿ ಆಶೀರ್ವದಿಸಬೇಕು'' ಎಂದು ಕೇಳಿದರಂತೆ. ಆಗ ಶ್ರೀಯವರ ಹೃದಯವು ತುಂಬಿಬಂದು ''ಇದನ್ನು ಮುಟ್ಟುವ ಯೋಗ್ಯತೆಯೂ ನನಗಿಲ್ಲ'' ಎಂದರಂತೆ.

ಮಹಾಭಾರತದ ಮೊದಲ ಸಂಪುಟವಾದ ಆದಿಪರ್ವವು, ಚಿತ್ರಸಹಿತವಾಗಿ ಮುದ್ರಣಕ್ಕೆ ಸಿದ್ಧವಾಗಿದ್ದಿತು. ಅದರ ವೆಚ್ಚಕ್ಕಾಗಿ ಮತ್ತೆ ಜೋಳಿಗೆ ಹಿಡಿದರು. ಸುಮಾರು ಹನ್ನೆರಡು ಸಾವಿರ ರೂಪಾಯಿಗಳು ಸಂಗ್ರಹವಾದವು. ಹಾವೇರಿಯವರೆ ಆದ ಮಾಗಾವಿ ಬಂಧುಗಳಂತೂ (ಸುಪ್ರಸಿದ್ಧ ವ್ಯಾಪಾರಸ್ಥರು), ಇವರು ಕೇಳಿದಾಗಲೆಲ್ಲ ಹಣ ಮತ್ತು ಸಾಮಗ್ರಿಗಳನ್ನು ಕೊಡುತ್ತಿದ್ದರು. ಬೆಂಗಳೂರಿನ ಅಬ್ದುಲ್ ಮಜೀದ್ ಎಂಬವರು ಉದ್ದರಿಯಾಗಿ ಕಾಗದ ಪೂರೈಸಿದರು.

ಬೆಂಗಳೂರಲ್ಲಿ ಆದಿಪರ್ವದ ಮುದ್ರಣ ಮುಗಿಸಿಕೊಂಡು ಹಿಂತಿರುಗಿದ ಮೇಲೆ (೧೯೩೧) ತಮ್ಮ ಸ್ವಂತ ಮುದ್ರಣಾಲಯವನ್ನು ಪುನಹ ಆರಂಭಿಸಿದರು. ಮುಂದಿನ ಎಂದರೆ ಸಭಾಪರ್ವ ಹಾಗೂ ವನಪರ್ವದ ಕೆಲ ಭಾಗ-ಇವುಗಳನ್ನೊಳಗೊಂಡ ಎರಡನೆಯ ಸಂಪುಟ ಅವರ ಪ್ರೆಸ್ಸಿನಲ್ಲಿಯೇ ಸಿದ್ಧವಾಯಿತು. ಇದಕ್ಕೂ ಅಷ್ಟಿಷ್ಟು ಹಣವನ್ನು ಅವರಿವರಿಂದ ಸಾಲ ಪಡೆದೇ ಕೆಲಸ ನಡೆಸಿದರು.

ತಮ್ಮ ಸಾಹಿತ್ಯಿಕ (ಹಾಗೂ ಧಾರ್ಮಿಕ) ಕಾರ್ಯಗಳಿಗಾಗಿ ಹೀಗೆ ಸಾಲ ಕೇಳುವುದು ಕಳೆದ ೧೫ ವರ್ಷಗಳಿಂದ ನಡೆದಿತ್ತು. ಹಣವನ್ನು ಪಡೆದು ಅದನ್ನು ಆಮೇಲೆ ಹಿಂದಿರುಗಿಸುತ್ತಿದ್ದರು. ಅದು ಕೈಗೂಡದಿದ್ದಾಗ ತಾವಾಗಿ ತಿಳಿಸುತ್ತಿದ್ದರು. ವ್ಯವಹಾರದಲ್ಲಿಯ ಈ ಪ್ರಾಮಾಣಿಕತೆಯೇ ಅವರ ಸಾಲ ವಿಚಾರದ ಸಫಲತೆಗೆ ಕಾರಣವಾಗಿದ್ದಿತು. ಅನೇಕರು ಹಣವನ್ನು ಹಿಂತಿರುಗಿಸುವುದು ಬೇಡ ಎಂದು ಹೇಳುತ್ತಿದ್ದುದೂ ಉಂಟು. ಜನರು ಅವರಿಗೆ ಹೀಗೆ ನೆರವಾಗುವಲ್ಲಿ, ಜಾತಿ-ಮತ, ಬಡವ-ಶ್ರೀಮಂತ ಎಂಬ ಪರಿಸ್ಥಿತಿ ಇದ್ದಿರಲಿಲ್ಲ.

ಇನ್ನೂ ಮಹಾಭಾರತದ ಮುಂದಿನ ಭಾಗಗಳು ಪ್ರಕಟವಾಗಬೇಕಲ್ಲವೆ? ಅದಕ್ಕಾಗಿ ಗಳಗನಾಥರು ಈ ರೀತಿಯಾಗಿ ಮನವಿ ಮಾಡಿಕೊಂಡರು.

''ಈಗ ಮೂವತ್ತು ವರ್ಷಗಳಿಂದ ಕನ್ನಡಿಗರ ಸೇವೆಗಾಗಿ ಹಾಗೂ ಸಂಸ್ಕೃತ ವಿದ್ಯಾದಾನದ ಕಾರ್ಯಕ್ಕಾಗಿ ೬೦-೭೦ ಸಾವಿರ ರೂಪಾಯಿ ಸಾಲಮಾಡಿ

ತೀರಿಸುವಾಗ 'ಮೊದಲು ನಾನು ಸಾಲ ಮಾಡಿ ಪುಸ್ತಕ ಛಾಪಿಸಬೇಕು' ಈ ರೀತಿಯನ್ನು ಅನುಸರಿಸಿದಾಗಿದೆ. ಇನ್ನು ಮೇಲಾದರೂ ಕನ್ನಡಿಗರ ಸೇವೆಯನ್ನು ದೇಹದಂಡನೆ ಮನೋದಂಡನೆಗಳಿಂದ ಬೇಕಾದಷ್ಟು ಮಾಡುವೆನು. ಆದರೆ ದುಡ್ಡಿಗಾಗಿ ಮಂದಿಗೆ ಬಾಯಿ ತೆಗೆಯುವುದು ಇಲ್ಲಿಗೆ ಸಾಕು. ನನ್ನ ಪ್ರೀತಿಯ ಕನ್ನಡಿಗರು ಇಳಿವಯಸ್ಸಿನ ನನ್ನ ಈ ಕೊಳೆಪಾಟವನ್ನು ಇನ್ನು ದೂರ ಮಾಡಬೇಕು. ಈಗಾಗಿರುವ ಸಾಲವನ್ನು ಆದಿಪರ್ವ ಭಾರತದ ಐದು ಸಾವಿರ ಪ್ರತಿಗಳನ್ನು ಮಾರಿ ತೀರಿಸಬೇಕೆಂತಲೂ ಇನ್ನು ಮುಂದೆ ಯಾವ ಕೆಲಸಕ್ಕೂ ಸಾಲ ಮಾಡಲಿಕ್ಕಿಲ್ಲವೆಂತಲೂ ಪ್ರತಿಜ್ಞೆ ಮಾಡಿರುವೆನು. ನಾನು ಸೇವೆಮಾಡುತ್ತ ಸಾಲಗಾರನಾಗಿಯೇ ಇರುವುದು ನನ್ನ ಪ್ರಿಯ ಕನ್ನಡಿಗರಿಗೆ ಭೂಷಣವಾಗಬಹುದೇ?''

ಮರುವರ್ಷ 'ಶ್ರೀ ವೆಂಕಟೇಶ ಮಹಾತ್ಮ್ಯ'ವನ್ನು ಪ್ರಕಟಿಸುವಾಗಲೂ ಇದೇ ಬಗೆಯ ಮಾತು ಕೇಳಿಬರುತ್ತದೆ.

''ನಾವು ದೀರ್ಘ ಋಣದಿಂದ ಪೀಡಿತರಾಗಿರುವಾಗ ಆ ಋಣದ ವಿಮೋಚನೆಗಾಗಿ ಶ್ರೀ ವೆಂಕಟೇಶ ಮಹಾತ್ಮ್ಯದ ಎರಡನೆಯ ಆವೃತ್ತಿಯನ್ನು ಹೊರಡಿಸಿರುವೆವು. ಯಾಕೆಂದರೆ ಬಡವನಾದ ನಾನು ಮಹಾಭಾರತದ ಪ್ರಿಂಟಿಗಾಗಿ ೧೨ ಸಾವಿರ ರೂಪಾಯಿ ಸಾಲ ಮಾಡುವಾಗ ಎಷ್ಟು ಕಷ್ಟ ಪಟ್ಟಿರಬಹುದೆಂಬುದನ್ನು ತಿಳಿಯಲು ಆ ಶ್ರೀನಿವಾಸನೇ ಸಮರ್ಥನು. ನಾನು ಋಣ ವಿಮೋಚನೆಗಾಗಿ ಭಗವಂತನನ್ನು ಹೀಗೆ ಪ್ರಾರ್ಥಿಸುವೆನು; ಲೋಕೇಶನಾದ ನೀನು ಸಾಲಕ್ಕಾಗಿ ಪೇಚಾಡಿರಲು ಕ್ಷುದ್ರನಾದ ನಾನು ನೀಗಲಾರದ ಸಾಲದಿಂದ ಎಷ್ಟು ಹಣ್ಣಾಗಿರಬಹುದೆಂಬುದನ್ನು ನನ್ನ ಹೃದಯ ಸಂಸ್ಥಾನದ ನೀನು ತಿಳಿದು ನನ್ನನ್ನು ಋಣಮುಕ್ತನನ್ನಾಗಿ ಮಾಡಿ ಉದ್ಧರಿಸು. ಲಕ್ಷ್ಮೀಪತಿಯಾದ ನಿನಗೆ ಸಾಲವು ಹಳಸಾಗಿರಬಹುದು. ಆದರೆ ಹುಟ್ಟು ಬಡವನಾದ ನಾನು ಕೈಗೊಂಡಿದ್ದ ಪರೋಪಕಾರದ ಕಾರ್ಯಕ್ಕಾಗಿ ಮೇಲಿನಿಂದ ಮೇಲೆ ಮಂದಿಯ ಮೋರೆ ನೋಡಬೇಕಾಗಿರಲು, ನನಗೆ ಸಾಲವು ಒಪ್ಪಬಹುದೆ? ಶ್ರಿಯಃ ಪತಿಯೇ, ನಿನ್ನ ಕೃಪೆಯಿಂದ ನಾನು ಋಣ ವಿಮೋಚನೆಯ ಸುದಿನವನ್ನು ಕಂಡೇನೇನು? ಅಂಥ ಸುದಿನದಲ್ಲಿ ನಾನು ಪುನರ್ಜನ್ಮವನ್ನು ಹೊಂದಿದವನಂತೆ ವಿದ್ಯಾದಾನ, ಪರೋಪಕಾರದ ಕಾರ್ಯಗಳಲ್ಲಿ ಜಾಗೃತಿಯನ್ನೂ ತತ್ಪರತೆಯನ್ನೂ ತೋರಬಹುದೇನು?''

ಗಳಗನಾಥರ ಈ ಮೊರೆಯನ್ನು ಶ್ರಿಯಃ ಪತಿಯು ಮಹಾಭಾರತಾಮೃತದ ಎರಡನೆಯ ಸಂಪುಟದ ಮಟ್ಟಿಗೆ ಮಾತ್ರವೆ ಕೇಳಿದನೆನ್ನಬೇಕು. ಅದರ ಪೀಠಿಕೆಯಲ್ಲಿ

ಪುನಃ ಕನ್ನಡಿಗರಿಂದ ಆರ್ಥಿಕ ಸಹಾಯದ ಪ್ರಾರ್ಥನೆ ಮಾಡಿದರು. ಆದರೆ ಇದಾವುದೂ ಫಲ ಕೊಡಲಿಲ್ಲ. ಮಹಾಭಾರತದ ಮುಂದಿನ ಸಂಪುಟಗಳನ್ನು ಹೊರತರಲೇ ಇಲ್ಲ.

ಕ್ರಿ.ಶ. ೧೯೩೩ರಿಂದ ಮುಂದಿನ ಐದು ವರ್ಷಗಳಲ್ಲಿ ಗಳಗನಾಥರ ಯಾವ ಹೊಸ ಗ್ರಂಥವೂ ಹೊರಬರಲಿಲ್ಲ. ಇದ್ದ ಪುಸ್ತಕಗಳನ್ನೇ ಮಾರಾಟ ಮಾಡುತ್ತ ಸಾಲವನ್ನು ಸಣ್ಣ ಪ್ರಮಾಣದಲ್ಲಿ ತೀರಿಸುತ್ತ ಇದ್ದರು. ಆದಾಗ್ಯೂ ೧೯೩೭ರ ಸುಮಾರಿಗೆ ೯ ಸಾವಿರಕ್ಕೆ ಮೇಲ್ಪಟ್ಟು ಸಾಲ ಉಳಿದಿತ್ತು. ಸಂಸಾರದ ವೆಚ್ಚವೂ ಬೆಳೆದಿತ್ತು. ಆದ್ದರಿಂದ ತಮ್ಮ ಇದ್ದಬಿದ್ದ ಆಸ್ತಿಯನ್ನು ಅಡವು ಇಟ್ಟು ಸಾಲ ಕೊಟ್ಟವರೊಡನೆ ಕಂತಿನಿಂದ ಸಾಲ ಮುಟ್ಟಿಸುವ ಎಗ್ರಿಮೆಂಟ್ ಮಾಡಿಕೊಂಡರು. ಎಗ್ರಿಮೆಂಟಿನ ಪ್ರಕಾರ ವರ್ಷಕ್ಕೆ ೧೨೦೦ ರೂಪಾಯಿ ಗಳಿಸಬೇಕಿತ್ತು. ಆದಕ್ಕಾಗಿ ಮರಳಿ ಲೇಖನಿಯನ್ನು ಎತ್ತಿಕೊಂಡರು.

ಈಗ ಹೊರ ಬಂದ ಕಾದಂಬರಿಯೇ 'ಸ್ವರಾಜ್ಯ ಸುಗಂಧ', ಎರಡೇ ತಿಂಗಳಲ್ಲಿ ಬರೆದು ಮುಗಿಸಲಾದ ಈ ಐತಿಹಾಸಿಕ ಕಥಾನಕವು ಇತರ ಕಾದಂಬರಿಗಳಂತೆಯೇ ವಾಚನೀಯತೆಯನ್ನು ಅಪ್ಪಟವಾಗಿ ಉಳಿಸಿಕೊಂಡದ್ದು ಕೌತುಕಮಯವಾಗಿದೆ. ಮುಸಲ್ಮಾನರ ವಶದಲ್ಲಿದ್ದ ಕಲ್ಯಾಣ ಕೋಟೆಯನ್ನು ಶಿವಾಜಿಯ ಬಂಟರಾದ ನೇತಾಜಿ ಪಾಲಕರ, ಆಬಾಜಿ ಸೋನದೇವ ಮತ್ತು ವೆಂಕಾಜಿ ವಾಘ- ಇವರು ವಶಪಡಿಸಿಕೊಂಡಿದ್ದರ ಘಟನೆ ಇಲ್ಲಿದೆ. ಶಿವಾಜಿಯ ಪರನಾರಿ ಸೋದರತ್ವವು ಪ್ರಾಸಂಗಿಕವಾಗಿ ವ್ಯಕ್ತವಾಗಿದೆ.

''ಈ ಕಾದಂಬರಿಯ ವಿಷಯದಲ್ಲಿ ಎರಡು ಮಾತು ಬರೆಯುವುದು ಅವಶ್ಯವಾಗಿದ್ದರೂ ನಮಗೆ ಬೇರೆ ಪುಸ್ತಕಗಳನ್ನು ಬೇಗನೆ ಬರೆಯುವ ಅವಸರವಿದ್ದದ್ದರಿಂದ ಈಗ ನಾವು ಒಂದು ಮಾತನ್ನು ಕೂಡಾ ಬರೆಯುವುದಿಲ್ಲ... ನಮಗೆ ಹೋದ ಪುಷ್ಯ ಮಾಸಕ್ಕೆ ಎಪ್ಪತ್ತು ವರ್ಷಗಳು ತುಂಬಿಹೋದವು. ನಮ್ಮ ವೃದ್ಧಾಪ್ಯವನ್ನು ಈಶ್ವರಾರಾಧನೆ, ಅತಿಥಿಸೇವೆ, ಗೋಸೇವೆ ಮುಂತಾದ ತಾರಕ ಕಾರ್ಯಗಳನ್ನು ಮಾಡುತ್ತ ಶಾಂತಿದಾಯಕಗಳಾದ ಆಧ್ಯಾತ್ಮಿಕ ಗ್ರಂಥಗಳನ್ನು ಬರೆಯುತ್ತ ಸ್ವಸ್ಥವಾಗಿ ಮನೆಯಲ್ಲಿರಬೇಕೆಂದು ಮಾಡಿದ್ದೇವೆ'' ತಕ್ಷಣ ಹಣ ದೊರೆಯಬೇಕಾದರೆ ಕಾದಂಬರಿಗಳನ್ನೇ ಬರೆಯಬೇಕೆಂದು ಯೋಚಿಸಿ 'ದುರ್ಗದ ಬಿಚ್ಚುಗತ್ತಿ' ಎಂಬ ಇನ್ನೊಂದು ಐತಿಹಾಸಿಕ ಕೃತಿಯನ್ನು ರಚಿಸಿದರು. ಇಲ್ಲಿಯ

ದುರ್ಗವೆಂದರೆ ಈಗಿನ ಚಿತ್ರದುರ್ಗ. ಅಲ್ಲಿಯ ಪಾಳೆಯಗಾರ ಭರಮನಾಯಕ ಮತ್ತು ಮುದ್ದಣ್ಣ ಇವರ ನಡುವಿನ ಘರ್ಷಣೆ ಚಿತ್ರಿತವಾಗಿದೆ. ಈ ಕಥಾನಕದಲ್ಲಿ ಮುರುಗೇಶ ಗುರುಗಳ ಮತ್ತು ಓರ್ವ ರಣಹುಚ್ಚಿ ಇವರ ಪಾತ್ರಗಳು ಬಂದಿವೆ. ಆದರೆ ಕಾದಂಬರಿಯಲ್ಲಿ ಆಧ್ಯಾತ್ಮಿಕ ಧಾರ್ಮಿಕ ಉಪದೇಶವು ಮೇಲ್ವಾಯ್ದು, ವಾಚನೀಯತೆಯನ್ನು ಕಳೆದುಕೊಂಡಿದೆ. ಕಾದಂಬರಿಯ ಮೊದಲ ಭಾಗವು ಮಾತ್ರ ಹೊರಬಂದು, ಇನ್ನೊಂದು ಬೆಳಕು ಕಾಣಲಿಲ್ಲ.

ಅವರ ಮುಂದಿನ ಕಾದಂಬರಿ 'ಕಲಿಕುಠಾರ'ವಾದರೂ ಎರಡು ಭಾಗಗಳದ್ದು, ಇಲ್ಲಿ ಎರಡನೆಯ ಭಾಗವು ಮಾತ್ರ ಪ್ರಕಟವಾಯಿತು. ಪ್ರಾಯಶಃ ಅವರಿಗೆ ಕಥಾನಕದ ಉತ್ತರಾರ್ಧದಲ್ಲಿ ಬರಬಹುದಾಗಿದ್ದ 'ಲೋಕಾಪುರ ಪೀಠ' ಎಂಬ ಧಾರ್ಮಿಕ ಪರಂಪರೆಯ ಚರಿತ್ರೆ ಹೇಳುವ ಅಗತ್ಯವೆನಿಸಿತು. ಯಥಾಪ್ರಕಾರ ಇಲ್ಲಿಯೂ ಧಾರ್ಮಿಕ ಶ್ರದ್ಧೆಯದೇ ಮೇಲುಗೈ.

೭. ಸ್ವಭಾವ ಪರಿಚಯ

ಗಳಗನಾಥರದು ಸರಳಮನಸ್ಸಿನ ಸ್ವಾಭಿಮಾನಪೂರ್ಣವಾದ ವ್ಯಕ್ತಿತ್ವ, ಹೃದಯ ವೈಶಾಲ್ಯವೇ ಅದರ ತಳಪಾಯ. ವಿಚಾರಸರಣಿ, ಮಾತುಕತೆ ಮತ್ತು ಕಾರ್ಯಾಚರಣೆ ಈ ತ್ರಿಕರಣ ಸಿದ್ಧಿಯೇ ಅವರ ಬದುಕಿನ ಜೀವನಾಡಿ. ಗಳಗನಾಥರು ಸನಾತನ ಧರ್ಮದ ಕಟ್ಟಾಭಿಮಾನಿಗಳಾಗಿದ್ದರೂ ಧಾರ್ಮಿಕ ಡಂಭಾಚಾರವು ಅವರಿಗೆ ಸೇರುತ್ತಿರಲಿಲ್ಲ. ಅವರ ಜೀವನದಲ್ಲಿ ನಡೆದ ಒಂದೆರಡು ಘಟನೆಗಳ ಮೂಲಕ ಅವರ ಗುಣ-ಸ್ವಭಾವ ಕಲ್ಪನೆಯನ್ನು ತಂದುಕೊಳ್ಳುವಾ.

ಊರಿಗೆ ಬಂದಿದ್ದ ಸ್ವಾಮಿಗಳೊಬ್ಬರ ಪಾದಪೂಜೆ ಮಾಡಿಸಿದ್ದ ಗಳಗನಾಥರಿಗೆ ಒಂದು ದಿನ ರಾತ್ರಿಯ ಮಂಗಳಾರತಿಗೆ ಕರೆ ಹೋಗಿತ್ತು. ಅವರು ತಮ್ಮ ವಿದ್ಯಾರ್ಥಿಗಳೊಡನೆ ಹೋದಾಗ ರಾತ್ರಿಯ ೯ ಗಂಟೆ. ಸ್ವಾಮಿಗಳು ಆರತಿ ಮುಗಿಸಿಬಿಟ್ಟಿದ್ದರು. ಮರುದಿನವಾದರೂ ಮಂಗಳಾರತಿ ಹಾಗೂ ತೀರ್ಥಪ್ರಸಾದ ಲಭಿಸಲೆಂದು ಸಮಯಕ್ಕೆ ಸರಿಯಾಗಿ ಹೋದರು. ಆದರೆ ಆ ದಿನ ಸ್ವಾಮಿಗಳೇ ತಡಮಾಡಿದರು. ಓರ್ವ ದೊಡ್ಡ ಅಧಿಕಾರಿಯು ಪೂಜೆ ಮಾಡಿಸಿದ್ದನಂತೆ. ರಾತ್ರಿಯ ಕಾಕಡಾರತಿಯ ಹೊತ್ತಿಗೆ ಅವನಿನ್ನೂ ಬಂದಿರಲಿಲ್ಲ.

ಆರತಿ ಆದನಂತರ ಗಳಗನಾಥರು ''ಬಡವ, ಸಿರಿವಂತ ಎನ್ನುವ ಭೇದವು ಈ ಮಠದಲ್ಲಿಯೂ ಇದೆಯಲ್ಲ! ದೇವರು ಇದನ್ನು ಮೆಚ್ಚನು'' ಎಂಬ ಧರತಿಯಲ್ಲಿ ಮಾತಾಡಿದರು. ತಾಸಿನ ವರೆಗೂ ಇವರಿಬ್ಬರಲ್ಲಿ ವಾಗ್ವಾದ ನಡೆಯಿತು. ಸಮರ್ಪಕವಾಗಿ ವಾದಿಸಲು ಗೊತ್ತಾಗದ ಸ್ವಾಮಿಗಳು ಶಾಪದ ಮಾತನಾಡಿದ್ದರಂತೆ. ಆಗ ಗಳಗನಾಥರು ''ನೀವು ಶಾಟಿಯ ಸನ್ಯಾಸಿಗಳಿರಬಹುದು. ನಾನು ಹೃದಯಸ್ಥ ಸನ್ಯಾಸಿ. ನೀವು ಕೊಡುವ ಶಾಪವನ್ನು ನನ್ನ ಗುರುಗಳ ಅನುಗ್ರಹದಿಂದ ನಿಗ್ರಹಿಸಿಕೊಳ್ಳಬಲ್ಲೆ'' ಎಂದು ಉತ್ತರ ಕೊಟ್ಟರು. ಈ ನಿಲುಮೆಯ ಹಿಂದಿನ ನೈತಿಕ ಧೈರ್ಯ, ಸಾಧನೆಗಳನ್ನು ಗಮನಿಸಬೇಕು.

ಇದೇ ಬಗೆಯ ದಿಟ್ಟತನವನ್ನು ಸಾರ್ವಜನಿಕ ಸಭೆಯೊಂದರಲ್ಲಿ ತೋರಿಸಿದ ಪ್ರಸಂಗವಿದು. ಸರಸ್ವತಿ ಪತ್ರಿಕೆಯ ಸಂಪಾದಕಿ ಆರ್. ಕಲ್ಯಾಣಮ್ಮನವರ

ಅಧ್ಯಕ್ಷತೆಯಲ್ಲಿ ಸೇರಿದ್ದ ಆ ಸಭೆಯಲ್ಲಿ ಓರ್ವ ಭಾಷಣಕಾರರು 'ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ' ಎಂಬ ಮನುವಿನ ಹೇಳಿಕೆಯನ್ನು ಹೀಗಳೆದಾಗ ಗಳಗನಾಥರು ಸಿಡಿದೆದ್ದು ಸ್ತ್ರೀಯರ ವಿಷಯದಲ್ಲಿ ಮನು ಮಹರ್ಷಿಗೆ ಎಷ್ಟೊಂದು ಆದರವಿತ್ತೆಂಬುದನ್ನು ಆಧಾರಸಹಿತವಾಗಿ ಸಮರ್ಥಿಸಿದರು.

ಪಂ. ತಾರಾನಾಥರು ಧಾರವಾಡದಲ್ಲಿ ಒಂದೆಡೆ ಭಾಷಣ ಮಾಡುವಾಗ ''ಯಾಜ್ಞವಲ್ಕ್ಯರು ಮನುಷ್ಯನ ದೇಹದಲ್ಲಿ ಇಂತಿಷ್ಟು ಎಲುಬುಗಳಿವೆಯೆಂದು ಹೇಳಿದ್ದಾರೆ. ಆ ಸಂಖ್ಯೆ ಸರಿ ಇಲ್ಲ. ನಾನು ಸ್ವತಃ ಆಪರೇಷನ್ ಮಾಡಿ ನೋಡಿದ್ದೇನೆ'' ಎಂದು ಹೇಳಿದಾಗ ಗಳಗನಾಥರು ಎದ್ದು ನಿಂತು: ''ನೀವೆಲ್ಲೊ ನಿದ್ದೆಗಣ್ಣಿನಲ್ಲಿ ಆಪರೇಶನ್ ಮಾಡಿರಬೇಕು. ಶ್ರೇಷ್ಠರಾದ ಯಾಜ್ಞವಲ್ಕ್ಯರು ತಪ್ಪುಮಾಡುವ ಸಾಧ್ಯತೆಯೆ ಇಲ್ಲ'' ಎಂದರಂತೆ.

ಹಾಗೆಂದು ಅವರಲ್ಲಿ ದಿಟ್ಟತನದ ಹಟಮಾರಿತನವೇನೂ ಇದ್ದಿಲ್ಲ. ತಮ್ಮಲ್ಲಿ ತಪ್ಪಿದ್ದರೆ, ಪ್ರಾಂಜಲವಾಗಿ ಒಪ್ಪಿಕೊಳ್ಳಲು ಹಿಂಜರಿದವರೇ ಅಲ್ಲ. ಕೀರ್ತನಕಾರರೊಬ್ಬರು ಒಮ್ಮೆ ವಿಷಯಾಂತರ ಮಾಡಿದ್ದರೆಂದು ಗಳಗನಾಥರು ಆಕ್ಷೇಪಿಸಿದರು. ನೆರೆದವರಲ್ಲಿಯ ಒಬ್ಬಿಬ್ಬರು ಅದೇ ಅಭಿಪ್ರಾಯಪಟ್ಟರಂತೆ. ಗಳಗನಾಥರಿಗೆ ತಮ್ಮ ತಪ್ಪಿನ ಅರಿವಾಯಿತು. ಆ ಕೂಡಲೇ ಕೀರ್ತನಕಾರರಿಗೆ ಸಾಷ್ಟಾಂಗವೆರಗಿ ಕ್ಷಮೆ ಕೇಳಿದರು.

ಅನ್ಯರ ಕಷ್ಟಕಾರ್ಪಣ್ಯಗಳ ವಿಚಾರದಲ್ಲಿ ಗಳಗನಾಥರಿಗೆ ಅತೀವ ಅನುಕಂಪ. ಹಾನಗಲ್ಲಿನ ಬಡಬ್ರಾಹ್ಮಣನೊಬ್ಬ ಮಗಳ ಮದುವೆಯನ್ನು ಹಮ್ಮಿಕೊಂಡು ''ಒಂದು ಬೆಲೆಯುಳ್ಳ ಸೀರೆಯನ್ನು ಅಂಗಡಿಯಲ್ಲಿ ನೋಡಿ ಇಟ್ಟೇನಿ. ಆದರೇನು ರೊಕ್ಕ ತರಲಿಲ್ಲ'' ಎಂಬುದಾಗಿ ಸುತ್ತುಬಳಸಿ ಹೇಳತೊಡಗಿದಾಗ, ಗಳಗನಾಥರು ತಮ್ಮ ಮೇಜಿನ ಡ್ರಾಯರಿಂದ ೮೦೦ ರೂಪಾಯಿಗಳನ್ನು ತೆಗೆದು ಕೊಟ್ಟುಬಿಟ್ಟರಂತೆ. ರತ್ನಾಗಿರಿಯ ತಾಂಬೆ ಶಾಸ್ತ್ರಿ ಎನ್ನುವವರು ಸಂಸ್ಕೃತ ಗ್ರಂಥಗಳನ್ನು ಮುದ್ರಿಸುವ ವಿಚಾರದಲ್ಲಿರುವುದಾಗಿಯೂ ಮುದ್ರಾಯಂತ್ರವನ್ನು ಕೊಳ್ಳಲು ಹಣ ಇಲ್ಲ ಎಂದು ಹೇಳಿದಾಗ, ಗಳಗನಾಥರು, ತಮ್ಮಲ್ಲಿದ್ದ ಹ್ಯಾಂಡ್ ಪ್ರೆಸ್ಸನ್ನು ಕೊಟ್ಟುಬಿಟ್ಟರು! ಇನ್ನೊಂದು ಪ್ರಸಂಗ: ಆಳು ದುರಗಪ್ಪನು ಹರಕು ಅಂಗಿ ತೊಟ್ಟು ಚಳಿಯಲ್ಲಿ ನಡುಗುತ್ತಿದ್ದಾನೆ ಎನಿಸಿತು. ತಕ್ಷಣ ತಮ್ಮ ಮೈಮೇಲಿನ ಬಗಲಗಸಿಯ ಅಂಗಿಯನ್ನು ತೆಗೆದುಕೊಟ್ಟರಂತೆ. ದಾನವೀಯುವಾಗ ಇತರರಿಗೆ ನೆರವು ಬೇಕಾದಾಗ, ಇವರು

ನಮ್ಮ ಪೈಕಿ ಜನ, ಅವರು ಬೇರೆ ಊರಿನವರು, ಆತ ಅನ್ಯ ಮತದವ, ಇದಾವ ಭೇದ ಭಾವವನ್ನು ಗಳಗನಾಥರು ಕಂಡವರೇ ಅಲ್ಲ. ಇಂಥ ನೂರಾರು ಘಟನೆಗಳನ್ನು ಹಿರಿಯ ತಲೆಮಾರಿನವರು ನೆನೆಯುತ್ತಿದ್ದರು.

ಕ್ರಿ.ಶ. ೧೯೪೦ರ ಸುಮಾರಿಗೆ, ಕರುಳಿನ ಕ್ಯಾನ್ಸರ್ ರೋಗ ಅವರಿಗರಿಯದಂತೆ ದೇಹದೊಳಗೆ ಹರಡುತ್ತ ಹೋಯಿತು. ಆಗಲೂ ಬಿಡುವಿಲ್ಲದ ದುಡಿಮೆ ಅವರದು. ಮುಂದಿನ ಗ್ರಂಥರಚನೆಗೆ ಹಲವು ಹತ್ತು ವಿಷಯಗಳ ಹೊಳಹನ್ನು ಹಾಕಿಕೊಂಡಿದ್ದರು. ಮುದ್ರಿಸಲು ಸ್ವಂತದ ಮುದ್ರಣಾಲಯ ಮಾಡಿಕೊಂಡಿದ್ದರು. ಸಂಚಾರಕ್ಕೆ ಹೊರಟರೆ ಪುಸ್ತಕ ಮಾರಾಟವಾಗುವವೆಂಬ ಭರವಸೆಯೂ ಇದ್ದಿತು. ಆದರೆ ಮುಪ್ಪಿನಿಂದ ಸೊಪ್ಪಾದ ದೇಹಶಕ್ತಿ ಇದಕ್ಕೆ ಪ್ರತಿಕೂಲವಾಗಿದ್ದಿತು. ಮರುವರ್ಷ ಕ್ಯಾನ್ಸರ್ ಚಿಕಿತ್ಸೆಗಾಗಿ ಬೆಂಗಳೂರಿಗೆ ಹೋದರು. ಆಪರೇಶನ್ ಯಶಸ್ವಿಯಾಯಿತು. ಆದರೆ ದೇಹ ತ್ರಾಣ ಉಡುಗಿಹೋಯಿತು. ಸಾವಿನ ಗಳಿಗೆ ಸಮೀಪಿಸಿತೆಂದು ಅನಿಸತೊಡಗಿತ್ತು. ಹಾಸಿಗೆಯ ಬಳಿ ನೆರೆದಿದ್ದವರಿಗೆ ''ನನ್ನ ಮರಣಕ್ಕಾಗಿ ಶೋಕಿಸಬೇಡಿರಿ. ನನ್ನ ಪುಸ್ತಕಗಳ ಪ್ರಕಟಣೆ ಹಾಗೂ ಪ್ರಸಾರ ಮುಂದುವರಿಯುವ ವರೆಗೆ ನಾನು ಬದುಕಿ ಇರುವೆನೆಂದೇ ತಿಳಿಯಿರಿ'' ಎಂಬುದಾಗಿ ಸಮಾಧಾನ ಹೇಳಿದರು. ದಿ. ೨೨ ಏಪ್ರಿಲ್ ೧೯೪೨ರಂದು ಕೊನೆಯುಸಿರೆಳೆದರು.

ತಮ್ಮ ಗ್ರಂಥಸಮುದಾಯವೊಂದುಳಿದು ಬೇರಾವ ಸಂಪತ್ತನ್ನು ಅವರು ತಮ್ಮ ಕುಟುಂಬದವರಿಗೆ ಬಿಟ್ಟುಹೋಗಿರಲಿಲ್ಲ. ಅವರ ಅಪರಕರ್ಮದ ವೆಚ್ಚಕ್ಕೆ ಆ ಅವಧಿಯಲ್ಲಿ ಮಾರಾಟವಾದ ಪುಸ್ತಕಗಳು ನೆರವಾದದ್ದು ಶೋಚನೀಯವೆನಿಸಿದರೂ ಸತ್ಯ ಸಂಗತಿಯಾಗಿದೆ.

ತಮ್ಮ ಕಾದಂಬರಿಗಳ ಮೂಲಕ ಅಸಂಖ್ಯ ಓದುಗರನ್ನು ಸೃಷ್ಟಿಸಿದ, ಧಾರ್ಮಿಕ ಬರವಣಿಗೆಯಿಂದ ಸಾವಿರಾರು ಆಸ್ತಿಕ ಜನರ ಬದುಕನ್ನು ಹಸನಾಗಿಸಿದ ದೊಡ್ಡ ಜೀವ ಕಣ್ಮರೆಯಾದದ್ದರಲ್ಲಿ, ಹೊಸಗನ್ನಡ ಸಾಹಿತ್ಯದ ಒಂದು ಯುಗವು ಸಮಾಪ್ತಿ ಹೊಂದಿತೆಂದು ತಿಳಿಯಬಹುದು.

ವಿಭಾಗ ಎರಡು

ಕೃತಿ ಸಮೀಕ್ಷೆ

ಗಳಗನಾಥರು ಒಟ್ಟಿಗೆ ಐವತ್ತು ಗ್ರಂಥಗಳನ್ನು ಬರೆದಿದ್ದಾರೆ. ಗ್ರಂಥಗಳಲ್ಲದೆ, ಧಾರವಾಡದ ಟ್ರೇನಿಂಗ್ ಕಾಲೇಜಿನ 'ಶಾಲಾಪತ್ರಕ'ದಲ್ಲಿಯೂ, ತಮ್ಮವೇ ಆದ 'ಸದ್ಬೋಧ ಚಂದ್ರಿಕೆ' 'ಸದ್ಗುರು' ಪತ್ರಿಕೆಗಳಲ್ಲಿಯೂ ಅವರ ಅನೇಕ ಬಿಡಿ ಬರಹಗಳಿವೆ. ಈ ಅವರ ಕೃತಿಸಮುದಾಯವನ್ನು ಕಾದಂಬರಿಗಳು, ಧಾರ್ಮಿಕ/ಪೌರಾಣಿಕ ಕೃತಿಗಳು, ಹಾಗೂ ಶೈಕ್ಷಣಿಕ/ಸಾಮಾಜಿಕ ಬರಹಗಳು - ಎಂಬುದಾಗಿ ವಿಂಗಡಿಸಬಹುದು.

೧. ಶೈಕ್ಷಣಿಕ ಸಾಮಾಜಿಕ ಬರಹಗಳು

ಶೈಕ್ಷಣಿಕವೆನ್ನಬಹುದಾದ ಕೆಲವೇ ಲೇಖನಗಳಲ್ಲಿ 'ಶಿಕ್ಷೆ' ಎಂಬ ಲೇಖನದಲ್ಲಿಯ ವಿಚಾರಗಳು ಇಂದಿಗೂ ಪ್ರಸ್ತುತವಾಗಿವೆ. ಮಕ್ಕಳಿಗೆ ಶಿಕ್ಷೆ ವಿಧಿಸಬೇಕೆನ್ನುವುದರ ಹಿಂದಿರುವ ಕಾರಣ ಮೀಮಾಂಸೆ ಮತ್ತು ದೈಹಿಕ ಶಿಕ್ಷೆಯ ಅನಗತ್ಯ - ಇವನ್ನು ದೃಷ್ಟಾಂತಗಳ ಮೂಲಕ ವಿವರಿಸಿದ್ದಾರೆ. ಒಂದು ಲೇಖನದಲ್ಲಿ, ಮಿತಿಯನ್ನು ಮೀರಿ ಬರುತ್ತಿರುವ ಸಂಸ್ಕೃತ ಶಬ್ದಗಳ ಬಗ್ಗೆ ವಿದ್ಯಾರ್ಥಿಗಳ ಗಮನ ಸೆಳೆದು ಈ ರೀತಿ ಎಚ್ಚರಿಸಿದ್ದಾರೆ:

''ಈಗ ಕನ್ನಡದಲ್ಲಿ ಪ್ರಕಟವಾಗುತ್ತಿರುವ ವರ್ತಮಾನಪತ್ರ, ಮಾಸಿಕ, ಪಾಕ್ಷಿಕ ಮತ್ತು ಗ್ರಂಥಗಳನ್ನು ನೋಡಿದರೆ [ಒಂದು ಬಗೆಯ] ಸಂಸ್ಕೃತ-ಕನ್ನಡ ಭಾಷೆಯು ಪ್ರಚಾರದಲ್ಲಿ ಬರುತ್ತ ನಡೆದದ್ದು ಗೊತ್ತಾಗುತ್ತದೆ. ಸುಲಭ ಭಾಷೆಯಿಂದ ಗ್ರಂಥಗಳನ್ನು ಬರೆಯುವುದು ವಿದ್ವಾಂಸರ ಕೆಲಸವಲ್ಲೆಂದು ಬಹುತರ ಎಲ್ಲರ ತಿಳುವಳಿಕೆಯಾಗಿರುವುದರಿಂದಲೂ ಗ್ರಂಥ ಬರೆಯುವವರೆಲ್ಲರೂ ತಾವು ವಿದ್ವಾಂಸರೆಂದು ತಿಳಿಯುತ್ತಿರುವುದರಿಂದಲೂ ಈ ಸಂಸ್ಕೃತ-ಕನ್ನಡ ಭಾಷೆಯು ಪ್ರಚಾರದಲ್ಲಿರುವುದು ಆಶ್ಚರ್ಯವಲ್ಲ.

ವಿದ್ಯಾರ್ಥಿಗಳು ಮಾತ್ರ ಅರ್ಥವು ಚೆನ್ನಾಗಿ ತಿಳಿಯುವಂಥ ಹಾಗೂ ಶುದ್ಧವಾದ ಅಚ್ಚಗನ್ನಡ ಭಾಷೆಯನ್ನು ಬರೆಯಬೇಕು. ಸಂಸ್ಕೃತ ಇಲ್ಲವೆ ಅನ್ಯದೇಶೀಯ ಶಬ್ದಗಳನ್ನು

ತಕ್ಕಷ್ಟಕ್ಕಿಂತ ಹೆಚ್ಚು ಬರೆಸುವದರಿಂದ ಭಾಷೆಯು ಹೆಚ್ಚು ಚಂದವಾಗುತ್ತದೆಂಬ ತಿಳುವಳಿಕೆಯನ್ನು ಬಿಡಬೇಕು.''

ವಿದ್ಯಾರ್ಥಿಗಳಿಗೆ ಉಪದೇಶಿಸುವ ನೆಪ ಮಾಡಿಕೊಂಡು ಗಳಗನಾಥರು ಇಲ್ಲಿ, ಉತ್ತರ ಕರ್ನಾಟಕದ ಭಾಷಾಶೈಲಿಯ ಸೂತ್ರವನ್ನೇ ಹೇಳಿದ್ದರೆನ್ನಬಹುದು. ಬಾಣಕಾದಂಬರಿಯಂತಹ ಕ್ಲಿಷ್ಟ ಸಂಸ್ಕೃತ ಭಾಷೆಯ ಕೃತಿಯನ್ನು, ಆಡುಮಾತಿನ ಸುಲಭ ಶೈಲಿಯಲ್ಲಿ ತುರಮರಿ ಗಂಗಾಧರಯ್ಯನವರ ಅನುವಾದದಿಂದ ಈ ಬಗೆಯ ಗದ್ಯಶೈಲಿಯ ಕೃತಿಗಳನ್ನು ಉತ್ತರ ಕರ್ನಾಟಕದ ಅಂದಿನ ಲೇಖಕರಲ್ಲಿ ಕಾಣುತ್ತೇವೆ.

ಸಾಮಾಜಿಕ ಚಿಂತನೆಯುಳ್ಳ ಅವರ ಬರಹಗಳನ್ನು 'ದಾಂಪತ್ಯ' 'ಕುಟುಂಬ' ಮತ್ತು 'ಸುಂದರ ಲೇಖನ ಸಮುಚ್ಚಯ' ಎಂಬ ಗ್ರಂಥಗಳಲ್ಲಿ ನೋಡಬಹುದು, ಎಲ್ಲ ಬರಹಗಳಲ್ಲಿ ಸನಾತನಶ್ರದ್ಧೆ ಒಡೆದು ತೋರುತ್ತದೆ, ಹಾಗಿದ್ದರೂ ಸ್ತ್ರೀ-ಪುರುಷ ಸಂಬಂಧದ ವಿವಿಧ ಸ್ತರಗಳನ್ನು ತಮ್ಮದೆ ಆದ ರೋಚಕ ಶೈಲಿಯಲ್ಲಿ ನಿರೂಪಿಸಿದ್ದಾರೆ. ಬಾಲ್ಯವಿವಾಹ, ವರದಕ್ಷಿಣೆಯ ಹಾವಳಿ, ಹೆಣ್ಣುಮಕ್ಕಳ ಅನಕ್ಷರತೆ - ಇವನ್ನು ಖಂಡಿಸಿದ್ದಾರೆ. ೧೯೧೦ನೆಯ ದಶಕದಷ್ಟು ಹಿಂದೆಯೆ ವ್ಯಕ್ತವಾದ ವಿಚಾರಗಳಿವು. 'ಕುಟುಂಬ' ಮತ್ತು 'ದಾಂಪತ್ಯ'ಗಳಲ್ಲಿ ಅಂದಿನ ವಾಚಕರ ಮನೋಭಾವಕ್ಕೆ ಹೊಂದಿಕೊಳ್ಳುವಂತಹ ವಿಚಾರಗಳಿದ್ದುದರಿಂದ, ಕೆಲವೇ ವರ್ಷಗಳಲ್ಲಿ ಮರುಮುದ್ರಣವನ್ನು ಹೊರತಂದರು, ಮಗಳಿಗೆ ತಂದೆಯ ಓಲೆಗಳ ರೂಪದಲ್ಲಿರುವ ಈ ಕೃತಿಯಲ್ಲಿ 'ಕುಟುಂಬ' ವ್ಯವಸ್ಥೆ, ಯಜಮಾನ ಮತ್ತಿತರ ಸಂಬಂಧದ ಉಪಾಂಗಗಳು ಇವುಗಳ ವ್ಯವಸ್ಥಿತ ರೀತಿಯ ನಿರೂಪಣೆಯಿದೆ. 'ಸುಂದರ ಲೇಖನ ಸಮುಚ್ಚಯ'ದ ಬರಹಗಳಲ್ಲಿ ಧರ್ಮ, ಸಮಾಜಗಳ ಬಗೆಗಿನ ವಿವೇಚನೆ ಇದೆ. ಇದರಲ್ಲಿಯ 'ಕಲಿಕಾಲ'ದ ಕುರಿತ ಲೇಖನದಲ್ಲಿ ಬ್ರಾಹ್ಮಣ ಶಬ್ದದ ಮೂಲಾರ್ಥ, ಈಗಿನ ಅಪಾರ್ಥ ಇವನ್ನು ವಿವರಿಸಿ ಎರಡು ವರ್ಗಗಳಲ್ಲಿರಬೇಕಾದ ಸೌಹಾರ್ದ ಭಾವದ ಅಗತ್ಯವನ್ನು ಮನದಟ್ಟಾಗಿಸಿದ್ದಾರೆ.

ಈ 'ಸಮುಚ್ಚಯ' ಸಂಗ್ರಹದಲ್ಲಿ ಕೆಲವು ಮಹಾಪುರುಷರ ಚರಿತ್ರೆಗಳು ಬಂದಿವೆ. ಈ ರೀತಿಯ ನಿರೂಪಣೆಯಲ್ಲಿ ಅವರ ವಿಶಿಷ್ಟ ನಿಲುವು ಹೀಗಿದ್ದಿತು:

''ಚರಿತ್ರೆಗಳಲ್ಲಿ ಕೃತ್ರಿಮ ಮಹಿಮೆಗಳ ಸಂಗ್ರಹ ಮಾಡುವುದು ಸರಿಯಲ್ಲ. ಅನ್ನಕ್ಕಿಂತ ತೊವ್ವೆಯೇ ಘನವಾಯಿತೆನ್ನುವಂತೆ ಸನ್ಮಾರ್ಗದರ್ಶನಕ್ಕಿಂತ ಮಹಿಮಾ ದರ್ಶನವನ್ನೇ ಮುಂದೆ ಮಾಡಿ ಬರೆಯುವುದು ಉಪಯುಕ್ತವೆನಿಸಲಿಲ್ಲ.''

೨. ಧಾರ್ಮಿಕ ಕೃತಿಗಳು

ಗಳಗನಾಥರ ಧಾರ್ಮಿಕ ಕೃತಿಗಳನ್ನು ಪೌರಾಣಿಕ ಕಥಾನಕಗಳು ಹಾಗೂ ಗುರುಜನ ಗುಣಗಾನ - ಎಂಬೆರಡು ಪ್ರಕಾರಗಳಲ್ಲಿ ಗಣಿಸಬಹುದಾಗಿದೆ. ರಾಮಾಯಣ, ಮಹಾಭಾರತ, ಭಾಗವತ ಮತ್ತು ಶೈವಪುರಾಣ ಇವು ನಾಲ್ಕು ಅವರ ಲೇಖನಿಯಲ್ಲಿ ಮೈದೋರಿವೆ. ಈ ಕೃತಿಗಳಿಗೆ 'ಅಮೃತ' ಇಲ್ಲವೆ 'ಅರ್ಣವ' ಎಂಬಂತಹ ಪದವನ್ನು ತಪ್ಪದೆ ಸೇರಿಸಿದ್ದಾರೆ. ಸಮುದ್ರಮಥನದಿಂದ ಅಮೃತವು ಹೊರಬಂದಂತೆ ಮೂಲಕೃತಿಗಳ ಮಥನದಿಂದ ಆ ಅನುವಾದಗಳು ಸಿದ್ಧಗೊಂಡಿರುವುದೆಂಬ ಭಾವ ಅಡಗಿದೆ. ಈ ವಿಷಯವಾಗಿ ಅವು ಅನ್ವಯಿಸಿದ ಒಂದು ಶಬ್ದ 'ಸಾರಶೋಷಣೆ'. ಅವರ ದೃಷ್ಟಿಯಲ್ಲಿ ಈ ಸಾರಶೋಷಣವು 'ಸಕ್ಕರೆಯೊಳಗಿನ ಸಿಹಿಯಂತೆ, ಭೋಜನದೊಳಗಿನ ಸ್ವಾದದಂತೆ ನಿತ್ಯಸೇವ್ಯವು ತೃಪ್ತಿಕರವು' ಆಗಿರಬೇಕೆಂದು ಅವರ ಅಪೇಕ್ಷೆಯಾಗಿತ್ತು. ಕಾದಂಬರಿವಾಚನವು ಬಾಯಿರುಚಿಯನ್ನು ಚಪ್ಪರಿಸಿದಂತೆ. ಆದರೆ ಶರೀರದ ಸಾಂಗೋಪಾಂಗಕ್ಕೆ ಧಾರ್ಮಿಕ, ಶಾಸ್ತ್ರೀಯ ಗ್ರಂಥವಾಚನವು ಅವಶ್ಯ ಎಂಬುದೂ ಅವರ ನಿಲುಮೆಯಾಗಿತ್ತು. ಅವರ ದೃಷ್ಟಿಯಲ್ಲಿ ಧರ್ಮ ಎಂಬುದು ಶಿಸ್ತು. ವ್ಯಕ್ತಿಯು ಯಾವ ಧರ್ಮದ ಶಿಸ್ತು ಹಿಡಿದರೂ ಕಲ್ಯಾಣವಾಗುತ್ತದೆ. ಜನಹಿತವೇ ಎಲ್ಲ ಧರ್ಮಗಳ ಗುರಿಯಾಗಿರುವುದರಿಂದ ಯಾವ ಧರ್ಮವೂ ತ್ಯಾಜ್ಯವಲ್ಲವು.

ಈ ನಿಟ್ಟಿನಲ್ಲಿ ಅವರು ಮೊದಲು ರಚಿಸಿದ್ದು 'ಭಾಗವತಾಮೃತ'ವನ್ನು (೧೯೨೨). ಅದು ಮುಗಿದೊಡನೆ 'ಶೈವಸುಧಾರ್ಣವ'ವನ್ನು ಎತ್ತಿಕೊಂಡರು. ಈ ಹಿಂದೆ ಹೇಳಿದಂತೆ ಇದಕ್ಕೆ ಒಂದು ಪುರಾಣವಲ್ಲದೆ, ಹಲವು ವೀರಶೈವ ಗ್ರಂಥಗಳೂ ಇದರ ಆಕರ ಗ್ರಂಥಗಳಾಗಿವೆ. ಈ ದೃಷ್ಟಿಯಿಂದ ಇದನ್ನು ಗಳಗನಾಥರ ಸ್ವತಂತ್ರ ಕೃತಿಯೆಂದೇ ಪರಿಗಣಿಸತಕ್ಕದ್ದು.

ಪೌರಾಣಿಕ ಘಟನೆಗಳ ನೇರ ನಿರೂಪಣೆಯ ಜೊತೆಗೆ, ಅವುಗಳ 'ರಹಸ್ಯ'ಗಳನ್ನು ವಿವರಿಸುವುದು ಅವರಿಗೆ ಅಚ್ಚುಮೆಚ್ಚಿನದು. ಈ ಕ್ರಮವನ್ನು ಬಹುತರ ತಮ್ಮೆಲ್ಲ ಪುರಾಣಗ್ರಂಥಗಳಲ್ಲಿ ತಂದಿದ್ದಾರೆ. ಮಹಾಭಾರತದಲ್ಲಿ ಬಂದಿರುವ ಇಂತಹವೇ ಪ್ರಮೇಯಗಳನ್ನು 'ರಹಸ್ಯಗಳು' ಎಂಬುದಾಗಿ ಪ್ರತ್ಯೇಕ ಗ್ರಂಥಗಳಲ್ಲಿ ವಿವೇಚಿಸಿದ್ದಾರೆ.

ಅದಿರಲಿ, ಮಹಾಭಾರತದ ಎಲ್ಲ ಪರ್ವಗಳನ್ನು ಕೇವಲ ೨-೩ ವರ್ಷಗಳ ಅವಧಿಯಲ್ಲಿ ಜೊತೆಗೆ ಸ್ವಂತದ ವ್ಯಾಖ್ಯಾನಗಳನ್ನು ಸೇರಿಸುತ್ತ ಅನುವಾದಿಸಿದುದು ಅವರ ಲೇಖನಶಕ್ತಿಯ ದ್ಯೋತಕವಾಗಿದೆ. ಆದಿಪರ್ವಕ್ಕೆ ಬರೆದ ವಿಸ್ತಾರವಾದ ಪೀಠಿಕೆಯಲ್ಲಿ, ಮಹಾಭಾರತದ ವೈಶಿಷ್ಟ್ಯಗಳನ್ನು ವಿಶದಗೊಳಿಸಿದ್ದಾರೆ. ಅವರ ಇನ್ನೊಂದು ಕೃತಿ ರಾಮಾಯಣಾಮೃತವು, ತುಲಸಿದಾಸ ಕೃತಿಯ ಮರಾಠಿ ಅನುವಾದವನ್ನು ಮುಂದಿಟ್ಟುಕೊಂಡು ಸಿದ್ಧವಾದುದು.

ಗುರುಜನ ಗುಣಗಾನ

ಹೌದು. ಅವರು ವಿದ್ಯಾಗುರುಗಳೇ ಇರಲಿ ಧಾರ್ಮಿಕ ಪೀಠಸ್ಥರೇ ಆಗಿರಲಿ ಗಳಗನಾಥರು ಅವರನ್ನು ಏಕನಿಷ್ಠೆಯಿಂದ ಆರಾಧಿಸುವ ಮನೋಭಾವವನ್ನು ಹೊಂದಿದ್ದರು. ಆ ವ್ಯಕ್ತಿಗಳು ತಮ್ಮವರೇ ಇರಬೇಕೆಂದಿರಲಿಲ್ಲ. ಉದಾಹರಣೆಗೆ ಅವರು ಶ್ರದ್ಧೆಯಿಂದ ಬರೆದ ಅಥಣಿ ಶಿವಯೋಗಿಗಳ ಚರಿತ್ರೆ.

ಗುರ್ಲಹೊಸೂರಿನ ಚಿದಂಬರ ದೀಕ್ಷಿತರಿಂದ ಈ ಗುರ್ವಾರಾಧನೆ ಮೊದಲಾಗುತ್ತದೆ. ಇತ್ತ ಯಾರ ಮೇಲಿನ ಭಕ್ತಿಭಾವದಿಂದ ಗಳಗನಾಥರು ನೌಕರಿಯನ್ನೆ ತೊರೆದರೋ, ಆ ಶೇಷಾಚಲ ಸಾಧುಗಳಂತೂ ಅವರ ಪಾಲಿಗೆ ಸದ್ಗುರೋತ್ತಮರು. ಗಳಗನಾಥರ ಸಾಹಿತ್ಯಿಕ ಉತ್ಕರ್ಷದ ಆರಂಭವು ಅವರ ಸಾನ್ನಿಧ್ಯದಲ್ಲಿಯೇ ಆದುದೆಂಬುದನ್ನು ನೋಡಿದ್ದೇವೆ. ಕ್ರಿ.ಶ. ೧೯೧೭ರಲ್ಲಿ ಅವರು ತೀರಿಹೋದ ಮೇಲೆ ಆ ಕುರಿತು ''ನಿರ್ಯಾಣ ಮಹೋತ್ಸವ'' ಎಂಬ ಗ್ರಂಥವನ್ನೇ ಬರೆದರು. ಅದರ ಪ್ರತಿ ಪುಟವೂ ಅವರ ಅತ್ಯಂತಿಕ ಗುರುಭಕ್ತಿಯ ನಿದರ್ಶನವಾಗಿದೆ. ಅವರ ದ್ವಿತೀಯ ಮಾಸಪತ್ರಿಕೆ 'ಸದ್ಗುರು', ಶೇಷಾಚಲರ ನೆನಪನ್ನೆ ಉಳಿಸಿಕೊಂಡಿದ್ದಿತು. ಮುಂದೆ ೧೯೨೮ರಲ್ಲಿ ಪ್ರಕಟವಾದ 'ಸದ್ಗುರು ಪ್ರಭಾವ' ಎಂಬ ಆತ್ಮಚರಿತ್ರೆಯಲ್ಲಿ ಕೂಡ ಶೇಷಾಚಲರೇ ಮುಖ್ಯ ವ್ಯಕ್ತಿಯಾಗಿ ಬಂದಿದ್ದಾರೆ. ತಮ್ಮ ಗುರುಭಕ್ತಿಯನ್ನು ಇಷ್ಟರ ಮಟ್ಟಿಗೆ ಬರವಣಿಗೆಯಲ್ಲಿ ಒಡಮೂಡಿಸಿದ್ದ ಬೇರಾವ ಕನ್ನಡ ಲೇಖಕನಿಲ್ಲ.

ಗಳಗನಾಥರ ಧಾರ್ಮಿಕ ಚಿಂತನೆಯ ಬಗ್ಗೆ ಒಂದು ಮಾತು. ನಮ್ಮ ಆರ್ಷೇಯ ಗ್ರಂಥಗಳಲ್ಲಿ, ಪುರಾಣಗಳಲ್ಲಿ ಮತ್ತು ನಮ್ಮ ಧಾರ್ಮಿಕ ಪರಂಪರೆಯಲ್ಲಿ ಅನನ್ಯ ಸಾಧಾರಣವಾಗಿ ಶ್ರದ್ಧೆ ಇದ್ದಿತಷ್ಟೆ. ಈ ಶ್ರದ್ಧೆಯನ್ನು ತಮ್ಮ ಕಾದಂಬರಿಯ ಪಾತ್ರಗಳ ಮೂಲಕ ಹಾಗೂ ವಿವಿಧ ಸನ್ನಿವೇಶಗಳ ಮೂಲಕ ಅಖಂಡವಾಗಿ ವ್ಯಕ್ತಪಡಿಸಿದ್ದಾರೆ. ಹಾಗಿದ್ದುದರಿಂದ ಅವರ ವಿಚಾರಸರಣಿಯಲ್ಲಿ ಹೊಸ ಅಂಶಗಳೇನೂ ಇಲ್ಲವೆಂದು

ಅನಿಸಬಹುದು. ಆದರೆ ಅದನ್ನು ಮಂಡಿಸುವ ರೀತಿಯಲ್ಲಿ ಮಾತ್ರ ಅವರು ಅನನ್ಯವಾದ ಸ್ವೋಪಜ್ಞತೆಯನ್ನು ತೋರಿದ್ದಾರೆ. ಇದಕ್ಕೆ ಮಾದರಿಯಾಗಿ ದೇವರು ಅಥವಾ ದೈವೀಭಾವದ ಕುರಿತು ಅವರು ವಿವರಿಸಿದ ಬಗೆಯನ್ನು ಕೊಡುವೆವು.

ದೈವಭಾವ

ವಾತ್ಸಲ್ಯ, ಉಪಕೃತಿ, ದಯಾಳುತನ, ಇಷ್ಟಾರ್ಥಪೂರ್ತಿ, ಪರಹಿತ ಸಾಧಕತೆ ಮುಂತಾದವುಗಳಿಂದ ಪರರ ಮನಸ್ಸನ್ನೊಳಗೊಂಡು, ಪರರ ಮನಸ್ಸನ್ನು ರಮಿಸುವ ವ್ಯಕ್ತಿಯೇ ದೇವರು. ದೇವರ ವಿಷಯದ ಸದ್ಭಾವಕ್ಕೆ ದೈವೀಭಾವವೆನ್ನುವರು. ಕೂಸುಗಳ ಮಟ್ಟಿಗೆ ತಾಯಿಯೇ ದೇವರು. ವಿದ್ಯಾರ್ಥಿಗಳಿಗೆ ಗುರುವೇ ದೇವರು. ಧರ್ಮನಿಷ್ಠನಿಗೆ ಅತಿಥಿಯೇ ದೇವರು. ಎಲ್ಲ ಕಡೆಯಲ್ಲಿಯೂ ದೇವರೆ ಇರುವನೆಂದು ನಂಬಿದವನಿಗೆ ಜಗತ್ತೇ ದೇವರು. ಸಾಧಕನಿಗೆ ಪಂಚಮಹಾಭೂತಗಳೂ, ಬೇರೆ ಬೇರೆ ದೇವರ ಪ್ರತಿಮೆಗಳೂ ದೇವರು.

ದೇವರು ಇದ್ದಾನೆಂದು ತಿಳಿದು ಸುಮ್ಮನೆ ಯಾಕೆ ಪೇಚಾಡಬೇಕು? ದೇವರು ಇಲ್ಲೆಂದು ತಿಳಿದು ನಡೆದರೆ ವ್ಯವಹಾರಕ್ಕೇನೂ ತೊಂದರೆಯುಂಟಾಗದು ಎಂಬ ಮೂರ್ಖತನದ ಪ್ರಶ್ನೆ ಮಾಡುವುದು ತಪ್ಪು. ದೇವರು ಸೃಷ್ಟಿಯನ್ನು ಮಾಡಿ ಪ್ರಾಣಿಗಳ ಭೋಗಕ್ಕಾಗಿ ಸಿದ್ಧಪಡಿಸಿ ಇಟ್ಟುಬಿಟ್ಟಿರುತ್ತಾನೆ. ಸಣ್ಣ ಆಟಿಕೆಗಳ ಸೊಬಗಿಗೆ ಮರುಳಾಗಿ ಮಕ್ಕಳು ತಂದೆತಾಯಿಗಳನ್ನೆ ಮರೆತುಬಿಡುವಂತೆ, ಸೃಷ್ಟಿ ಸುಖಗಳ ಭೋಗಮಗ್ನರಾಗಿ ದೇವರನ್ನು ಮರೆಯಬಹುದು. ಮನುಷ್ಯೇತರ ಪ್ರಾಣಿಗಳೆಲ್ಲಾ ದೇವರನ್ನು ಮರೆತು ಅಥವಾ ಅವನು ಇಲ್ಲೆಂದು ತಿಳಿದು ವ್ಯವಹಾರ ಮಾಡುವವೆಂದು ತಿಳಿಯುವವರು ಬಹಳ. ದೇವರು ಇದ್ದಾನೆಂದು ತಿಳಿಯುವವರಲ್ಲಿಯೂ ಯಾವಾಗಲೂ ದೇವರ ಎಚ್ಚರವಿಟ್ಟು ನಡೆಯುವವರು ವಿರಳ... ಈ ಸೃಷ್ಟಿ ಸುಖವು ತ್ಯಾಜ್ಯವಾಗಿ ತೋರುವವರಿಗೆ ಮಾತ್ರ ದೇವರ ಕಡೆ ಮನಸ್ಸಾಗುವುದು.

ಉರುವಲದ ಆಶ್ರಯವಿಲ್ಲದೆ ನಾವು ಬೆಂಕಿಯನ್ನು ನೋಡಲಾರೆವು. ಚರ್ಮಕ್ಕೆ ತಗುಲದ ಹೊರತು ಗಾಳಿಯಿರುವುದು ನಮಗೆ ಗೊತ್ತಾಗುವುದಿಲ್ಲ. ಯಾಕೆಂದರೆ ಬೆಂಕಿಗಿಂತ ಗಾಳಿ ಸೂಕ್ಷ್ಮ, ಗಾಳಿಗಿಂತ ಆಕಾಶ ಸೂಕ್ಷ್ಮ. ಅದರಂತೆ ಮೇಲಿನ ಆಕಾಶಕ್ಕಿಂತ ಮನಸ್ಸು ಸೂಕ್ಷ್ಮ. ಮನಸ್ಸಿಗಿಂತ ಬುದ್ಧಿಯೂ, ಬುದ್ಧಿಗಿಂತ ಚೇತನವೂ ಅತ್ಯಂತ ಸೂಕ್ಷ್ಮ. ಅಂದ ಬಳಿಕ ನಾವು ಭಾವದಿಂದಲ್ಲದೆ ಕಣ್ಣಿನಿಂದ ಅತ್ಯಂತ ಸೂಕ್ಷ್ಮವಾದ ದೇವರನ್ನು ಹೇಗೆ ನೋಡಬೇಕು? ಅಂಥ ದೇವರನ್ನು ನಮಗೆ ತೋರಿಸುವವನು ಮೂರ್ಖಶಿಖಾಮಣಿಯಲ್ಲವೇ?''

೩. ಕಾದಂಬರಿಗಳು

ಕ್ರಿ.ಶ. ೧೮೯೮ರಲ್ಲಿ ಪ್ರಕಟವಾದ ಗಳಗನಾಥರ ಮೊದಲ ಕಾದಂಬರಿ 'ಪದ್ಮನಯನಾ' ಅದ್ಭುತ-ರಮ್ಯ ಕಥಾನಕವುಳ್ಳ ಆಖ್ಯಾಯಿಕೆಯ ಪ್ರಕಾರದ್ದು. ಅನಂತರವೂ ಅವರು ಒಂದಾದರೂ ಸಾಮಾಜಿಕ ಕಾದಂಬರಿಯನ್ನು ಬರೆಯಲಿಲ್ಲ. ಅಲ್ಲದೆ ಕಾದಂಬರಿ ರಚನೆಯಲ್ಲಿ ಪಾಶ್ಚಾತ್ಯ ಪ್ರಭಾವಕ್ಕೆ ಒಳಗಾಗಿರಲಿಲ್ಲ. ಕೆಲವು ವಿಶೇಷತೆಗಳನ್ನು ಸರಿಯಾಗಿ ಗ್ರಹಿಸಬೇಕಾದರೆ ಅವರಿಗಿಂತ ಹಿಂದಿನ ಕನ್ನಡ ಕಾದಂಬರಿಗಳ ಪರಂಪರೆ ಏನಿತ್ತೆಂಬುದನ್ನೂ, ಸ್ವತಃ ಅವರ ಕಾದಂಬರಿ ಸೃಷ್ಟಿಗೆ ಅದಾವ ಪ್ರೇರಣೆಗಳಿದ್ದುವೆಂಬುದನ್ನೂ ತಿಳಿಯುವುದು ಕ್ರಮಯೋಗ್ಯವಾದುದು.

(ಅ) ಹಿನ್ನೆಲೆ

ಕ್ರಿ.ಶ. ೧೮೯೮ಕ್ಕಿಂತ ಪೂರ್ವದ ಕಾದಂಬರಿಗಳು ಮೂರು ತೆರನಾಗಿದ್ದವು.

ಅ. (ಬಾಣ ಕಾದಂಬರಿಯಂತಹ) ಆಖ್ಯಾಯಿಕೆಗಳು

ಆ. ಇಂಗ್ಲಿಶ್ ಅನುವಾದಗಳು

ಇ. ಭಾರತೀಯ ಭಾಷೆಗಳಿಂದ (ಬಂಗಾಲಿ, ತೆಲುಗು, ಮರಾಠಿ) ಬಂದವುಗಳು.

(ಅ) ಆಖ್ಯಾಯಿಕೆಗಳು, ಇಂಗ್ಲಿಶ್ ಕಾದಂಬರೀ ತಂತ್ರದ ಯಾವುದೇ ಪ್ರಭಾವಕ್ಕೆ ಒಳಗಾಗದವುಗಳು. ಆದರೆ ಕನ್ನಡದ ಪ್ರಾರಂಭಿಕ ಕಾದಂಬರಿ ಪ್ರಕಾರಕ್ಕೆ ಹತ್ತಿರವಿದ್ದವುಗಳು. ಅವೆಂದರೆ ಯಾದವಕವಿಯ 'ಕಲಾವತೀ ಪರಿಣಯ' (ಸು. ೧೮೧೫), ಮುಮ್ಮಡಿ ಕೃಷ್ಣರಾಜ ಒಡೆಯರರ ಅಂಕಿತವುಳ್ಳ 'ಸೌಗಂಧಿಕಾ ಪರಿಣಯ' (ಸು. ೧೮೩೧) ಮತ್ತು ತುರಮರಿ ಅವರ 'ಬಾಣ ಕಾದಂಬರಿ' (೧೮೭೫)

ಮೊದಲಿನ ಎರಡು ಕೃತಿಗಳಲ್ಲಿಯ 'ಪರಿಣಯ' ಎಂಬ ಉತ್ತರಪದವನ್ನು ಗಮನಿಸಬೇಕು. ಶೃಂಗಾರಾದ್ಭುತ ಕಥಾನಕವಿರುವುದನ್ನು ಅದು ಸೂಚಿಸುತ್ತದೆ. ಕಲಾವತೀ ಪರಿಣಯವು ಪದ್ಯಗಂಧಿ ಗದ್ಯದಲ್ಲಿದ್ದು, ಅದರ ಕಥಾನಕವು ನಾವೀನ್ಯದಿಂದ ಕೂಡಿದೆ. ಕಲಾವತಿಯು ಓರ್ವ ಸ್ವಾಭಿಮಾನಿ ರಾಜಪುತ್ರಿ. ಅವಳನ್ನು ಮದುವೆಯಾಗಲಿದ್ದ ಬೃಹದ್ರಥ ರಾಜನು ಮದುವೆಗೆ ಮುನ್ನ ಅವಳ ಸಂಗವನ್ನು ಬಯಸಿದಾಗ ಕಲಾವತಿಯು ಒಪ್ಪುವುದಿಲ್ಲ. ಅದರಿಂದ ಸಿಟ್ಟಿಗೆದ್ದ ಬೃಹದ್ರಥನು "ನಿನ್ನನ್ನು ಮದುವೆ ಆಗುವೆ. ಆದರೆ ನಿನ್ನನ್ನು ತೊರೆಯುವೆ" ಎನ್ನುತ್ತಾನೆ. ಆಗ ಕಲಾವತಿಯೂ "ಉಪಾಯವಿಲ್ಲ, ಎಂತಾದರೂ ನಿಮ್ಮ ಸಂಗ ಮಾಡಿ, ಮಗನನ್ನು

ಪಡೆದು ಅವನಿಂದಲೇ ನಿಮ್ಮ ನಿಗ್ರಹ ಮಾಡಿಸುವೆ'' ಎಂದು ಶಪಥಗೈಯುತ್ತಾಳೆ. ಮುಂದೆ ಓರ್ವ ಮಾಯಾವಿಯ ಕೃಪೆಯಿಂದ ರೂಪವನ್ನು ಬದಲಿಸಿ ರಾಜನ ಸಮಾಗಮ ಹೊಂದಿ ತನ್ನ ಶಪಥವನ್ನು ಪೂರೈಸುತ್ತಾಳೆ. ಗಳಗನಾಥರ ಪದ್ಮನಯನಾ - ಇದೇ ಬಗೆಯ ಅದ್ಭುತ ರಮ್ಯ ಕಥಾನಕವಾಗಿದೆ.

ಸೌಗಂಧಿಕಾ ಪರಿಣಯವು ದೇವೇಂದ್ರ ಶಚಿಯರನ್ನು ಕುರಿತದ್ದು.

ಮುನಿಶಾಪದಿಂದ ಇಬ್ಬರೂ ಸುಗಂಧರಾಜ, ಸೌಗಂಧಿಕೆಯರಾಗಿ ಭೂಲೋಕದಲ್ಲಿ ಅವತರಿಸುತ್ತಾರೆ. ಸೌಗಂಧಿಕೆಯ ಸ್ವಯಂವರಕ್ಕಾಗಿ ಇರಿಸಿದ್ದ ಪಣಗಳನ್ನು ಸುಗಂಧರಾಜನು ಪೂರೈಸಿ ಅವಳನ್ನು ವರಿಸುವನು. ಆದರೆ, ಒಂದು ಸಾವಿರದಷ್ಟು ಪುಟಗಳನ್ನೊಳಗೊಂಡ ಈ ಕಾದಂಬರಿಯಲ್ಲಿ ಯೋಗಶಾಸ್ತ್ರ, ಮತ್ತಿತರ ಧಾರ್ಮಿಕ ಅಂಶಗಳು ಬಹಳ ಸೇರಿಕೊಂಡಿವೆ.

ಇವೆರಡು ಕೃತಿಗಳು ಮೈಸೂರ ಕಡೆಯ ರಚನೆಗಳಾದರೆ ಕನ್ನಡ ಬಾಣ ಕಾದಂಬರಿಯು ಉತ್ತರ ಕರ್ನಾಟಕದಲ್ಲಿ ಮೈದೋರಿತು. ಬಾಣನದು ಅತಿ ಕ್ಲಿಷ್ಟವಾದ ಗದ್ಯ. ಅಲ್ಲದೆ ಶ್ಲೇಷಾಲಂಕಾರಗಳಿಂದ ನಿಬಿಡವಾದದ್ದು. ಸಾಮಾನ್ಯ ವಾಚಕರಿಗೆ ತ್ರಾಸದಾಯಕವಾಗುವ ಇಂಥ ಅಂಶಗಳನ್ನು ಬಿಟ್ಟುಕೊಟ್ಟು, ರಸವತ್ತಾದ ಕಥಾಂಶಗಳನ್ನು ಮಾತ್ರ ಇಲ್ಲಿ ಕೊಡಲಾಗಿದೆ. ಅಲ್ಲದೆ ಪ್ರತಿಯೊಂದು ಸನ್ನಿವೇಶವನ್ನು ನಮ್ಮ ಕಣ್ಣಿಗೆ ಕಟ್ಟುವಂತೆ ಸರಳೀಕರಿಸಿ ಚಿತ್ರಿಸಿದ್ದು ಇದರ ವಿಶೇಷತೆಯಾಗಿದೆ. ಇದೊಂದು ಮಾದರಿ:

''ನನ್ನ ದಾಸಿಯು ಎರಡನೆ ಸಾರಿ ಆ ಋಷಿಕುಮಾರನ ದರ್ಶನ ತಕ್ಕೊಂಡು ಆತನ ಕೂಡ ಮಾತಾಡಿ ಬಂದದ್ದರಿಂದ ಅವಳು ಅತಿ ಭಾಗ್ಯವಂತಳೆಂದು ಎಣಿಸಿದೆನು. ದಾಸಿಯಾದರೂ ಆಕೆಯ ಕೂಡ ಆದರದಿಂದಲೂ ಮಾತನಾಡಿದೆನು. ಆಕೆಯನ್ನು ಜೀವದ ಗೆಳತಿಯನ್ನು ಮಾಡಿಕೊಂಡು ಗಲ್ಲವ ಹಿಡಿದು, ಮುಂಗುರುಳು ತೀಡಿ 'ತರಲಿಕೇ, ಆ ಋಷಿಕುಮಾರನು ಮತ್ತೇನನ್ನು ಅಂದನು? ನೀನು ಎಷ್ಟು ಹೊತ್ತು ಆತನ ಬಳಿಯಲ್ಲಿದ್ದಿ? ಆತನು ಎಲ್ಲಿಯ ತನಕ ನಮ್ಮ ಹಿಂದಿಂದೆ ಬಂದನು?' ಎಂದು ಮತ್ತೆ ಮತ್ತೆ ಆ ಋಷಿಕುಮಾರನ ಮಾತುಗಳನ್ನೇ ಆಕೆಯ ಕೂಡ ಆಡುತ್ತಾ ಸೌಧಾಗ್ರದ ಮೇಲೆಯೇ ಸಂಜೆಯ ತನಕ ಹೊತ್ತುಗಳೆದೆನು.''

ಈ ಬಗೆಯ ಬಿಚ್ಚುನುಡಿಯ ಪ್ರಾಸಾದಿಕ ಶೈಲಿ, ಮುಂದಿನ ಐದಾರು ದಶಕಗಳ ವರೆಗೆ ಉತ್ತರ ಕರ್ನಾಟಕದ ಲೇಖಕರಲ್ಲಿ ಕಾಣಿಸಿಕೊಂಡಿತು. ಈ ಶೈಲಿಯನ್ನು ಪರಾಕಾಷ್ಠೆಗೆ ಒಯ್ದವರೇ ಗಳಗನಾಥರು.

(ಆ) ಇನ್ನು ಆಂಗ್ಲ ಕಾದಂಬರಿಗಳು. ಇಂಗ್ಲಿಶ್ ಶಿಕ್ಷಣದ ಕಾರಣದಿಂದ ಆ ಭಾಷೆಯ ಸಾಹಿತ್ಯ ಕೃತಿಗಳನ್ನು ನಮ್ಮವರು ಅಭ್ಯಸಿಸಿದ್ದರು. ಅದರ ಪರಿಣಾಮವಾಗಿ ಶೇಕ್ಸ್‌ಪಿಯರನ ನಾಟಕಗಳು ಕನ್ನಡದಲ್ಲಿ ರೂಪಾಂತರ ಹೊಂದಿದುವು. ಆದರೆ ಆ ಭಾಷೆಯ ಕೆಲವೇ ಕಾದಂಬರಿಗಳು ಧಾರ್ಮಿಕ ಇಲ್ಲವೆ ಶೈಕ್ಷಣಿಕ ದೃಷ್ಟಿಯಿಂದ ಅನುವಾದಗೊಂಡವು. (ಉದಾ. ಪಿಲ್‌ಗ್ರಿಮ್ಸ್ ಪ್ರೊಗ್ರೆಸ್; ರಾಬಿನ್‌ಸನ್ ಕ್ರೂಸೊ,) ಅದೇನಿದ್ದರೂ ಅವು ಗಳಗನಾಥರ ಮೇಲೆ ಯಾವುದೇ ಪರಿಣಾಮ ಬೀರಲಿಲ್ಲ. ಅವರು ಇಂಗ್ಲಿಶ್ ಕೃತಿಗಳನ್ನು ಗಮನಿಸಿರಲೂ ಇಲ್ಲ.

ಇತ್ತ ಇಂಗ್ಲಿಶ್ ಸಾಹಿತ್ಯಾಭ್ಯಾಸವು ಬಂಗಾಲಿ, ಮರಾಠಿ, ತೆಲುಗು ಮೊದಲಾದ ಭಾರತೀಯ ಭಾಷೆಗಳ ಲೇಖಕರಿಗೆ ಪ್ರೇರಣೆ ನೀಡಿತ್ತಲ್ಲವೆ. ಬಂಗಾಲಿ ಕಾದಂಬರಿಕಾರರಾದ ಬಂಕಿಮಚಂದ್ರರ ಕೃತಿಗಳನ್ನು ಬಿ. ವೆಂಕಟಾಚಾರ್ಯರು ೧೮೮೫ ರಿಂದ ಅನುವಾದಿಸತೊಡಗಿದ್ದರು. ಅವರು ತಮ್ಮ ಮೊದಲ ಕೃತಿಯಾದ 'ದುರ್ಗೇಶ ನಂದಿನಿ'ಯ ಪೀಠಿಕೆಯಲ್ಲಿ ಹೇಳಿದ್ದಂತೆ ತಮ್ಮ ಅನುವಾದವು - A novel in the sense it is understood in English is not familiar to the Kanarese speaking public - ಎಂಬ ಸ್ಥಿತಿಯನ್ನು ಸರಿಪಡಿಸುವುದಾಗಿದ್ದಿತು. ಬಿ. ವೆಂಕಟಾಚಾರ್ಯರು ಮುಂದಿನ ದಶಕಗಳಲ್ಲಿ 'ಆನಂದಮಠ,' 'ದೇವಿ ಚೌಧುರಾಣಿ' ಮೊದಲಾದ ಐತಿಹಾಸಿಕ ಕಾದಂಬರಿಗಳನ್ನು ಅನುವಾದಿಸಿ ಹೊರತಂದರು. 'ರಜನಿ' 'ವಿಷವೃಕ್ಷ'- ಎಂಬ ಸಾಮಾಜಿಕ ಕಾದಂಬರಿಗಳೂ ಅನುವಾದಗೊಂಡವು. ಇವೆಲ್ಲ ಮೈಸೂರು ಪ್ರದೇಶದಲ್ಲಿ ಸಾಕಷ್ಟು ಪ್ರಚಾರದಲ್ಲಿದ್ದರೂ, ಪ್ರಾದೇಶಿಕ ಭೇದದಿಂದಾಗಿ ಉತ್ತರ ಕರ್ನಾಟಕದ ಜನತೆಯನ್ನು ತಟ್ಟಿದ್ದುದು ಕಡಿಮೆಯೇ. ಗಳಗನಾಥರು ಕನ್ನಡದಲ್ಲಿರುವ ಈ ಕೃತಿಗಳನ್ನು ಓದಿರಬಹುದಾದರೂ, ಅವುಗಳಿಂದ ಯಾವುದೇ ಪ್ರಭಾವ ಹೊಂದಿದಂತೆ ಕಾಣುವುದಿಲ್ಲ. ಅದರಂತೆ ತೆಲುಗಿನಿಂದ ಬಂದ ಕನ್ನಡ ಕಾದಂಬರಿಗಳೂ ಸಹ ಗಳಗನಾಥರಿಗೆ ಯಾವುದೇ ಪ್ರೇರಣೆಯನ್ನು ಒದಗಿಸಿದಂತೆ ಕಾಣದು.

ಆದರೆ ಅವರಿಗೆ ಮರಾಠಿ ಕಾದಂಬರಿಗಳು ಮಾತ್ರ ಹಲವಾರು ರೀತಿಯಲ್ಲಿ ಪ್ರಭಾವ ಬೀರಿದ್ದುವು. ಮರಾಠಿ ಕೊಂಕಣಸ್ಥ ಬ್ರಾಹ್ಮಣರಿಂದಲೂ, ಕೆಲ ಕಾಲದ ಪುಣೆಯ ವಾಸ್ತವ್ಯದಿಂದಾಗಿಯೂ ಅವರಿಗೆ ಮರಾಠಿ ಭಾಷೆಯು ಕರಗತವಾಗಿದ್ದಿತು.

ಮರಾಠೀ ಕಾದಂಬರಿಗಳ ಪರಂಪರೆ ೧೮೫೭ರಲ್ಲಿ ಪ್ರಕಟವಾದ 'ಯಮುನಾ ಬಾಯಿ ಸಂಚಾರ'ದಿಂದ ಮೊದಲಾಗಿದ್ದಿತು. ಕ್ರೈಸ್ತಮತೀಯನಾದ ಬಾಬಾ ಪದಮಂಜಿಯ ಈ ಕೃತಿಯು ವಿಧವಾ ಸಮಸ್ಯೆಯನ್ನು ವಿವೇಚಿಸುತ್ತದೆ. ಆದರೆ

ಮುಂದಿನ ಮರಾಠಿ ಕಾದಂಬರಿಗಳಲ್ಲಿ ಹೆಚ್ಚಿನವು ಐತಿಹಾಸಿಕ ಕಥಾನಕಗಳಾಗಿವೆ. ಅದ್ಭುತ ರಮ್ಯ ಕಥಾನಕದ ಮಾದರಿಯೆಂದು 'ಮಂಜುಘೋಷಾ' ಕಾದಂಬರಿಯನ್ನು ಹೆಸರಿಸಬೇಕು. ಈ ಐತಿಹಾಸಿಕ ಹಾಗೂ ರಮ್ಯಕಥಾನಕ ಕಾದಂಬರಿಗಳಿಂದ ಗಳಗನಾಥರು ಪಡೆದಿರಬಹುದಾದ ಪ್ರೇರಣೆ ಹಾಗೂ ಸ್ವೀಕರಣಗಳನ್ನು ಆ ಕಾದಂಬರಿಗಳ ಮುಂದಿನ ಪಕ್ಷಿನೋಟದಲ್ಲಿ ಪ್ರಸ್ತಾಪಿಸಲಾಗುವುದು.

ಗಳಗನಾಥರಿಗಿಂತ ಹಿಂದಿನ ಹಾಗೂ ಅವರ ಸಮಕಾಲೀನರಿದ್ದ ಬಹುತರ ಎಲ್ಲ ಕಾದಂಬರಿಕಾರರು, ಪೀಠಿಕೆಗಳಲ್ಲಿ ತಂತಮ್ಮ ಆಶಯಗಳನ್ನು ವ್ಯಕ್ತಪಡಿಸಿದ್ದಾರೆ. 'ಇಂಗ್ಲಿಶ್‌ನಲ್ಲಿ ಕಾದಂಬರಿಗಳಿವೆ. ನಮ್ಮ ಮಾತೃಭಾಷೆಯಲ್ಲಿಯೂ ಇರಬೇಕು. ನಮ್ಮ ಜನರ ವಾಚನಾಭಿರುಚಿಯನ್ನು ಬೆಳೆಸಬೇಕು, ಸದಾಚಾರವನ್ನು ಬೋಧಿಸಬೇಕು' ಎಂಬುದು ಅವುಗಳ ಆಶಯ. ಇನ್ನು ಕೆಲವರು ಮನರಂಜನೆಯೇ ತಮ್ಮ ಗುರಿಯೆಂದು ಹೇಳಿದ್ದಾರೆ. ಇಂಥ ರಂಜನೆಯನ್ನು ಒದಗಿಸಬೇಕಾದರೆ ರಮ್ಯ ಕಥಾನಕಕ್ಕೆ ಶರಣು ಹೋಗಬೇಕೆಂಬ ನಿಲುವನ್ನು ಅವರು ತಳೆದಿದ್ದರು. ಅದನ್ನು ಸಾಧಿಸುವುದು, ವಾಸ್ತವತೆಯ ಸಾಮಾಜಿಕ ಚಿತ್ರಣಗಳಿಂದ ಹೇಗೆ ಸಾಧ್ಯ? ಅದಕ್ಕಾಗಿ ಧೀರ ವೀರ ಹಾಗೂ ಉದಾತ್ತ ವ್ಯಕ್ತಿಗಳಿರುವ ಐತಿಹಾಸಿಕ ಕಥಾನಕಗಳೇ ಬೇಕು. ಇತ್ತ ಅಲೌಕಿಕ ಹಾಗೂ ಇಂದ್ರಿಯಾತೀತ ಘಟನೆಗಳು ಆಗಿನ ಜನಕ್ಕೆ ಹೇಗೂ ಸ್ವೀಕಾರಾರ್ಹವಾಗಿದ್ದವು. ಇದು ಗಳಗನಾಥರ ಕಾಲದ ಕಾದಂಬರಿಕಾರರ ಮನೋಭೂಮಿಕೆಯಾಗಿದ್ದಿತು. ಗಳಗನಾಥರು ತುಸು ಹೆಚ್ಚು ಕಡಿಮೆ ಇದೇ ನಿಲುವನ್ನು ಹೊಂದಿದ್ದರು. ಎಂದರೆ ಕಾದಂಬರಿಯ ವಸ್ತು ಜನಮನವನ್ನು ರಂಜಿಸುವಂತಿರಬೇಕು. ಪಾತ್ರಗಳು ಉದಾತ್ತವೂ ಸಾಹಸಪೂರ್ಣವೂ ಆಗಿರಬೇಕು. ಯುದ್ಧ, ಪರಿಣಯ ಮುಂತಾದ ಘಟನೆಗಳ ಮೂಲಕ ವೀರ, ಶೃಂಗಾರ, ಕರುಣ ರಸಗಳಿಗೆ ಹೆಚ್ಚಿನ ಅವಕಾಶವಿರಬೇಕು. ಅಲ್ಲಲ್ಲಿ ಅಲೌಕಿಕ ಘಟನೆಗಳಿದ್ದರೆ ತಪ್ಪೇನಿಲ್ಲ! ಈ ರೀತಿಯಾಗಿ ಮನರಂಜನೆಯನ್ನು ಒದಗಿಸುವುದರ ಜೊತೆಗೆ ಸದ್ಧರ್ಮ, ಸದಾಚಾರಗಳ ಬೋಧನೆಯಾಗಬೇಕು. ಈ ಕೊನೆಯ ಅಂಶ ಮಾತ್ರ ಉಳಿದವರಿಗಿಂತ ಗಳಗನಾಥರಲ್ಲಿ ಹೆಚ್ಚಿನ ಪ್ರಮಾಣದಲ್ಲಿದ್ದಿತು.

ಇನ್ನೀಗ ಗಳಗನಾಥರ ಕಾದಂಬರಿಗಳನ್ನು ಸಮೀಕ್ಷಿಸೋಣ. ಈ ಹಿಂದೆ ಹೇಳಿದಂತೆ 'ಭಗವತಿ ಕಾತ್ಯಾಯಿನಿ' ಮತ್ತು 'ಪದ್ಮನಯನಾ' ಇವನ್ನು ಬಿಟ್ಟರೆ ಅವರು ಬರೆದ ಕಾದಂಬರಿಗಳೆಲ್ಲ ಐತಿಹಾಸಿಕ ಕಥನಗಳೇ ಆಗಿವೆ. ಚಾರಿತ್ರಿಕವಾಗಿ ಅವನ್ನು ಮೌರ್ಯರು, ವಿಜಯನಗರದ ಅರಸರು, ರಜಪೂತರು ಹಾಗೂ ಮರಾಠರು - ಈ ರಾಜರ ಕಾಲದವು ಎಂಬ ರೀತಿಯಲ್ಲಿ ವಿಂಗಡಿಸಬಹುದು.

(ಆ) ಮೌರ್ಯರ ಕಥಾನಕಗಳು

ಮೌರ್ಯರ ಕಾಲದವೆಂದು 'ವೈಭವ' ಹಾಗೂ 'ಧರ್ಮರಹಸ್ಯ' ಎಂಬುವನ್ನು ಹೆಸರಿಸಬೇಕು. ಮೊದಲಿನದಕ್ಕೆ ಹ.ನಾ. ಆಪ್ಟೆಯವರ 'ಚಂದ್ರಗುಪ್ತ'ವು ಆಕರವಾಗಿದ್ದು, ಈ ಹೆಸರು ಸೂಚಿಸುವಂತೆ, ಕಾದಂಬರಿಯಲ್ಲಿ ಚಂದ್ರಗುಪ್ತ - ಚಾಣಕ್ಯ - ಅಮಾತ್ಯರಾಕ್ಷಸ - ನಂದರ ಕಥೆ ಬಂದಿದೆ. ಕಥೆ ಪರಿಚಯವಾದದ್ದೇ. ಆದರೆ ಇದರಲ್ಲಿಯ ಮುರಾದೇವಿಯ ಪಾತ್ರ ಹೃದ್ಯವಾಗಿ ಮೂಡಿದೆ. ಚಂದ್ರಗುಪ್ತನ ತಾಯಿಯಾದ ಈಕೆಯ ಆತ್ಮಬಲಿದಾನವು ಗಮನೀಯವಾಗಿದೆ. ಈ ಕಾದಂಬರಿಗೆ 'ವೈಭವ' ಎಂದು ನಾಮಕರಣ ಮಾಡಿದ್ದೇಕೆ? ಅಮಾತ್ಯರಾಕ್ಷಸನಲ್ಲಿ ಸ್ವಾಮಿನಿಷ್ಠೆಯ ವೈಭವ, ಚಾಣಕ್ಯನಲ್ಲಿ ಬುದ್ಧಿಯ ವೈಭವ... ಹೀಗೆ ಒಂದೊಂದು ಪಾತ್ರದಲ್ಲಿ ವೈಭವವನ್ನು ಎಳೆದು ತಂದು ಗಳಗನಾಥರು ತಮ್ಮ ಸಮರ್ಥನೆ ಮಾಡಿಕೊಂಡಿದ್ದಾರೆ.

'ಧರ್ಮರಹಸ್ಯ'ಕ್ಕೂ 'ಸಾಮ್ರಾಟ್ ಅಶೋಕ್' ಎಂಬ ಮರಾಠಿ ಕಾದಂಬರಿಯು ಆಧಾರವಾಗಿದೆ. (ಮೂಲ ಲೇಖಕರು: ಬಾ.ನಾ. ಶಹಾ) ಇದರಲ್ಲಿ ಮೌರ್ಯ ಹಾಗೂ ಕಳಿಂಗ ಈ ಎರಡು ಮನೆತನಗಳ ಘರ್ಷಣೆ ಹಾಗೂ ಮಿಲನ ಮೂಡಿ ಬಂದಿದೆ. ಮೊದಲಿಗೆ ಕ್ರೂರಿಯಾಗಿದ್ದ ಅಶೋಕನು ಒಂದು ಸುವ್ಯವಸ್ಥಿತವಾದ ನರಕವನ್ನೇ ನಿರ್ಮಿಸಿದ್ದನು. ಆದರೆ ಸತ್ಯ ಮಾರ್ಗದ ಪ್ರಭಾವದಿಂದಾಗಿ ಧರ್ಮಪುರುಷನಾಗುತ್ತಾನೆ. ವೈದಿಕ ಧರ್ಮದ ಚಿದಾನಂದಸ್ವಾಮಿ ಹಾಗೂ ಬೌದ್ಧ ಧರ್ಮದ ಉಪಗುಪ್ತ, ಮೊಗ್ಗಲಿ ಪುತ್ರ ತಿಷ್ಯ- ಇವರುಗಳು ಈ ಸತ್ಯಮಾರ್ಗದ ಕಾರಣಕರ್ತರು, ಪಾತ್ರಗಳಲ್ಲಿ ಅಶೋಕನ ಒಡಹುಟ್ಟಿದವರಾದ ವೀತಾಶೋಕ, ಇಂದಿರೆ, ಕಲಿಂಗದ ರಾಜಕುಮಾರಿಯಾದ ಪ್ರಣಯಿನಿ-ಈ ಪಾತ್ರಗಳು ಕಥಾನಕಕ್ಕೆ ಮೆರುಗನ್ನು ತಂದಿವೆ. ಧರ್ಮದ ಜೊತೆಗೆ ಪ್ರಣಯವೂ ಎರಡು ಮನೆತನಗಳನ್ನು ಒಂದುಗೂಡಿಸುವುದಕ್ಕೆ ಕಾರಣವಾಗುತ್ತದೆ. 'ವೈಭವ'ಕ್ಕಿಂತ ಈ ಕಾದಂಬರಿಯು ಸತ್ವದಲ್ಲಿ ಹಿರಿದಾದುದು.

'ಮೃಣಾಲಿನಿ' ಕಾದಂಬರಿಯು ಮೌರ್ಯರಿಗೆ ಸಂಬಂಧಿಸಿದ್ದಲ್ಲವಾದರೂ ಆ ಪ್ರದೇಶದ್ದೆಂದು ಇಲ್ಲಿಯೇ ಅದನ್ನು ಪರಿಶೀಲಿಸೋಣ. ಇದರ ರಚನೆಯು ಒಂದೆರಡು ಕಾರಣಗಳಿಂದ ವಿಶಿಷ್ಟವಾಗಿದೆ. ಇದರ ಮೂಲ ರಚನೆ ಬಂಕಿಮಚಂದ್ರರದು. ಮರಾಠಿಯ 'ಮಾಸಿಕ ಮನೋರಂಜನ' ಎಂಬ ಪತ್ರಿಕೆಯಲ್ಲಿ ಅನುವಾದಗೊಂಡು ಧಾರಾವಾಹಿಯಾಗಿ ಬರುತ್ತಿದ್ದಾಗ, ಗಳಗನಾಥರು ತಮ್ಮ ಪುಣೆಯ ವಾಸ್ತವ್ಯದಲ್ಲಿ ಅದನ್ನು ಓದಿದ್ದರೆಂದು ಕಾಣುತ್ತದೆ. ಕಾದಂಬರೀ ಪ್ರಕಾರದಲ್ಲಿ ತಾವು ಬರೆಯಬೇಕೆನ್ನುವುದಕ್ಕೆ ಹಾಗೆ ಬರೆದದ್ದನ್ನು ಧಾರಾವಾಹಿಯಾಗಿ

ಪ್ರಕಟಿಸಬಹುದೆಂಬುದಕ್ಕೆ ಈ ಕೃತಿಯಿಂದಲೇ ಮನಗಂಡರು. ಎರಡನೆಯದೆಂದರೆ ಯಾವುದೊಂದು ಕಾದಂಬರಿಯನ್ನು ಅನುವಾದಿಸುವಾಗ ಶಬ್ದಶಃ ಅನುವಾದಿಸದೇ, ಹಿಗ್ಗಿಸಿ ಕುಗ್ಗಿಸಬೇಕೆನ್ನುವಲ್ಲಿ ಮೈಚಳಿ ಬಿಟ್ಟುದನ್ನೂ ಇಲ್ಲಿ ಕಾಣುತ್ತೇವೆ. ಮೂರನೆಯದೆಂದರೆ ಮರುಮುದ್ರಣದ ಕಾಲಕ್ಕೆ ಅದನ್ನು ವಿಸ್ತರಿಸಿದ್ದು. (ಸಾಮಾನ್ಯವಾಗಿ ಗಳಗನಾಥರು ಹಾಗೆ ಮಾಡದೆ, ಇದ್ದುದಿದ್ದಂತೆ ಪುನರ್ಮುದ್ರಿಸುತ್ತಿದ್ದರು).

'ಮೃಣಾಲಿನಿ' ಕಾದಂಬರಿಯನ್ನು ಮೂಲ ಬಂಗಾಲಿಯಿಂದ ಬಿ. ವೆಂಕಟಾಚಾರ್ಯರು ಈ ಮೊದಲು ಹೊರತಂದಿದ್ದರು. ಅದನ್ನು ಗಳಗನಾಥರು ಓದಿರಲಿಕ್ಕೂ ಇಲ್ಲ. ಇಲ್ಲಿಯ ಕಥಾವಸ್ತು ಮುಸಲ್ಮಾನರ ಬಂಗಾಲ ಆಕ್ರಮಣದ ಆರಂಭದ ದಿನಗಳಿಗೆ ಸಂಬಂಧಿಸಿದ್ದಾಗಿದೆ. (ವಿಜಯನಗರ ರಾಜ್ಯಸ್ಥಾಪನೆಯ ಕಾಲಕ್ಕೆ ಇದೇ ಪರಿಸ್ಥಿತಿ ಇದ್ದಿತಲ್ಲವೆ). ಇದರಲ್ಲಿಯ ಮುಖ್ಯ ಪಾತ್ರಗಳೆಂದರೆ ಮಗಧ ರಾಜಪುತ್ರನಾದ ಹೇಮಚಂದ್ರ ಹಾಗೂ ಅವನನ್ನು ಬಹುವಾಗಿ ಮೆಚ್ಚಿ ಮದುವೆಯಾದ ಮೃಣಾಲಿನಿ. ಹೇಮಚಂದ್ರನ ಗುರು ಮಾಧವಚಾರ್ಯನು (ವಿಜಯನಗರದ ಮಾಧವಚಾರ್ಯರನ್ನು ನೆನಪಿಗೆ ತಂದುಕೊಡುತ್ತದೆ-ಈ ಪಾತ್ರ) ತುರುಕರನ್ನು ಹೊಡೆದಟ್ಟುವುದಕ್ಕೆ ಹೇಮಚಂದ್ರನನ್ನು ಅಣಿಗೊಳಿಸುವ ದೃಷ್ಟಿಯಿಂದ ಅವರನ್ನು ಅಗಲಿಸುತ್ತಾನೆ. ಇಂಥದೇ ಅಗಲಿಕೆ ನಡಿಯಾದ ಅಧಿಪತಿಯಾದ ಪಶುಪತಿ ಮತ್ತು ಪತ್ನಿ ಮನೋರಮೆಯರದು. ತನ್ನ ಪತಿಯ ಮರಣಾನಂತರ ಆಕೆ ತಮ್ಮ ಗುಪ್ತಧನವನ್ನೆಲ್ಲ ಹೇಮಚಂದ್ರನಿಗೆ ಒಪ್ಪಿಸಿ, ತುರುಕರನ್ನು ಹೊಡೆದೋಡಿಸುವ ಉದ್ಯೋಗದಲ್ಲಿ ನೆರವಾಗುತ್ತಾಳೆ.

ಇದರ ಎರಡನೆಯ ಆವೃತ್ತಿಯಲ್ಲಿ (ಆಗ ಅದರ ಹೆಸರು ರಾಣೀ ಮೃಣಾಲಿನಿ) ಮನೋರಮೆಯನ್ನು ಕಥಾನಾಯಕ ಪಟ್ಟಕ್ಕೆ ಏರಿಸಿದಂತೆ ಕಾಣುವುದು. ಗಳಗನಾಥರ ಆಶಯದ ಪ್ರಕಾರ ಆಕೆ ಪಶುಪತಿಯ ಚಿತೆಯಲ್ಲಿ ಸಹಗಮನ ಹೊಂದದೆ, ಅವನ ಖಡ್ಗವನ್ನು ಹಿಡಿದುಕೊಂಡು ಯುದ್ಧಗಳಲ್ಲಿ ಪಾಲ್ಗೊಳ್ಳುತ್ತಾಳೆ. ಸಂಕಟ ಸಮಯಗಳಲ್ಲಿ ಹೇಮಚಂದ್ರನಿಗೆ ಸಹಾಯ ನೀಡಿ, ಥಟ್ಟನೆ ಕಣ್ಮರೆಯಾಗುತ್ತಾಳೆ. ಇಂತು ಅವಳು ಅದ್ಭುತರಮ್ಯ ಸ್ತ್ರೀಯಾಗಿ ಕಾದಂಬರಿಯ ತುಂಬ ಹರಿದಾಡಿದ್ದಾಳೆ. ''ಮನೋರಮೆಯಂಥ ಉದಾತ್ತ ಪಾತ್ರಗಳಿಂದ ನಾವು ಆತ್ಮಸಂಯಮವಾದ ಹಲವು ಉದಾತ್ತ ಗುಣಗಳ ಮಹತ್ವವನ್ನು ತಿಳಿಯಬಹುದಾಗಿದೆ'' ಎಂದು ಪೀಠಿಕೆಯಲ್ಲಿ ಹೇಳಿ ತಮ್ಮ ಎಂದಿನ ಉದಾತ್ತೀಕರಣ ಪ್ರವೃತ್ತಿಯನ್ನು ತೋರಿದ್ದಾರೆ.

(ಇ) ಕರ್ನಾಟಕ ಚರಿತ್ರೆಯ ಕಾದಂಬರಿಗಳು

ವಿಜಯನಗರ ಹಾಗೂ ಚಿತ್ರದುರ್ಗ - ಇವೆರಡೇ ರಾಜಮನೆತನಗಳು ಗಳಗನಾಥರಿಗೆ ಕಥಾವಸ್ತುವನ್ನು ಒದಗಿಸಿವೆ. ಕರ್ನಾಟಕ ಇತಿಹಾಸದ ಆಕರಗಳು ಅವರಿಗೆ ಉಪಲಬ್ಧವಿದ್ದರೆ ಇನ್ನೂ ಅಷ್ಟು ಕಾದಂಬರಿಗಳನ್ನು ಬರೆಯುತ್ತಿದ್ದರೇನೊ. ಪ್ರಕಟಗೊಂಡ ನಾಲ್ಕು ಕಾದಂಬರಿಗಳಲ್ಲಿ ಮಾಧವಕರುಣಾವಿಲಾಸ, ಕನ್ನಡಿಗರ ಕರ್ಮಕಥೆ ಮತ್ತು ಕುಮುದಿನಿ-ಈ ಮೂರರಲ್ಲಿ ಆ ಸಾಮ್ರಾಜ್ಯದ ಆರಂಭ, ಅಂತ್ಯ ಹಾಗೂ ಅಂತ್ಯೋತ್ತರ ಕಾಲದ ಕಥೆ ಬಂದಿದೆ. 'ದುರ್ಗದ ಬಿಚ್ಚುಗತ್ತಿ' ಎನ್ನುವುದೊಂದೇ ಚಿತ್ರದುರ್ಗದ ಪಾಳೆಯಗಾರರಿಗೆ ಸಂಬಂಧಿಸಿದೆ. (ಅವರ ಕೊನೆಗಾಲದಲ್ಲಿ ಬರೆದ ಈ ಕಾದಂಬರಿ ಅಪೂರ್ಣವಾಗುಳಿದಿದೆ). ವಿವಿಧ ಕಾಲಮಾನದ ಈ ಕಥಾವಸ್ತುಗಳನ್ನು ಆಯ್ದುಕೊಳ್ಳುವುದರಲ್ಲಿ ಗಳಗನಾಥರು ಯಾವುದೇ ಕ್ರಮವನ್ನು ಅನುಸರಿಸಲಿಲ್ಲ. ಅವುಗಳನ್ನು ಬರೆದ ವರ್ಷಗಳೂ ಹಿಂದುಮುಂದಿನವು. ಇದರ ಒಂದು ಕಾರಣವೆಂದರೆ, ಅವರಿಗೆ ಕರ್ನಾಟಕದ ಚರಿತ್ರೆಯ ಆಕರಗಳು ನೇರವಾಗಿ, ಸುಲಭವಾಗಿ ದೊರೆತಿರಲಿಲ್ಲ. ಇನ್ನು 'ಕನ್ನಡಿಗರ ಕರ್ಮಕಥೆ' ಕಾದಂಬರಿಗೆ ಯಾವ ಐತಿಹಾಸಿಕ ದಾಖಲೆಯೂ ಆಕರವಾಗದೆ, ಅದು ಹ.ನಾ. ಆಪ್ಟೆಯವರ 'ವಜ್ರಘಾತ'ದ ರೂಪಾಂತರವಾಗಿದೆ.

ಈ ಕಾದಂಬರಿಗೆ ಕೊಟ್ಟ 'ವಿಜಯನಗರ ರಾಜ್ಯದ ನಾಶ' ಎಂಬ ಉಪಶೀರ್ಷಿಕೆ ಕಾದಂಬರಿಯ ಆಶಯವನ್ನು ಸ್ಪಷ್ಟಪಡಿಸುತ್ತದೆ. ಬಹುಮನಿ ರಾಜ್ಯದ ಐವರು ಸುಲ್ತಾನರು ಸೇರಿ ರಕ್ಕಸತಂಗಡಿಯ ಕಾಳಗದಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಸಮಾಪ್ತಿಗೊಳಿಸಿದರು. ಆದರೆ ಅದರ ಸರ್ವಾಧಿಪತಿಯಾಗಿದ್ದ ಅಳಿಯ ರಾಮರಾಜನ ಕೊಲೆಯಾದದ್ದು ಹೇಗೆ? ಈ ಕುರಿತು ಒಂದು ವಿದೇಶಿ ಆಕರದಲ್ಲಿ ವಿಶಿಷ್ಟವಾದ ಕಾರಣವನ್ನು ಕೊಡಲಾಗಿದೆ. ಅದನ್ನೆ 'ವಜ್ರಾಘಾತ'ದಲ್ಲಿ ತಳಹದಿಯಾಗಿಟ್ಟುಕೊಂಡಿದೆ. ಆ ಸಂದರ್ಭ ಹೀಗಿದೆ:

ತರುಣವಯದ ರಾಮರಾಜನು ಮೆಹೆರ್‌ಜಾನ್ ಎಂಬವಳನ್ನು ಹುಲಿಯ ದವಡೆಯಿಂದ ಪಾರುಮಾಡಿ, ಅವಳನ್ನು ಕುಂಜವನ ಎಂಬಲ್ಲಿರಿಸಿ ಸುಖಿಸುತ್ತಾನೆ. ಆದರೆ ಮಹತ್ವಾಕಾಂಕ್ಷೆಯೊಂದರ ಬೆನ್ನು ಹತ್ತಿ ಅವಳನ್ನು ಅಧಿಕೃತವಾಗಿ ಮದುವೆಯಾಗುವುದಿಲ್ಲ. ಸೇಡಿನಿಂದ ಪ್ರೇರಿತಳಾಗಿ ಅವಳು ತನ್ನ ಮಗುವನ್ನು ಕಟ್ಟಿಕೊಂಡು ವಿಜಾಪುರದ ಸುಲ್ತಾನನ ಬಳಿಗೆ ಹೋಗುತ್ತಾಳೆ. ಮಗ ರಣಮಸ್ತಖಾನನು ದೊಡ್ಡವನಾದ ಮೇಲೆ ವಿಜಾಪುರದ ರಾಯಭಾರಿಯಾಗಿ ರಾಮರಾಜನ ದರ್ಬಾರಕ್ಕೆ

ಬರುತ್ತಾನೆ. ಇಬ್ಬರಿಗೂ ತಮ್ಮ ನಿಜಸಂಬಂಧದ ಕಲ್ಪನೆ ಇಲ್ಲ. ಮುಂದೆ ನಿರ್ಣಾಯಕ ಸ್ವರೂಪದ ಯುದ್ಧ ನಡೆದಾಗ, ತನ್ನಲ್ಲಿ ನಂಬಿಗೆಯಿರಿಸಿ ಹತ್ತಿರ ನಿಲ್ಲಿಸಿಕೊಂಡಿದ್ದ ರಣಮಸ್ತಖಾನನು ರಾಮರಾಜನ ರುಂಡವನ್ನು ಹಾರಿಸುತ್ತಾನೆ. ಅದನ್ನು ತಿಳಿದ ಅವನ ತಾಯಿ ಮೆಹೆರಜಾನಳು ಆತ್ಮಹತ್ಯೆ ಮಾಡಿಕೊಂಡು ಸಾಯುತ್ತಾಳೆ.

ಕಾದಂಬರಿಯಲ್ಲಿ, ಹುಲಿಯೊಡನೆ ಕಾದಾಟ, ಬೆಳದಿಂಗಳಲ್ಲಿ ಪ್ರಣಯ ವಿಹಾರ, ರಾಮರಾಜನ ಮಹತ್ವಾಕಾಂಕ್ಷೆ, ಮೆಹರಜಾನಳ ಅಳಲು, ಅವಳನ್ನು ಆಂತರ್ಯದಲ್ಲಿ ಮೋಹಿಸಿದ್ದ ಧನಮಲ್ಲನ ಚಿತ್ರಣ, ದಾಸಿಯಾದ ಮಾರ್ಜಿನೆಯ ಸ್ವಾಮಿನಿಷ್ಠೆ, ರಣಮಸ್ತಖಾನನ ಮೇಲಿನ ಅಪತ್ಯಭಾವನೆ ರಾಮರಾಜನಲ್ಲಿ ತೋರಿದ ಬಗೆ, ಕೊನೆಯಲ್ಲಿ ತನ್ನ ಮಗನೇ ಚೆಂಡಾಡಿದ ಗಂಡನ ರುಂಡವನ್ನು ಹಿಡಿದುಕೊಂಡು ಮೆಹೆರಜಾನಳು ಪುಷ್ಕರಣಿಯಲ್ಲಿ ಹಾರಿ ಮುಳುಗಿದ್ದು - ಇವು ಒಂದೊಂದೂ ಅತ್ಯಂತ ವಾಚನೀಯವಾಗಿವೆ. ಗಳಗನಾಥರು ಮೂಲ ಕಾದಂಬರಿಯಲ್ಲಿ ಬಹಳಷ್ಟು ಬದಲಾವಣೆ ಮಾಡಿಕೊಂಡಿದ್ದರೂ ಅನಾವಶ್ಯಕ ವಿವರಗಳನ್ನು ಕೈಬಿಟ್ಟಿದ್ದಾರೆ. ಕೆಲ ಸನ್ನಿವೇಶಗಳಲ್ಲಿ ಔಚಿತ್ಯಪೂರ್ಣವಾಗಿ ಸಂಕ್ಷೇಪಿಸಿದ್ದಾರೆ. ಹೀಗಾಗಿ ಕಾದಂಬರಿಯು ಓಟಕ್ಕೆ ಒಂದು ಬಗೆಯ ಖಚಿತತೆ ಬಂದಿದೆ.

ವರ್ಣನಾವಸರದಲ್ಲಿ ಗಳಗನಾಥರು ಆಗೀಗ ವಾಚಕರನ್ನು ಉದ್ದೇಶಿಸಿ ಉಪದೇಶಿಸಿದ್ದಾರೆ. ಆಗಿನ ಕಾಲದ ಹಲವಾರು ಕಾದಂಬರಿಕಾರರು ಈ ರೀತಿಯಲ್ಲಿ ವಾಚಕರನ್ನು ಸಂಬೋಧಿಸುವ ಕ್ರಮವು ರೂಢಿಯಾಗಿತ್ತು. ಗಳಗನಾಥರ ಒಂದು ವೈಶಿಷ್ಟ್ಯವೆಂದರೆ ತಾವೇ ಸೃಷ್ಟಿಸಿದ ಪಾತ್ರಗಳ ಗುಣವಿಮರ್ಶೆಯನ್ನು ಮಾಡಿದ್ದು. ರಾಮರಾಜನಿಗೆ ಸಂಬಂಧಿಸಿದ ಇವೆರಡು ಮಾದರಿಗಳು:

''ಪ್ರಿಯ ವಾಚಕರೆ, ತುಂಬಿ ಹೊರಸೂಸುವ ಪ್ರಾಯದ ಸೊಕ್ಕಿನಲ್ಲಿ ನಾವು ಮನಸ್ಸಿಗೆ ಹೊರ ಚಾಳಿಯನ್ನು ಬಿಟ್ಟರೆ, ಆ ಖೋಡಿ ಮನಸ್ಸು ಅಸುಗೊಳ್ಳದೆ ತಕ್ಕ ಪ್ರಸಂಗ ಒದಗಿದಾಗಲೆಲ್ಲ ನಮ್ಮನ್ನು ಎಳೆದೆಳೆದು ಗಾಸಿ ಮಾಡುತ್ತದೆಂಬುದನ್ನು ಪ್ರಾಯಸ್ಥರಾದ ನಿಮ್ಮಲ್ಲಿ ಬಹು ಜನರು ಒಪ್ಪಿಕೊಳ್ಳುವರೆಂದು ಹೇಳಬಹುದಾಗಿದೆ. ಆದ್ದರಿಂದ ಪ್ರಿಯ ವಾಚಕರೆ, ಎಚ್ಚರಿಕೆ. ಸಿಕ್ಕ ಸಿಕ್ಕ ಬೀಜಗಳು ನಿಮ್ಮ ಮನೋಭೂಮಿಯಲ್ಲಿ ಬಿತ್ತದಂತೆ ನೀವು ಜಾಗರೂಕರಾಗಿರತಕ್ಕದ್ದು!''

''ರಾಮರಾಜನು ತನ್ನ ವೈದಿಕ ಧರ್ಮಕ್ಕೆ ವಿರುದ್ಧ ಮೆಹೆರಜಾನಳ ಪಾಣಿಗ್ರಹಣ ಮಾಡತಕ್ಕದ್ದಿದ್ದಿಲ್ಲ. ಒಂದು ಪಕ್ಷದಲ್ಲಿ ಮಾಡಿದರೂ, ಮುಖ್ಯ ಪತ್ನಿಯಾಗಿ ಮಾಡುವೆನೆಂದು ಆಕೆಗೆ ವಚನ ಕೊಡತಕ್ಕದ್ದಿದ್ದಿಲ್ಲ. ಒಮ್ಮೆ ವಚನ ಕೊಟ್ಟ ಬಳಿಕ

ಅದರಂತೆ ನಡೆಯುವುದು ಪೌರುಷಕ್ಕೆ ಒಪ್ಪುವ ಮಾತಾಗಿದ್ದಿತು. ಆದರೆ ರಾಮರಾಜನು ಹಾಗೆ ಮಾಡದೆ ತನ್ನ ಮಹತ್ವಾಕಾಂಕ್ಷೆಯಿಂದ ವಚನಭಂಗದ ಹಾದಿಯನ್ನು ಹಿಡಿದನು''.

'ಕುಮುದಿನಿ' ಗಳಗನಾಥರ ಪ್ರಥಮ ಸ್ವತಂತ್ರ ಐತಿಹಾಸಿಕ ಕಾದಂಬರಿ. ಕೇವಲ ಏಳೆಂಟು ಪುಟಗಳಲ್ಲಿ ದಾಖಲೆಗೊಂಡಿದ್ದ ಒಂದು ಐತಿಹಾಸಿಕ ಘಟನೆಯನ್ನು ಅತ್ಯಂತ ಮನನೀಯವಾದ ರೀತಿಯಲ್ಲಿ ಕಥನಿಸಿದ್ದಾರೆ. ಪ್ರಸ್ತಾವನೆಯಲ್ಲಿ ಅವರೇ ಹೇಳಿಕೊಂಡಂತೆ, ಈ ಕಾದಂಬರಿಯಲ್ಲಿ ಹಾಸ್ಯ ರಸವೊಂದನ್ನು ಬಿಟ್ಟು ಉಳಿದ ಎಲ್ಲ ರಸಗಳಿವೆ. ಕಾಮಕ್ರೋಧಾದಿ ಭಾವಗಳಿಂದೊಡಗೂಡಿದ್ದರೂ ಮಾನವೀಯ ಹಾಗೂ ಉದಾತ್ತ ಗುಣಗಳುಳ್ಳ ಪಾತ್ರಗಳನ್ನು ಸೃಷ್ಟಿಸಿದ್ದಾರೆ.

ಕಥಾಸಂದರ್ಭ ಹೀಗಿದೆ: ಚಂದ್ರಗಿರಿಯ ಅರಸು ರಂಗರಾಯನನ್ನು ಜಗರಾಯನೆಂಬ ಸಂಬಂಧಿಯು, ಸೆರೆಯಲ್ಲಿರಿಸಿ ತಾನೇ ರಾಜ್ಯಸೂತ್ರವನ್ನು ವಹಿಸುತ್ತಾನೆ. ಸ್ವಾಮಿನಿಷ್ಠನಾದ ಎಚ್ಚಮನಾಯಕನು ಆ ರಾಜಪರಿವಾರವನ್ನು ಮುಕ್ತ ಮಾಡಲು ಸಾಧ್ಯವಾಗದಿದ್ದಾಗ, ಎಚ್ಚಮನಾಯಕನ ಪತ್ನಿ ಕುಮುದಿನಿ ರಾಜಪರಿವಾರದ ಓರ್ವ ಕುವರನನ್ನು, ಚಾತುರ್ಯದಿಂದ ಪಾರುಮಾಡಿ ಕರೆತರುತ್ತಾಳೆ. ಎಚ್ಚಮನಾಯಕನ ಹೋರಾಟದಲ್ಲಿ ಚಾಂದಖಾನ ಎಂಬುವನು ಸಹಾಯ ಮಾಡುತ್ತಾನೆ. ಕೊನೆಯ ಯುದ್ಧದಲ್ಲಿ ಜಗರಾಯನನ್ನು ಸೋಲಿಸಿ, ಬದುಕಿ ಉಳಿದಿದ್ದ ಆ ರಾಜಕುವರನನ್ನು ಪಟ್ಟಕ್ಕೆ ಕುಳ್ಳಿರಿಸಿ ಕೃತಕೃತ್ಯನಾಗುತ್ತಾನೆ. ಎಲ್ಲ ವಿಪತ್ತಿನ ಪ್ರಸಂಗಗಳಲ್ಲಿ ಋಷಿಯೊಬ್ಬ ಕಾಣಿಸಿಕೊಂಡು ಧೈರ್ಯ ತುಂಬುತ್ತಾನೆ.

ಮೊದಲಲ್ಲಿ ಬರುವ ಎಚ್ಚಮನಾಯಕ - ಚಾಂದಖಾನರ ಕಾದಾಟ, ಕುಮುದಿನಿಯ ಪ್ರಥಮ ದರ್ಶನ, ಅವರ ವಿವಾಹದ ಮೊದಲ ದಿನವೇ ಪತಿಯನ್ನು ಪ್ರಾಣಾಪಾಯದಿಂದ ರಕ್ಷಿಸಿದ್ದು, ಕುಮುದಿನಿಯು ಆಗಸರಾಕೆಯ ವೇಷ ಧರಿಸಿ, ರಾಜಪರಿವಾರವಿದ್ದ ಸೆರೆಮನೆಗೆ ಹೋಗಿಬರುತ್ತ, ಆ ವಂಶದ ಕುಡಿಯೊಂದನ್ನು ಪಾರು ಮಾಡಿದ್ದು, ಹಾದಿಯಲ್ಲಿ ದುರಗಪ್ಪನಾಯಕನ ಕೈಗೆ ಸಿಕ್ಕಿಬಿದ್ದರೂ ಅವನನ್ನು ಮಾತಿನಲ್ಲಿ ಕಟ್ಟಿಹಾಕಿದ್ದು, ಚಿನ್ನ ಓಬಲನು ಸಮಸ್ತ ರಾಜಪರಿವಾರದ ಸಂಹಾರಕ್ಕೆ ಕಾರಣನಾದದ್ದು, ಚಾಂದಖಾನನು ಜಗರಾಯನ ದರ್ಬಾರದಲ್ಲಿ ಕುಮುದಿನಿಯನ್ನು ಪಾರುಮಾಡಿ ಕರೆತಂದದ್ದು - ಇವು ಒಂದೊಂದೂ ಇಂದಿಗೂ ವಾಚಕರನ್ನು ಮನದಣಿಯೆ ರಂಜಿಸಬಲ್ಲವು.

ಇಲ್ಲಿಯ ಪಾತ್ರಸೃಷ್ಟಿಯೂ ಮನಸೆಳೆಯುವಂತಿದೆ, ಕಥಾನಾಯಕಿಯಾದ ಕುಮುದಿನಿಯು ಸಕಲ ಸದ್ಗುಣಗಳ ಖಣಿ ಎಂಬಂತೆ ಪಾತ್ರಚಿತ್ರಣವಿದೆ. ಧೈರ್ಯ, ಶೌರ್ಯಗಳಿಂದ ಕೂಡಿದ್ದರೂ ಸ್ತ್ರೀಸಹಜವಾದ ಲಜ್ಜೆ ವಿನಯಗಳನ್ನೂ ಹೊಂದಿದವಳಾಗಿ ಪಾತ್ರಕ್ಕೆ ಸಹಜತೆ ಮೂಡಿದೆ. ಚಾಂದಖಾನ ಮತ್ತು ದುರಗಪ್ಪನಾಯಕರ ವಿಶಿಷ್ಟ ಗುಣಪೂರಿತ ವ್ಯಕ್ತಿತ್ವ, ಇತ್ತ ಎಚ್ಚಮನಾಯಕನಲ್ಲಿ ಸ್ವಾಮಿನಿಷ್ಠತೆಯ ಪರಕಾಷ್ಠೆಯನ್ನು ಕಾಣುತ್ತೇವೆ. ಆ ಪಾತ್ರವೂ ಜೀವಂತಿಕೆಯಿಂದ ಕೂಡಿದ್ದಾಗುವಂತೆ ಅವರಲ್ಲಿ ಚಿತ್ತಚಾಂಚಲ್ಯವನ್ನು ತೋರ್ಪಡಿಸಿದ್ದಾರೆ, ಗಳಗನಾಥರು. ಒಟ್ಟಿನಲ್ಲಿ ಇದು ಅತ್ಯಂತ ಹೃದ್ಯವಾದ ಕಾದಂಬರಿ.

(ಈ) ರಜಪೂತರ ಹಿನ್ನೆಲೆಯ ಕಾದಂಬರಿಗಳು

ಮೊದಲಿಗೆ 'ಸತ್ವಸಾರ'ದ ಪರಿಶೀಲನೆ. ಮೇವಾಡದ ರಾಣಾ ಪ್ರತಾಪಸಿಂಹನ ಕಥಾನಕವುಳ್ಳ ಈ ಕೃತಿಗೆ ಟಾಡ್‌ನ Annals & Antiquities of Rajasthan ಎಂಬುದೂ, ಎರಡು ಬಂಗಾಲಿ ಕಾದಂಬರಿಗಳೂ (ಮರಾಠಿಗೆ ರೂಪಾಂತರಗೊಂಡವುಗಳು) ಆಕರ ಗ್ರಂಥಗಳಾಗಿವೆ. ಆ ಕಾರಣದಿಂದ ಇದೊಂದು ಸ್ವತಂತ್ರ ಕಾದಂಬರಿಯೆಂದೇ ಬಗೆಯತಕ್ಕುದು. ಪ್ರತಾಪಸಿಂಹನ ಕಥೆ ಸಾಕಷ್ಟು ಪರಿಚಿತ. ಅಕಬರ ಬಾದಶಹನೊಂದಿಗೆ ಸೆಣಸಿ ನಾನಾ ರೀತಿಯಿಂದ ಕಷ್ಟನಷ್ಟಗಳನ್ನು ಅನುಭವಿಸಿ ಕೊನೆಯಲ್ಲಿ ತನ್ನ ಒಂದೊಂದೇ ಕೋಟೆಗಳನ್ನು ಅಕಬರನಿಂದ ಮರಳಿ ಗೆದ್ದುಕೊಂಡ ವೀರನೀತ. ಚಿತ್ತೂರ ಕೋಟೆಯೊಂದನ್ನು ಮಾತ್ರ ಪಡೆಯಲಾಗಲಿಲ್ಲವೆಂಬ ಕೊರಗು ಅವನಲ್ಲಿ ಕೊನೆಯ ವರೆಗೆ ಉಳಿದಿತ್ತು. ವೀರ ಹಾಗೂ ಕರುಣ ರಸಗಳಿಂದ ಕೂಡಿದ ಈ ಕಾದಂಬರಿ ಅಂದಿನ ವಾಚಕರನ್ನು ಮನದಣಿಯೆ ರಂಜಿಸಿತು.

ಕಾದಂಬರಿಯಲ್ಲಿ ಅನೇಕ ಹೃದ್ಯವಾದ ಸನ್ನಿವೇಶಗಳಿವೆ. ಸ್ವತಂತ್ರ ವೃತ್ತಿಯ ಪ್ರತಾಪಸಿಂಹ, ಅಕಬರನ ಅನುಯಾಯಿಯಾಗಿದ್ದ ಮಾನಸಿಂಹ ಇಬ್ಬರೂ ಸಮಾನ ಯೋಗ್ಯತೆಯವರು. ಅವರಿಬ್ಬರ ಭೇಟಿ-ಮಾತುಕತೆಗಳ ಪ್ರಸಂಗ, ಅಣ್ಣ ಪ್ರತಾಪ ಸಿಂಹನೊಂದಿಗೆ ಜಗಳವಾಡಿ ಅಕಬರನನ್ನು ಕೂಡಿಕೊಂಡಿದ್ದ ಶಕ್ತಿಸಿಂಹನ ಆಮೇಲಿನ ಪಶ್ಚಾತ್ತಾಪ, ಪ್ರತಾಪಸಿಂಹನ ನಿರ್ಜನ ಪ್ರದೇಶದ ಅಲೆದಾಟದಲ್ಲಿ ಅವನ ಹೆಂಡತಿಯು ಮಕ್ಕಳಿಗಾಗಿ ಸಿದ್ಧಪಡಿಸಿದ ರೊಟ್ಟಿಯನ್ನು (ಅದೂ ಹುಲ್ಲಿನ ಬೀಜದಿಂದ ಮಾಡಿದ್ದು) ಅಡವಿಯ ಬೆಕ್ಕೊಂದು ತೆಗೆದುಕೊಂಡು ಓಡಿದುದು, ಅಕಬರನ ಮೋಸವೃತ್ತಿ,

ಕಾಮುಕತೆಗಳ ಚಿತ್ರಣ-ಇವೆಲ್ಲವನ್ನು ಗಳಗನಾಥರು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಹೆಚ್ಚಿನ ಪಾತ್ರಗಳು ಸ್ವಾಮಿನಿಷ್ಠೆಯಿಂದ ಪ್ರೇರಿತವಾದವುಗಳು. ಪ್ರತಾಪಸಿಂಹನದಂತೂ ಸರಿಯೇ, ವೃದ್ಧನಾದ ದೇವಿಸಿಂಗ, ಮಂತ್ರಿ ಭಾಮಾಶಹ, ಅಭಿಮನ್ಯು ಸ್ವರೂಪನಾದ ಚಂದನಕುಮಾರ, ಇವರುಗಳು ಮಾತ್ರವಲ್ಲ, ಪ್ರತಾಪಸಿಂಹನ 'ಚಿತ್ತಕ'ವೆಂಬ ಕುದುರೆಯೂ ಸ್ವಾಮಿನಿಷ್ಠೆಯ ಪರಾಕಾಷ್ಠೆಯನ್ನು ಮೆರೆದಿದೆ.

ವಿಮರ್ಶಕರ ಟೀಕೆಗೊಳಗಾದ ಎರಡು ಪಾತ್ರಗಳು ಇಲ್ಲಿವೆ. ಅವರೇ ಸಾತ್ವಿಕೆ ಮತ್ತು ತಪೋಧನ-ಎಂಬುವರು. ಸತ್ವಶಾಲಿತ್ವವು ತ್ಯಾಗಮೂಲದ ಪ್ರತಾಪಸಿಂಹನಲ್ಲಿ ಇರಬೇಕು, ಅವು ವರ್ಧಿಸಬೇಕು - ಎಂಬ ಕಾರಣದಿಂದ ಅವರನ್ನು ಸೃಷ್ಟಿಸಿರುವುದಾಗಿ ಗಳಗನಾಥರು ಸಮರ್ಥಿಸಿಕೊಂಡಿದ್ದಾರೆ. ಅದೇನಿದ್ದರೂ ಆ ಮೂಲಕ ಇಂದಿನ ಬರಹದಲ್ಲಿ ಕಂಡುಬರುವ ಪ್ರತಿಮಾ ವಿಧಾನವನ್ನು ತಮಗರಿವಿಲ್ಲದೆ ಗಳಗನಾಥರು ತಂದಿದ್ದಾರೆ.

ಈ ವಿಷಯದ ದ್ವಿತೀಯ ಕಾದಂಬರಿ ಎಂದು 'ತಿಲೋತ್ತಮೆ'ಯನ್ನು ಗಣಿಸಬೇಕು. ದಾಮೋದರ ಮುಖ್ಯೋಪಾಧ್ಯಾಯರ 'ನವಾಬ ನಂದಿನಿ' ಎಂಬ ಬಂಗಾಲೀ ಕಾದಂಬರಿಯ ರೂಪಾಂತರವಿದು. ಮಾನಸಿಂಹನ ಮಗನಾದ ಜಗತ್ ಸಿಂಗನು ತಿಲೋತ್ತಮೆಯೆಂಬವಳನ್ನು ಮೋಹಿಸಿ ಮದುವೆಯಾದಾಗ ಮಾನಸಿಂಹನು ಅವನನ್ನು ಸೆರೆಯಲ್ಲಿರಿಸುತ್ತಾನೆ. ಕೊನೆಗೆ ಅವಳ ಸದ್ಗುಣಗಳಿಗೆ ಲುಬ್ಧನಾಗಿ ಮಗನನ್ನು ಬಿಡುಗಡೆ ಮಾಡುತ್ತಾನೆ. ಈ ಮಧ್ಯೆ ಆಯೇಷೆ ಎನ್ನುವವಳು ಜಗತ್ಸಿಂಹನನ್ನು ಪ್ರೇಮಿಸುವವಳು; ಅವನ ಮದುವೆಯಾಗಿದೆ ಎಂಬುದನ್ನು ತಿಳಿದೂ. ಇಷ್ಟೇ ಅಲ್ಲ ತನ್ನನ್ನು ಪ್ರೀತಿಸಿದ ಉಸ್ಮಾನ ಎಂಬುವನನ್ನು ತ್ಯಜಿಸಿ, ಕೊನೆವರೆಗೆ ಕುಮಾರಿಯಾಗಿಯೇ ಉಳಿಯುತ್ತಾಳೆ. ಆದರ್ಶ ಪ್ರೇಮವೆನ್ನುವುದು ಅತಿಯಾಯಿತಲ್ಲವೆ? ಅಂತೂ ಈ ಕಾದಂಬರಿ ಯಶಸ್ಸನ್ನು ಪಡೆಯಲಿಲ್ಲ.

'ಸಂಸಾರಸುಖ' ಕಾದಂಬರಿಗಾದರೂ ಬಂಗಾಲಿ ಕೃತಿಯೇ ಮೂಲವಾಗಿದೆ. ಇದು ಅಕಬರ ಬಾದಶಹನ ಸಂಸಾರದ ಕಥಾನಕ. ವೃದ್ಧ ಅಕಬರನು ತನ್ನ ಮೊಮ್ಮಗನಾದ ಖುಸ್ರುವಿಗೆ ಪಟ್ಟ ಕಟ್ಟಬೇಕೆಂದು ಯೋಚಿಸಿದಾಗ, ಮಗ ಸಲೀಮನು ಬಂಡೇಳುವನು. ಖುಸ್ರುವಾಗಲೀ ಸಲೀಮನಾಗಲೀ- ಇಬ್ಬರೂ ದುರ್ವ್ಯಸನಿಗಳೇ. ಇವರ ಮಧ್ಯೆ ಹೆಂಡತಿಯೂ ತಾಯಿಯೂ ಆಗಿದ್ದ ಜೋಧಬಾಯಿಯ ಮಾನಸಿಕ ತೊಳಲಾಟ ಹೇಗಿರಬೇಡ! ಕಾದಂಬರಿಯಲ್ಲಿ ಅದು ಬಹಳ ಸೊಗಸಾಗಿ

ಮೂಡಿಬಂದಿದೆ. ಗಳಗನಾಥರು ಕಾದಂಬರಿಯಲ್ಲಿ ಸ್ವಕಲ್ಪಿತವಾದ ಇನ್ನೂ ಹಲವು ಸನ್ನಿವೇಶಗಳನ್ನು ನಿರ್ಮಿಸಿದ್ದಾರೆ.

ಎಂದಿನಂತೆ ಗಳಗನಾಥರ ಉಪದೇಶದ ಮಾತುಗಳಿವೆ; ''ಪ್ರಿಯ ವಾಚಕರೆ, ನೋಡಿರಿ. ರಾಜಸಂಸಾರದ ಸುಖವು ಹೇಗಿರುತ್ತದೆ! ರಾಜಸಂಸಾರದಲ್ಲಿ ಇಂಥ ಕಲಹ, ಕೊಲೆಗಳು, ಮರೆಮೋಸಗಳು ದೊಡ್ಡ ಪ್ರಮಾಣದಲ್ಲಿ ಕಂಡುಬಂದರೆ, ಬಡವರ ಸಂಸಾರದಲ್ಲಿ ಅವು ಸಣ್ಣ ಪ್ರಮಾಣದಲ್ಲಿ ಇದ್ದೇ ಇರುತ್ತವೆ. ಆದ್ದರಿಂದ ಧರ್ಮಕ್ಕೂ ಪಾಪಪುಣ್ಯಗಳಿಗೂ ದೇವರಿಗೂ ಲೋಕಕ್ಕೂ ಬಹಳವೇಕೆ, ತನ್ನ ನೆರಳಿಗೂ ಅಂಜಿ ತಾನು ಸಂಸಾರ ಮಾಡಬೇಕು.''

ರಜಪೂತರು ಹಾಗೂ ಔರಂಗಜೇಬ ಇವರ ಸುತ್ತ ಹೆಣೆದ ಕಾದಂಬರಿಗಳೆಂದು 'ಧಾರ್ಮಿಕತೇಜ', 'ರಾಣಾ ರಾಜಸಿಂಹ' ಮತ್ತು 'ಕ್ಷಾತ್ರತೇಜ'-ಇವು ಮೂರನ್ನು ಹೆಸರಿಸಬೇಕು. ವಿಶೇಷವೆಂದರೆ 'ಕ್ಷಾತ್ರತೇಜ' ಹಾಗೂ 'ರಾಣಾ ರಾಜಸಿಂಹ' - ಇವುಗಳ ಕಥಾವಸ್ತು ಒಂದೇ ಆಗಿದೆ. ಮೂಲ ಕೃತಿಗಳು ಮಾತ್ರ ಬೇರೆ ಬೇರೆ. ಒಂದಕ್ಕೆ ಆಪಟೆಯವರ 'ರೂಪನಗರಚೀಕನ್ಯಾ' ಆಧಾರವಾಗಿದ್ದರೆ ಇನ್ನೊಂದಕ್ಕೆ ಬಂಕಿಮಚಂದ್ರರು ಕಥಾಸಾಮಗ್ರಿಯನ್ನು ಒದಗಿಸಿದ್ದಾರೆ. ರೂಪನಗರದ ರಾಜಕುಮಾರಿಯಾದ ರೂಪಮತಿಯನ್ನು ಔರಂಗಜೇಬನು ಬಯಸಿ ಆ ನಗರವನ್ನು ಮುತ್ತಿದಾಗ ಆಕೆ ಉದೇಪುರದ ರಾಜಸಿಂಹನ ಪ್ರೇಮಯಾಚನೆ ಮಾಡುತ್ತಾಳೆ. ದಿಲ್ಲಿಯ ಸೈನ್ಯವನ್ನು ಹೊಡೆದೋಡಿಸಿ ರಾಜಸಿಂಹನು ಮದುವೆಯಾದ ಮೇಲೆಯೂ ಔರಂಗಜೇಬನು ಅವಳ ಆಸೆಯನ್ನು ಬಿಡದೆ ದೊಡ್ಡ ಸೈನ್ಯದೊಡನೆ ಸ್ವತಃ ಬಂದರೂ ಗೆಲ್ಲಲಾಗುವುದಿಲ್ಲ.

ಗಳಗನಾಥರು ೧೪ ವರ್ಷಗಳ ಅಂತರವಿರಿಸಿ ಬರೆದಿರುವುದಾದರೂ, ಹಿಂದೆ ಹೇಳಿದ ಕಥಾವಸ್ತುವನ್ನೇ ಆಯ್ದುಕೊಂಡದ್ದಕ್ಕೆ ಕೊಟ್ಟ ವಿವರಣೆ ಇಂತಿದೆ: 'ಒಂದೇ ಪ್ರಸಂಗವಿದ್ದರೂ ತೀರ ಹೊಸದಾಗಿರುವಂತೆ ಬೇರೆ ಬೇರೆ ಕಾದಂಬರಿಕಾರರು ಹೇಗೆ ಬರೆಯುತ್ತಾರೆಂಬುದಕ್ಕಾಗಿಯೇ ಈ ಕಾದಂಬರಿಯನ್ನು (ರಾಣಾ ರಾಜಸಿಂಹ) ಬರೆದಿರುತ್ತದೆ. ಎರಡೂ ಒಂದಕ್ಕೊಂದು ಸಂಬಂಧವಿಲ್ಲದಾಗಿ ತೀರ ಹೊಸ ಕಾದಂಬರಿಗಳಂತೆ ವಾಚಕರ ಚಿತ್ತವನ್ನು ಆಕರ್ಷಿಸುತ್ತ ಉದಾತ್ತ ನೀತಿ-ತತ್ವಗಳನ್ನು ಪ್ರಕಾಶಗೊಳಿಸುತ್ತಿರುವವು'.

ಇತ್ತ 'ಧಾರ್ಮಿಕ ತೇಜ' ಕಾದಂಬರಿಯು ಮಹೋಬದ ಛತ್ರಸಾಲನ ಕಥಾನಕವಾಗಿದೆ. ಔರಂಗಜೇಬನ ವಿರುದ್ಧ ಹೋರಾಡಿದ ರಜಪೂತ ವೀರರಲ್ಲಿ ಈತ ಕೊನೆಗಾಲದವನೆನ್ನಬಹುದು. ಅವನ ಸ್ವಾತಂತ್ರ್ಯದಾಹವು ತಂದೆ ಚಂಪತರಾಯನಿಂದ ಬಂದ ಬಳುವಳಿ ಎನ್ನಬೇಕು. ಇದರ ಆಶಯವು ಕ್ಷಾತ್ರತೇಜಸ್ಸಿನ ವೈಭವೀಕರಣವಾಗಿದ್ದರೂ, ಗಳಗನಾಥರು 'ಧಾರ್ಮಿಕ' ಎನ್ನುವ ಎಷ್ಟು ಮಾತ್ರಕ್ಕೂ ಅನ್ವರ್ಥಕವಾಗದ ವಿಶೇಷಣವನ್ನು ಬಳಸಿದ್ದಾರೆ.

(ಉ) ಮರಾಠರ ಚರಿತ್ರೆಯ ಕಾದಂಬರಿಗಳು

ಈ ಮಾಲಿಕೆಯಲ್ಲಿ ಎಂಟು ಕಾದಂಬರಿಗಳಿವೆ. ಶಿವಾಜಿಯ ಏರಿಕೆಯ ಕಾಲದಿಂದ ಹಿಡಿದು ಪಾಣಿಪತ ಯುದ್ಧದ (೧೭೬೧) ವರೆಗಿನ ಚರಿತ್ರೆಯನ್ನು ಕಾಣಬಹುದು. ಇವುಗಳಲ್ಲಿ ಐದು ಕೃತಿಗಳು ಹರಿ ನಾರಾಯಣ ಆಪ್ಟೆಯವರಿಂದ ಬಂದವುಗಳು. ಅವರ 'ಗಡ ಆಲಾ ಪಣ ಸಿಂಹ ಗೇಲಾ' ಅತಿ ಪ್ರಸಿದ್ಧವಾದ ಕೃತಿ. ಗಳಗನಾಥರ ಅನುವಾದ ಕಾರ್ಯಕ್ಕೆ ಅದುವೆ ಮೊದಲ ಕೃತಿಯಾಗಿ ದೊರೆತದ್ದು ಒಳ್ಳೆಯದಾಯಿತು. ಶಿವಾಜಿಯ ಬಲಗೈ ಬಂಟನಂತಿದ್ದ ತಾನಾಜಿಯು ಕೊಂಡಾಣಾ ದುರ್ಗವನ್ನು ವಶಪಡಿಸಿಕೊಂಡ ಘಟನೆ ಇಲ್ಲಿದೆ. ಮುಖ್ಯ ಕಥಾವಸ್ತುವಿಗೆ ಇನ್ನೊಂದನ್ನು ಸೇರಿಸುವ ಕ್ರಮವೂ ಇದರಿಂದಲೇ ಆರಂಭವಾದದ್ದು. ಪ್ರಕೃತ ಆ ಕೋಟೆಯನ್ನು ಹಿಡಿದುಕೊಂಡಿದ್ದ ಉದಯಭಾನುವು ತರುಣ ವಿಧವೆ ಕಮಲಕುಮಾರಿ ಎಂಬುವಳನ್ನು ಮದುವೆಯಾಗಬಯಸಿದ್ದರ ಘಟನಾವಳಿಯೂ ಇದರಲ್ಲಿ ತಳಕುಗೊಂಡಿದೆ. ಕಮಲಕುಮಾರಿಯ ಸ್ನೇಹಿತೆ ದೇವಲದೇವಿ ಹಾಗೂ ಅವಳ ಪತಿ ಜಗತ್‌ಸಿಂಹ ಇವರು ಪೋಷಕ ಪಾತ್ರಗಳಾಗಿ ಬಂದಿದ್ದಾರೆ. ಮೂಲದಲ್ಲಿ ಕೋಟೆಯನ್ನು ಶೂರತನದಿಂದ ಗೆದ್ದ ತಾನಾಜಿಯು ಕಥಾನಾಯಕ. ಕಮಲಕುಮಾರಿಯು ಅದರಲ್ಲಿ ಕಾಣಿಸಿಕೊಂಡಿಲ್ಲವೆಂತಲ್ಲ. ಗಳಗನಾಥರ ಕೃತಿಯಲ್ಲಿ ಅವಳ ಪಾತಿವ್ರತ್ಯ, ಧೈರ್ಯ ಮುಂತಾದ ಸದ್ಗುಣಗಳಿಗೆ ಹೆಚ್ಚಿನ ಮಹತ್ವ ಬಂದು, ಅವಳ ಹೆಸರೇ ಕಾದಂಬರಿಯ ಶೀರ್ಷಿಕೆಯಾಯಿತು. ಕಾದಂಬರಿಯಲ್ಲಿ ಶಿವಾಜಿಯ ಉದಾರಭಾವ, ಸೇಲಾರಮಾಮಾ ಮುಂತಾದ ಮಾವಳರ ಮುಗ್ಧತೆ ಸ್ಫುಟವಾಗಿ ವ್ಯಕ್ತಗೊಂಡಿದೆ. ಮೇಲೆ ಹೇಳಿದ ಎರಡು ಕಥಾನಕಗಳು ಒಂದಕ್ಕೊಂದು ಪೋಷಕವಾಗುತ್ತ ಸಾಗಿವೆ. ಐತಿಹಾಸಿಕ ಕಾದಂಬರಿ ರಚನೆಯಲ್ಲಿ ಗಳಗನಾಥರ ಪ್ರಥಮ ಪ್ರಯತ್ನವಿದು. ಅದರಲ್ಲಿ ಅವರ ಯಶಸ್ವಿತೆಯ ಚಿಹ್ನೆಗಳು ಇಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ.

ಗಳಗನಾಥರು ಅನಂತರ ಎತ್ತಿಕೊಂಡ ಆಪ್ಟೆ ಕಾದಂಬರಿಯ ಹೆಸರು 'ಉಷಃಕಾಲ'. ಕನ್ನಡದಲ್ಲಿ ಅದಕ್ಕೆ ಅವರು 'ಈಶ್ವರೀ ಸೂತ್ರ'ವೆಂಬ ಶೀರ್ಷಿಕೆಯನ್ನಿತ್ತು, ಆ ಬದಲಾವಣೆಯನ್ನು ಸಮರ್ಥಿಸಿಕೊಂಡಿದ್ದಾರೆ.

''ತುಂಟ ಮರಿ-ಟಗರಿನಂತೆ ಇದ್ದ ಶಿವಾಜಿಯು ಕುರಿಹಿಂಡನ್ನು ಹೋಲುವ ಮಾವಳರ ಸಹಾಯದಿಂದ ಸ್ವರಾಜ್ಯವನ್ನು ಸ್ಥಾಪಿಸಿ, ತಾನೂ ತನ್ನ ಪರಿವಾರವೂ ಸತ್ವಾತಿಶಯದಿಂದ ಸಿಂಹರೂಪವನ್ನು ಹೊಂದಿದ್ದು ಈಶ್ವರೀ ಸೂತ್ರದಿಂದಲೊ ಕಾರ್ಯಕಾರಣ ಭಾವದಿಂದಲೊ ಎಂಬುದನ್ನು ವಾಚಕರೇ ನಿರ್ಧರಿಸತಕ್ಕದ್ದು... ಆಗ ಮುಸಲ್ಮಾನರು ಬಲಗರ್ವಿತರಾಗಿ ಅಹಂಕಾರದಿಂದ ಅನ್ಯರನ್ನು ಬಲಾತ್ಕರಿಸಿ ವಿಷಯ ಸುಖಗಳನ್ನು ಸೇವಿಸಿ ಗಟ್ಟಿಯಾಗಿ ಬಾಯಿ ಚಪ್ಪರಿಸುತ್ತಿದ್ದರೆ ಹಿಂದೂ ಜನರು ಹೇಡಿಗಳಾಗಿ ವಿಷಯ ಸುಖವನ್ನು ಮುಸುಕಿನಲ್ಲಿ ಭೋಗಿಸಿ ಮೆಲ್ಲನೆ ಬಾಯಿ ಒರೆಸಿಕೊಳ್ಳುತ್ತಿದ್ದರು. ಇಂತ ಧರ್ಮಗ್ಲಾನಿಯ ಕಾಲದಲ್ಲಿ ಈಶ್ವರೀಸೂತ್ರದ ಚಾಲಕತ್ವದ ಅಧಿಕಾರವು ಗುರುಕೃಪೆಯಿಂದ ಶಿವಾಜಿಯಂತಹ ಪುಣ್ಯಪುರುಷನ ಕೈಸೇರಿದ್ದರಿಂದ ಆತನು ಅವತಾರಿಕನೆಂದು ಜನರಿಂದ ಹೊಗಳಿಸಿಕೊಂಡಿದ್ದರಲ್ಲಿ ಆಶ್ಚರ್ಯವೇನು?''

ಈ ಕಾದಂಬರಿಯಲ್ಲಿ ಶಿವಾಜಿಯು ತೋರಣಗಡ ಕೋಟೆಯನ್ನು ವಶಪಡಿಸಿಕೊಂಡ ವಿಷಯ ಮುಖ್ಯವಾಗಿ ಬಂದಿದೆ. ಶಿವಾಜಿಯ ಅನುಯಾಯಿಗಳ ಗುಪ್ತ ಚಟುವಟಿಕೆಗಳು; ದೇವಾಲಯದಲ್ಲಿ ಸರಿದಾಡುವ ಮೂರುತಿಯ ಮೂರ್ತಿ; ಅಲ್ಲಿಯ ಶ್ರೀಧರ ಸ್ವಾಮಿಗಳನ್ನು ವೈರಿಗಳು ಸೆರೆ ಹಿಡಿದಾಗ, ಶಿವಾಜಿಯು ಅವರನ್ನು ಪಾರು ಮಾಡುವಲ್ಲಿ ತೋರಿದ ಚಾತುರ್ಯ, ನಾನಾಸಾಹೇಬ ಎಂಬವನ ಸ್ವಾಮಿನಿಷ್ಠೆ, ಚಂದ್ರಾವತಿ, ರಂಭಾವತಿ, ಮೆಹರಜಾನ್ ಮುಂತಾದ ಮಹಿಳಾಮಣಿಗಳ ಆದರ್ಶ, ಇವೆಲ್ಲವನ್ನು ಮೀರಿ ಎದ್ದುಕಾಣುವ ಸಮರ್ಥ ರಾಮದಾಸರ ಕೃಪಾವಿಶೇಷ, ಇವುಗಳಿಂದ ಕಾದಂಬರಿ ಸತ್ವಪೂರ್ಣವಾಗಿದೆ.

ಶಿವಾಜಿಯ ಜೀವನದಲ್ಲಿಯ ಆಮೇಲಿನ ಮಹತ್ವದ ಘಟನೆಯಾದ ಅಫಝುಲಖಾನನ ವಧೆಯ ಪ್ರಸಂಗವನ್ನು, ಗಳಗನಾಥರು ಆಪ್ಟೆಯವರ 'ಸೂರ್ಯೋದಯ' ಕಾದಂಬರಿಯಿಂದ ಎತ್ತಿಕೊಂಡು 'ಮರಾಠರ ಅಭ್ಯುದಯ' ಎಂಬ ಹೆಸರಿನ ಕಾದಂಬರಿಯನ್ನು ರಚಿಸಿದ್ದಾರೆ. ಮತ್ತೆ ಇಲ್ಲಿ ಬಂದಿರುವ ಉಪಕಥಾವಸ್ತು ಚಂದ್ರರಾವ ಮೋರೆ ಹಾಗೂ ಆತನ ಮಗಳು ತಾರಾಗೆ

ಸಂಬಂಧಿಸಿದ್ದಾಗಿದೆ. ಆಕೆ ಶಿವಾಜಿಯ ಕೊಲೆಗೆ ಯತ್ನಿಸಿದವಳು. ಶಿವಾಜಿಯು ಅವಳನ್ನು ಕ್ಷಮಿಸಿದ್ದನೆಂದು ಬಣ್ಣಿಸಿ ಗಳಗನಾಥರು ಅವನ ಉದಾತ್ತತೆ ಒಡೆದು ತೋರುವಂತೆ ಮಾಡಿದ್ದಾರೆ.

'ಸ್ವರಾಜ್ಯ ಸುಗಂಧ'ವು ಅವರ ಕೊನೆಗಾಲದ ಕೃತಿಯಾದರೂ ಚಾರಿತ್ರಿಕ ಕಾಲಮಾನದ ದೃಷ್ಟಿಯಿಂದ ಈಗಲೇ ಪ್ರಸ್ತಾಪಿಸಬೇಕಾಗುವುದು. ಇದರ ಆಕರ ಅಥವಾ ಮೂಲವನ್ನು ಗಳಗನಾಥರು ಹೇಳಿಲ್ಲ. ಒಂದೆರಡಕ್ಕಿಂತ ಹೆಚ್ಚಿನ ಆಧಾರ ಗ್ರಂಥಗಳಿದ್ದಿರುವುದರಿಂದ ಹಾಗೆ ಹೇಳಿರಲಿಕ್ಕಿಲ್ಲ. ಆ ಮಟ್ಟಿಗೆ ಇದನ್ನು ಅವರ ಸ್ವತಂತ್ರ ಕೃತಿಯೆಂದು ಪರಿಭಾವಿಸಬಹುದು. ಇದರಲ್ಲಿ ಬರುವ ಶಿವಾಜಿ, ಆಬಾಜಿಸೋನದೇವ, ವೆಂಕಾಜಿ ವಾಘ, ನೇತಾಜಿ ಪಾಲಕರ - ಇವರು ಚಾರಿತ್ರಿಕ ವ್ಯಕ್ತಿಗಳೇ. ಶಿವಾಜಿಯು ಕಲ್ಯಾಣ ಕೋಟೆ, ರಾಜಮಾಚಿ ಕೋಟೆಗಳನ್ನು ವಶಪಡಿಸಿಕೊಂಡಿದ್ದು ಐತಿಹಾಸಿಕ ಸತ್ಯವೇ. ಉಳಿದದ್ದೆಲ್ಲ ಅವರ ಸೃಷ್ಟಿ. ಬಾಲಕ ನೇತಾಜಿಯು ದುಷ್ಟ ಮುಸಲ್ಮಾನರನ್ನು ಸದೆಬಡೆಯುವ ಆಟದಲ್ಲಿ ತೊಡಗಿದ ಸನ್ನಿವೇಶದಿಂದ ಕಥೆ ಪ್ರಾರಂಭವಾಗುತ್ತದೆ. ಮುಂದೆ ಅವನು ಮದುವೆಯಾಗಲಿಚ್ಛಿಸಿದ ಕಾಶಿಯನ್ನು ವೆಂಕಾಜಿ ವಾಘನು ಅಪಹರಿಸುತ್ತಾನೆ. ಆಕೆಯೂ ಎಂಥ ಪ್ರಸಂಗದಲ್ಲಿಯೂ ಎದೆಗುಂದದ ವೀರರಮಣಿ. ವೆಂಕಾಜಿಯು ಗೋಸಾವಿಗಳ ಸಮಾಗಮದಿಂದ ಪಶ್ಚಾತ್ತಾಪ ಹೊಂದಿ, ಛತ್ರಪತಿ ಶಿವಾಜಿಗೆ ಆಸರೆಯಾಗಿ ನಿಲ್ಲುವನು. ಗಳಗನಾಥರು ಇದನ್ನು 'ರಹಸ್ಯಪೂರ್ಣ ಬೋಧಪ್ರದ ಕಾದಂಬರಿ' ಎಂದು ಕರೆದಿರುವರು. ರಹಸ್ಯವೇನೂ ಇದರಲ್ಲಿಲ್ಲ; ಬೋಧೆ ಮಾತ್ರ ಯಥೇಚ್ಛವಾಗಿ - ಗೋಸಾಮಿ ಮತ್ತು ಸಮರ್ಥ ರಾಮದಾಸರ ಮೂಲಕ ಕಾಣಿಸಿಕೊಂಡಿದೆ.

ಇನ್ನೀಗ 'ಛತ್ರಪತಿ' ಕಾದಂಬರಿ. ಆಪಟೆಯವರ ಮೂಲ ಕೃತಿಯ ಹೆಸರು 'ಸೂರ್ಯಗ್ರಹಣ' ಎಂದಿದೆ. ಶೀರ್ಷಿಕೆಗೆ ಅನುಗುಣವಾಗಿ ಶಿವಾಜಿಯ ಏಳ್ಗೆಗೆ ಗ್ರಹಣ ಹಿಡಿದಂತೆಯೇ ಆಗಿತ್ತು. ಅವನು ತನ್ನ ಒಂದೊಂದೇ ಕೋಟೆಗಳನ್ನು ಕಳೆದುಕೊಂಡು, ಔರಂಗಜೇಬನ ಆಗ್ರಾ ದರಬಾರದಲ್ಲಿ ಸೆರೆಯಾಳಾಗುವನು. ಗಳಗನಾಥರು ಮುಂದಿನ ಕಥಾನಕವನ್ನು ಇನ್ನಷ್ಟು ಬೆಳೆಸಿ, ಅವನು ಮರಳಿ ಬಂದ ಮೇಲೆ ತನ್ನ ಕೋಟೆಗಳನ್ನು ಮರಳಿ ಗೆದ್ದುಕೊಂಡು ಪಟ್ಟಾಭಿಷಿಕ್ತನಾಗುವನು. ಆದಕಾರಣ ಅವರು ಕೊಟ್ಟ ಛತ್ರಪತಿ ಎಂಬ ಶೀರ್ಷಿಕೆ ಕನ್ನಡ ಕೃತಿಗೆ ಅನ್ವರ್ಥಕವೆ. ಕಾದಂಬರಿ ರೋಚಕವಾದ ಸನ್ನಿವೇಶಗಳಿಂದ ಕೂಡಿದ್ದು ಆ ಕಾಲದಲ್ಲಿ ವಿಶೇಷ ಜನಪ್ರಿಯತೆಯನ್ನು ಗಳಿಸಿತ್ತು.

ಗಳಗನಾಥರ 'ಗೃಹಕಲಹ' ಮತ್ತು 'ಶಿವಪ್ರಭುವಿನ ಪುಣ್ಯ' ಈ ಎರಡು ಕಾದಂಬರಿಗಳು ಶಿವಾಜಿಯ ಮರಣಪೂರ್ವ ಹಾಗೂ ಮರಣೋತ್ತರದಲ್ಲಿ ನಡೆದ ಉತ್ತರಾಧಿಕಾರತ್ವದ ಜಗಳವನ್ನು ಚಿತ್ರಿಸುತ್ತವೆ. 'ಗೃಹಕಲಹ'ವು ಲ.ನಾ. ಜೋಶಿ ವಿರಚಿತ 'ಅಸ್ತೋದಯ'ದ ರೂಪಾಂತರ. ಇದರಲ್ಲಿ ಶಿವಾಜಿಯ ಜೊತೆಗೆ ಅವನ ಹೆಂಡತಿ ಸಾಯಿರಾಬಾಯಿ, ಮಕ್ಕಳಾದ ಸಂಭಾಜಿ, ರಾಜಾರಾಮ, ಇವರುಗಳಲ್ಲಿ ನಡೆದ ಘರ್ಷಣೆ, ಒಂದು ರೀತಿಯಲ್ಲಿ ಗೃಹಕಲಹವೇ ಆಗಿತ್ತು. ಅದೆಲ್ಲ ಮುಗಿದು ರಾಜಾರಾಮನು ಪಟ್ಟವೇರುವಲ್ಲಿ ಮರಾಠರು ಶಿವಾಜಿಯ ಪುಣ್ಯದ ಪ್ರಭಾವವನ್ನು ಕಂಡದ್ದು ಯಥೋಚಿತವಾಗಿದೆ. ಈ ಎರಡನೆಯ ಎಂದರೆ 'ಶಿವಪ್ರಭುವಿನ ಪುಣ್ಯ' ಕಾದಂಬರಿಗೆ ಆಪ್ಟೆಯವರೇ ಮೂಲವನ್ನು ಒದಗಿಸಿದ್ದಾರೆ. ('ಕೇವಲ ಸ್ವರಾಜ್ಯ ಸಾಠಿ'). ಈ ಮೂಲ ಕಾದಂಬರಿಯು ಮುನ್ನಿನ 'ಉಷಃಕಾಲ'ದಷ್ಟೇ ಜನಪ್ರಿಯವಾಗಿದ್ದಿತು. ತಂದೆಯ ಮರಣಾನಂತರ ಸಂಭಾಜಿಯು ಪಟ್ಟವೇರಿದನಷ್ಟೆ. ಅವನು ಔರಂಗಜೇಬನಿಂದ ಸಾಕಷ್ಟು ಕಿರುಕುಳವನ್ನು ಅನುಭವಿಸಬೇಕಾಗಿ ಬಂದಿತು. ಆ ಮುಂದೆ ಕರ್ನಾಟಕದಲ್ಲಿ, ಜಿಂಜಿಯಲ್ಲಿ ಆಸರೆ ಹೊಂದಿ ಸಾತಾರಾದಲ್ಲಿ ಮರಳಿ ಮರಾಠಾ ಸತ್ತೆಯನ್ನು ನೆಲೆಗೊಳಿಸಿದನು. ಆದಾಗ್ಯೂ ಔರಂಗಜೇಬನು ಅವನನ್ನು ಸೆರೆಹಿಡಿದು ಕೊಲ್ಲಿಸಿದುದನ್ನು ಮನಕರಗುವಂತೆ ಈ ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ಮುಂದೆ ರಾಜಾರಾಮನೂ ಹಾಗೂ ವಿಪತ್ತಿನ ಕಾಲದಲ್ಲಿ ಮರಾಠ ಸರದಾರರೂ ಮತ್ತೆ ಒಂದುಗೂಡಿದರು.

ಇತಿಹಾಸದ ಅಂಶ ಏನೇ ಇರಲಿ, ವೀರ, ಕ್ರೌರ್ಯ ಕರುಣಾರಸಗಳ ಪೋಷಣೆಯ ಹಲವಾರು ಸನ್ನಿವೇಶಗಳಿವೆ. ಕಾಮ ಕ್ರೋಧಾದಿ ಷಡ್ರಿಪುಗಳಿಂದ ಕೂಡಿದ ಪಾತ್ರಗಳಿವೆ. ಉದಾ. ಸಂಭಾಜಿ ಅನುಭವಿಸಿದ ಚಿತ್ರಹಿಂಸೆ, ಸೊಸೆ ಏಸೂಬಾಯಿಯ ಸಾಹಸವೃತ್ತಿ, ಪುಲ್ಹಾದಪಂತ, ಖಂಡೋಜ ಇವರ ದೇಶಭಕ್ತಿ; ಜೊತೆಗೆ ಸೂರ್ಯಾಜಿಯ ಸ್ವಾಮಿದ್ರೋಹ, ಗಣೇಶ ಶಿರ್ಕೆಯ ಸೇಡಿನ ಪ್ರವೃತ್ತಿ, ರಾಧಾಬಾಯಿಯ ಕಾಮುಕತೆ, ತಾರಾಬಾಯಿಯ ಆಸೂಯೆ - ಇವೇ ಮೊದಲಾದ ಹೃದ್ಯ ಸನ್ನಿವೇಶಗಳಿಂದ 'ಶಿವಪ್ರಭುವಿನ ಪುಣ್ಯ' ಕಾದಂಬರಿಯು ಗಳಗನಾಥರ ಮೇಲ್ಮಟ್ಟದ ಕೃತಿಗಳಲ್ಲಿ ಒಂದಾಗಿದೆ.

'ಕುರುಕ್ಷೇತ್ರ' ಕಾದಂಬರಿಯ ಕಥಾವಸ್ತು - ಎಂದರೆ ಪೇಶ್ವೆಯವರು ಉತ್ತರದ ಪಾನಿಪತ್ತದಲ್ಲಿ ಅಬ್ದಾಲಿ ಶಹಾನಿಗೆ ಸೋತದ್ದು. ಯಾವ ಕಾಲಕ್ಕೂ ಕರುಳನ್ನು

ಮಿಡಿಯಬಲ್ಲುದು. ಮೂಲ ಮರಾಠಿ ಲೇಖಕರಾದ ಲ.ನಾ. ಜೋಶಿಯವರು ಈ ಘಟನೆಯನ್ನು ತಮ್ಮ ಪ್ರಸಿದ್ಧ ಕಾದಂಬರಿಯಾದ 'ಪಾಣಿಪತಚೇ ಮೋಹಿಮ'ದಲ್ಲಿ ಭಾವಪೂರ್ಣವಾಗಿ ಚಿತ್ರಿಸಿದ್ದಾರೆ. ಗಳಗನಾಥರು ತಮ್ಮ ರೋಚಕ ಶೈಲಿಯಿಂದ ಅದಕ್ಕೆ ಇನ್ನಷ್ಟು ಮೆರುಗನ್ನು ತಂದುಕೊಟ್ಟಿದ್ದಾರೆ. ಪಾಣಿಪತದ ಯುದ್ಧದಲ್ಲಿ ಲಕ್ಷಾಂತರ ಮರಾಠಿಗರು ಸಾವಿಗೀಡಾದರು. ಅದರ ಭೀಕರ ಪರಿಣಾಮವು ಮಹಾರಾಷ್ಟ್ರದಾದ್ಯಂತ ಕಾಣಿಸಿಕೊಂಡಿತು. 'ಈ ಘೋರ ಪ್ರಸಂಗದಿಂದ ಒಬ್ಬಳಾದರೂ ವಿಧವೆಯಾಗದಿದ್ದ ನಾಲ್ಕಾರು ಗುಡಿಸಲುಗಳ ಸೊಟ್ಟ ಹಳ್ಳಿಯನ್ನೂ ಸಹ ಮಹಾರಾಷ್ಟ್ರದಲ್ಲಿ ಕಾಣುವ ಹಾಗಿದ್ದಿಲ್ಲ' ಎಂದು ಗಳಗನಾಥರು ತಮ್ಮ ಪ್ರಸ್ತಾವನೆಯಲ್ಲಿ ಉದ್ಗಾರವೆತ್ತಿದ್ದಾರೆ. ಈ ದುರ್ಘಟನೆಯ ಸುತ್ತ ಮರಾಠಾವೀರರ ಶೌರ್ಯಸಾಹಸಗಳು, ಯುದ್ಧಕಾಲದ ಕುತಂತ್ರಗಳು, ಕೆಲವು ಮರಾಠಾ ಸೇನಾಪತಿಗಳ ಸ್ವಾರ್ಥಬುದ್ಧಿ- ಇವೆಲ್ಲ ಕಲಾತ್ಮಕವಾಗಿ ಚಿತ್ರಿತವಾಗಿವೆ. ಯುದ್ಧಭೂಮಿಯಲ್ಲಿ ಮರಾಠಾ ಸ್ತ್ರೀಯರೂ ಹಾಜರಿದ್ದರು! ಅವರ ಗೋಳನ್ನು ಗಳಗನಾಥರು ತೋರ್ಪಡಿಸಿದ ರೀತಿಯೇ ವಿಶಿಷ್ಟವಾಗಿದೆ.

''ಈ ರಮಾ-ಉಮೆಯರ ವೃತ್ತಾಂತವನ್ನು ಬರೆಯುವಾಗ ನಮಗೆ ಪರಮಾವಧಿ ದುಃಖವಾಗುತ್ತದೆ. ಯಾಕೆಂದರೆ ಇವರು ಕಾದಂಬರಿಯೊಳಗಿನ ಕಾಲ್ಪನಿಕ ಪಾತ್ರಗಳಲ್ಲ. ಇದೊಂದು ಕಲ್ಪಿತ ಕಾದಂಬರಿಯಾಗಿದ್ದು ಇವರಿಬ್ಬರು ಕಲ್ಪಿತ ಸ್ತ್ರೀಯರಾಗಿದ್ದರೆ, ಇಂಥ ಸುಕುಮಾರಿಯರನ್ನು ಇಷ್ಟು ದೂರ ಕರೆತಂದು ಈ ಪರಿಯ ಸಂಕಟಕ್ಕೆ ನಾವು ಎಂದೂ ಗುರಿ ಮಾಡುತ್ತಿದ್ದಿಲ್ಲ. ಹಿಂದಕ್ಕೆ ನಾವು ಕುಮುದಿನೀ ಕಾದಂಬರಿಯಲ್ಲಿ ಚಿನ್ನ ಓಬಲನ ಕ್ರೂರತನವನ್ನು ವರ್ಣಿಸುವಾಗ ಕಣ್ಣೀರುಗಳುದುರಿದವು. ಆದರೆ ಮಾಡುವುದೇನು?-

- ಎಂಬುದಾಗಿ ಕಥಾಮಧ್ಯದಲ್ಲಿ ಹೇಳಿರುವರಲ್ಲದೆ, ಪೇಶ್ವೆ ಮುಂದಾಳುಗಳ ಅತಿಯಾದ ಆತ್ಮವಿಶ್ವಾಸ, ಗರ್ವ ಮತ್ತು ಹಟಮಾರಿತನಗಳನ್ನು ಎತ್ತಿ ತೋರಿಸಿ, ಅದರಿಂದ ನಾವು ಪಾಠ ಕಲಿಯಬೇಕು, ಎಂಬುದಾಗಿ ಉಪದೇಶಿಸಿದ್ದಾರೆ.

(ಊ) ಮಾಧವ ಕರುಣಾವಿಲಾಸ

ಈ ಕಾದಂಬರಿಯನ್ನು ಕುರಿತು ಪ್ರತ್ಯೇಕವಾಗಿ ಹೇಳಬೇಕೆಂದಿರುವುದರ ಉದ್ದೇಶ, ಇದೊಂದು ಕನ್ನಡದ ಶ್ರೇಷ್ಠಕೃತಿ ಎಂದಾಗಲೀ, ಗಳಗನಾಥರ ಕಾದಂಬರಿಗಳಲ್ಲಿ ಅತ್ಯಂತ ಮೇಲ್ಮಟ್ಟದ್ದು ಎಂದಾಗಲೀ ಅಲ್ಲ, ಅವರ ಕಾದಂಬರಿ ಸೃಷ್ಟಿಯ ಲಕ್ಷಣಗಳೆಲ್ಲವನ್ನು ಒಳಗೊಂಡು ಪ್ರಾತಿನಿಧಿಕ ಸ್ವರೂಪದಲ್ಲಿದೆ ಎಂಬುದಾಗಿ ಇದರ ವಿಶೇಷತೆ ಇದೆ. ಅಲ್ಲದೆ ಅವರ ಅನೇಕ ಕಾದಂಬರಿಗಳು ಬೇರೆಯವರ ಕೃತಿಗಳ ರೂಪಾಂತರಗಳಿದ್ದು, ಇದು ಸ್ವತಂತ್ರವಾದ, ಏಳುನೂರು ಪುಟಗಳನ್ನು ಮಿಕ್ಕಿದ, ವಿಸ್ತಾರವಾದ ಕಾದಂಬರಿಯಾಗಿದೆ.

ವಿಜಯನಗರ ರಾಜ್ಯಸ್ಥಾಪನೆಯ ಪ್ರೇರಣೆ, ಹಿನ್ನಲೆ, ಪ್ರತ್ಯಕ್ಷ ಘಟನೆ ಈ ಕಾದಂಬರಿಯ ಆಶಯವಾಗಿದೆ. ಆ ನಿಮಿತ್ತದಿಂದ ಕನ್ನಡಿಗರಲ್ಲಿ ಮೂಡಿದ ವಿಲಕ್ಷಣ ಜಾಗೃತಿಯನ್ನೂ, ಅದಕ್ಕೆ ಕಾರಣರಾದ ಮಾಧವಾಚಾರ್ಯರನ್ನು ಸದ್ಗುರು ಸ್ಥಾನದಲ್ಲಿ ಅವರು ಗಮನದಲ್ಲಿಟ್ಟುಕೊಂಡಿದ್ದಾರೆ. ಜೊತೆಗೆ ಆ ಕಾಲದ ಪರಂಪರೆಯ ಅಂಶಗಳನ್ನು ಇಪ್ಪತ್ತನೆಯ ಶತಮಾನದ ತಮ್ಮ ಕಾಲದ ವಿಚಾರಪ್ರವಾಹದೊಂದಿಗೆ ಹೋಲಿಸಿ ತಮ್ಮ ಅಭಿಪ್ರಾಯಗಳನ್ನು ಮಂಡಿಸುವುದೂ ಅವರ ಉದ್ದೇಶಗಳಲ್ಲಿ ಒಂದಾಗಿತ್ತು.

'ಇದೊಂದು ಐತಿಹಾಸಿಕ, ಸುರಸ, ತಾತ್ವಿಕ ಕಾದಂಬರಿ' ಎಂಬುದಾಗಿ ಪ್ರಸ್ತಾವನೆಯಲ್ಲಿ ಕಾದಂಬರಿಯನ್ನು ವಿಶೇಷಿಸಿದ್ದಾರೆ. ಇವು ಮೂರು ಪ್ರಣಾಲಿಗಳನ್ನೂ ಒಂದೊಂದಾಗಿ ನೋಡೋಣ; ಅದಕ್ಕೂ ಮೊದಲು ಇದರ ಕಥಾನಕ: ವಿಷ್ಣುಶರ್ಮರ ಗುರುಕುಲದಲ್ಲಿ ಕಲಿಯುತ್ತಿದ್ದ ಮಾಧವಚಾರ್ಯ ತನ್ನ ಧರ್ಮ-ವೀರ ಗುಣವನ್ನು ವ್ಯಕ್ತಪಡಿಸುವಲ್ಲಿಂದ ಕಥೆಯ ಆರಂಭ. ಮುಂದೆ ಹಂಪಿಗೆ ಬಂದು ತಪಸ್ಸುಗೈಯ್ದು ಭುವನೇಶ್ವರಿಯನ್ನು ಒಲಿಸಿಕೊಳ್ಳುತ್ತಾರೆ. ಆಗಿನ ಮುಸಲ್ಮಾನ್ ಅಧಿಕಾರಶಾಹಿ ಪಟುಗಳಿಂದ ದೇಶವನ್ನು ಮುಕ್ತ ಮಾಡಬೇಕು; ಅದಕ್ಕಾಗಿ ಮೊದಲು ಜನರಲ್ಲಿ ಆತ್ಮಸ್ಥೈರ್ಯವನ್ನು ತುಂಬಿ ಜಾಗೃತಗೊಳಿಸಬೇಕು; ಇದರ ಜೊತೆಗೆ ಜನರು ಧರ್ಮ ಮಾರ್ಗದಿಂದ ನಡೆಯಬೇಕು, ಎಂಬೀ ಹೇತುವಿನಿಂದ ಕಾರ್ಯೋನ್ಮುಖರಾಗುತ್ತಾರೆ.

ಆ ಕಾಲಕ್ಕೆ ಮಹಮ್ಮದ ತುಘಲಕನು ದಕ್ಷಿಣದ ವಾರಂಗಲ್, ಆನೆಗೊಂದಿ ರಾಜ್ಯಗಳನ್ನು ಸದೆಬಡೆದು ಕಾಸಿಂಖಾನ್, ಮಲಿಕನಾಯಬ್ ಮುಂತಾದ ಅಧಿಕಾರಿಗಳನ್ನು ಅಲ್ಲಿ ನಿಯಮಿಸಿರುತ್ತಾನೆ. ಈ ಸ್ಥಿತಿಯಲ್ಲಿ ಕುರುಬರ ನಾಯಕನೆನಿಸಿದ್ದ

ಹಗ್ಗನು (ಹುಕ್ಕ) ಮುಸಲ್ಮಾನರ ಉರವಣಿಗೆಯಿಂದ ಕಂಗೆಟ್ಟವರಿಗೆ ಸಹಾಯ ಮಾಡುತ್ತ ತನ್ನ ವರ್ಚಸ್ಸನ್ನು ಬೆಳೆಸಿಕೊಳ್ಳುತ್ತಿದ್ದಾನೆ. ಇತ್ತ ಹುಕ್ಕನ ತಮ್ಮ ಬುಕ್ಕನು ದೇವಿಯ ಕೊಳ್ಳ ಎಂಬಲ್ಲಿ ಗುಪ್ತಸೈನ್ಯವನ್ನು ಸಜ್ಜುಗೊಳಿಸುವುದರಲ್ಲಿ ತೊಡಗಿರುತ್ತಾನೆ.

ಮುಂದಿನ ಘಟನೆಗಳೆಂದು, ಮಹಮ್ಮದ ತುಘಲಕನು ತನ್ನ ಅಣ್ಣನ ಮಗ ಬಹಾಉದ್ದೀನನ ಚರ್ಮ ಸುಲಿಸುವುದು, ಕಾಸೀಮಖಾನನು ಆನೆಗುಂದಿ ರಾಜಕುವರಿ ಪದ್ಮಿನಿಯನ್ನು ಮೋಸದಿಂದ ಅಪಹರಿಸಿದ್ದುದು, ಮಲ್ಲನೆಂಬ ಕುರುಬ ವೀರನ ಹಾಗೂ ಮಲ್ಲಿಕನೆಂಬ ಜಟ್ಟಿಯ ನಡುವಿನ ಕುಸ್ತಿ, ಹುಕ್ಕ-ಬುಕ್ಕರ ಕಾರ್ಯದಲ್ಲಿ ಅಬ್ದುಲ್ಲಾ ಬಖತ್ಯಾರ ಇವರುಗಳ ಸಹಾಯ, ವಾರಂಗಲ್ಲಿನ ಶೂರ ದೊರೆ ಪ್ರತಾಪರುದ್ರನು ಬುಕ್ಕನನ್ನು ಕೂಡಿಕೊಂಡಿದ್ದು, ಹುಕ್ಕಬುಕ್ಕರು ಕಾಸಿಮನಿಗೆ ಸೆರೆ ಸಿಕ್ಕಂತೆ ನಟಿಸಿ, ಅವನ ಆಧಿಪತ್ಯದಲ್ಲಿದ್ದ ಕಂಪಲಿಯನ್ನು ಗೆದ್ದುಕೊಂಡದ್ದು, ಮಾಧವಾಚಾರ್ಯರ ಪ್ರಭಾವಕ್ಕೊಳಗಾಗಿ ಕಾಸೀಮನು ಸದಾಚಾರಿಯಾದದ್ದು, ಮಲಿಕನಾಯಬನ ವಶದಲ್ಲಿದ್ದ ಕಾಂಚನಗಡ ಎಂಬ ಕೋಟೆಯನ್ನು ವಶಪಡಿಸಿಕೊಂಡಾಗ, ವಿಜಯನಗರ ರಾಜ್ಯ ಸ್ಥಾಪನೆ ನಿರಾತಂಕವಾದದ್ದು. ಹುಕ್ಕ-ಬುಕ್ಕ ಯುವರಾಜರೊಡನೆ ಹಿರಿಯ ಸಂಗಮರಾಜನು ಹಂಪಿಯಲ್ಲಿ ಪಟ್ಟಾಭಿಷಿಕ್ತನಾದದ್ದು, ಮಾಧವಾಚಾರ್ಯರಿಗೆ ಜನತೆ ಅಪಾರ ದನ-ಕರುಗಳನ್ನು ತಂದೊಪ್ಪಿಸಿದ್ದು, (ಮಾಧವಾಚಾರ್ಯರು ಭುವನೇಶ್ವರಿಯನ್ನು ಒಲಿಸಿಕೊಂಡು, ಸುವರ್ಣವೃಷ್ಟಿಯನ್ನು ಕರೆದರೆನ್ನುವ ಜನಜನಿತವಾದ ಪವಾಡವನ್ನು ಗಳಗನಾಥರು ಈ ರೀತಿ ಅರ್ಥೈಸಿದ್ದಾರೆ); ಇವಿಷ್ಟು ಕಥಾವಸ್ತುವಿನ ಮುಖ್ಯಾಂಶಗಳು.

ಕಾದಂಬರಿಯ ಸನ್ನಿವೇಶಗಳು ಸುರಸವಾಗಿರುವ ವಿಚಾರದಲ್ಲಿ ಗಳಗನಾಥರು ತಮ್ಮ ಎಂದಿನ ಯಶಸ್ವಿತೆಯನ್ನು ಉಳಿಸಿಕೊಂಡಿದ್ದಾರೆ. ಆರಂಭದಲ್ಲಿಯೆ ಬರುವ ಪ್ರಾಚೀನ ಯುಗದ ಆಶ್ರಮ ವರ್ಣನೆ ಒಂದು ಬಗೆಯ ಪವಿತ್ರ ಭಾವನೆಗಳನ್ನು ನಮ್ಮಲ್ಲಿ ಮೂಡಿಸುತ್ತದೆ. ಮಹಮ್ಮದ ತುಘಲಕನ ಈಗಾಗಲೇ ಪರಿಚಿತವಿರುವ ವಿಚಿತ್ರ-ವಿಕ್ಷಿಪ್ತ ನಡವಳಿಕೆಯನ್ನು ಗಳಗನಾಥರು ಚೆನ್ನಾಗಿ ಚಿತ್ರಿಸಿದ್ದಾರೆ. ಮಲ್ಲಯುದ್ಧವನ್ನಂತೂ, ಗಳಗನಾಥರು ತಮ್ಮ ಪರಿಚಯ ಪರಿಸರದ ಅಗಡಿ, ಹಾವೇರಿಗಳಲ್ಲಿ ಕಂಡಿದ್ದ 'ಜಂಗೀ ಕುಸ್ತಿ'ಗಳ ಮಾದರಿಯ ಮೇಲೆ ಯಥಾವತ್ತಾಗಿ ವರ್ಣಿಸಿದ್ದಾರೆ. (ಮಲ್ಲಣ್ಣನು ಮಲ್ಲಿಕನನ್ನು ಹೋಳಿಗೆಯನ್ನು ತಿರುವಿಹಾಕಿದಂತೆ ನೆಲಕ್ಕೆ ಒಗೆದನಂತೆ!). ಸೋತಿದ್ದ ಮಲ್ಲಿಕನ ಜೀವ ತೆಗೆದುಕೊಳ್ಳಲು ತುಘಲಕನ ಖಾಸಾ ಅನುಮತಿ ಇದ್ದರೂ ಕನ್ನಡಿಗ ಮಲ್ಲನು ಹಾಗೆ ಮಾಡುವುದಿಲ್ಲ. ಅದಕ್ಕೆ ಮಲ್ಲಿಕನಿಗೆ

''ಬಾದಶಹರು ನನ್ನ ವಿಷಯದಲ್ಲಿ ಔದಾರ್ಯವನ್ನು ತೋರಿಸಿದ್ದಾರೆ. ನೀನು ಅವರಿಗೆ ಅತ್ಯಂತ ಬೇಕಾದವನು. ನಿನ್ನನ್ನು ಕೊಂದು ಅವರ ಮನಸ್ಸಿಗೆ ಬೇಸರ ತ್ತರಲಾರೆ. ಅಲ್ಲದೆ 'ಮಲ್ಲಿಕನನ್ನು ಒಗೆದ ಮಲ್ಲ' ಎಂಬ ಖ್ಯಾತಿ ನನಗೆ ಬಂದು ನಿನ್ನಿಂದ ಉಪಕಾರವೇ ಆಗಿದೆ'' - ಎಂಬ ಕಾರಣವನ್ನು ಕೊಡುವುದು ಮನೋಜ್ಞವಾಗಿದೆ.

ಕಾಸಿಮಖಾನನು ಪದ್ಮಿನಿಯನ್ನು, ಅವಳ ಸೇವಕಿಯನ್ನು ಅಪಹರಿಸುವನಷ್ಟೆ. ಕಾಮಾಂಧರ ಬುದ್ಧಿ ಮಸಳಿಸುತ್ತದೆನ್ನುವ ಬಗೆಯನ್ನು ಲಕ್ಷ್ಯದಲ್ಲಿಟ್ಟುಕೊಂಡು, ಪದ್ಮಿನಿಯೂ, ಬೈರಾಗಿಣಿ ವೇಷದ ಚೆನ್ನಮ್ಮನೂ ಅವನನ್ನು ಮೂರ್ಖನನ್ನಾಗಿ ಮಾಡಿದ್ದ ಸಂದರ್ಭದಲ್ಲಿ ಗಳಗನಾಥರು ಕಲ್ಪನೆಯ ಪರಮಾವಧಿಯನ್ನು ತೋರಿಸಿದ್ದಾರೆ. ಪದ್ಮಿನಿಯನ್ನು ಸೆರೆಹಿಡಿದಾದ ಮೇಲೆ ಅವಳ ತಂದೆಯಾದ ಆನೆಗೊಂದಿ ರಾಜನು ಹುಡುಕಿಸುವುದು ಸಹಜವಷ್ಟೆ. ಅವನು ಪ್ರಯತ್ನಿಸಿರಬಾರದೆಂಬಂತೆ ಬಾವಿಯಲ್ಲಿ ಎರಡು ಶವಗಳನ್ನು ತೇಲಿಬಿಡುತ್ತಾರೆ. ಇತ್ತ ಅವಳ ಮೇಲೆ ಬಲಾತ್ಕಾರ ಮಾಡದೆ ಒಲಿಸಿಕೊಂಡು ನಿಕಾ ಮಾಡಿಕೊಳ್ಳಬೇಕೆಂದು ಅವನ ಅಪೇಕ್ಷೆ. ಆಗ ಬೈರಾಗಿಣಿಯು ಪದ್ಮಿನಿಯ ಮನಸ್ಸೂ ಕಾಸಿಮನತ್ತ ಒಲಿದಿದೆಯೆಂದು ನಯವಂಚನೆಯ ಮಾತಾಡುತ್ತ ಹೇಳುತ್ತಾಳೆ:

''ಇಷ್ಟು ದಿನ ಖಾನಸಾಹೇಬರನ್ನು ಪರಿಪರಿಯಿಂದ ಕಾಡಿರಲು ಈಗ ಅವರು ನನ್ನನ್ನು ಪರಿಗ್ರಹಿಸುವರೋ ಇಲ್ಲವೋ ಎಂಬ ಚಿಂತೆಯಿಂದ ಪದ್ಮಿನಿಗೆ ನಿದ್ದೆಯೇ ಹತ್ತಲಿಲ್ಲವಂತೆ. ಅವರಿಗಾಗಿ ಮಾಡಿರುವ ಈ ಮಲ್ಲಿಗೆಯ ಹಾರವು ಪೂರಾ ಅರಳುವುದರೊಳಗಾಗಿ ಖಾನಸಾಹೇಬರನ್ನು ಕರೆದುಕೊಂಡು ಬಾ ಹೋಗು- ಎಂದು ಹೇಳಿ ಕಳಿಸಿದ್ದಾಳೆ.''

ಮುಂದೆ ಬೈರಾಗಿಣಿಯು ''ಖಾನಸಾಹೇಬರೇ, ನಾನೂ ನಿಮ್ಮನ್ನು ತುಂಬಾ ಪ್ರೇಮಿಸಿದ್ದೇನೆ. ನನ್ನನ್ನು ನಿಕಾ ಮಾಡಿಕೊಳ್ಳಿರಿ'' ಎಂದು ಅವನು ನಂಬುವಷ್ಟರ ಮಟ್ಟಿಗೂ, ಗಳಗನಾಥರು ಕಾಮಾಂಧರ ಮನೋಭಾವವನ್ನು ಚೆನ್ನಾಗಿ ಬಯಲಿಗೆಳೆದಿದ್ದಾರೆ.

ಬಿಡಿ ವರ್ಣನೆಗಳಲ್ಲಿಯೂ ಗಳಗನಾಥರ ಕಲ್ಪನೆಯು ಕುಸುರಿ ಕೆಲಸ ಮಾಡಿದೆ. ಒಮ್ಮೆ ಹೆಗ್ಗನು ರಾತ್ರಿ ಒಬ್ಬನೇ ಹೊರಟಾಗ 'ಕರ್ನಾಟಕ ಭೂಮಾತೆಯು ತನ್ನ ಅಲೌಕಿಕ ವೀರಪುತ್ರನಿಗೆ ಜನರ ಕಣ್ಣುಹತ್ತಬಾರದೆಂದು ಆತನಿಗೆ ಕಗ್ಗತ್ತಲೆಯ ಮುಸುಕು ಹಾಕಿದ್ದಾಳೆ' ಎಂದು ಕಲ್ಪಿಸಿದ್ದಾರೆ.

ಐವತ್ತಕ್ಕೂ ಮಿಕ್ಕಿದ ಪಾತ್ರಗಳಿರುವ ಈ ಕಾದಂಬರಿಯಲ್ಲಿ ಮಾಧವಚಾರ್ಯರೇ ಅತಿ ಮುಖ್ಯರು. ಎಲ್ಲದಕ್ಕೂ ಅವರೇ ಸೂತ್ರಧಾರರು. ಈ ಕಾದಂಬರಿಯನ್ನು ರಚಿಸುವುದಕ್ಕೆ ಅವರೇ ಪ್ರೇರಣೆ ಇತ್ತರೆಂದು ಗಳಗನಾಥರು ತಮ್ಮ ಪ್ರಸ್ತಾವನೆಯಲ್ಲಿ ಹೇಳಿದ್ದಾರೆ. ಒಂದೊಮ್ಮೆ ತಮ್ಮ ಮನದಲ್ಲಿ ಪ್ರತ್ಯಕ್ಷರಾಗಿ ಈ ಕಾದಂಬರಿಯನ್ನು ಬರೆಯ ಹೇಳಿದರಂತೆ. ಅದನ್ನು ಸಂದರ್ಭಿಸಿದ ರೀತಿಯನ್ನು ನೋಡಿರಿ:

''ಮಹಾತ್ಮರಾದ ಮಾಧವಾಚಾರ್ಯರು ನನ್ನ ಹೃದಯಸ್ಥರಾದರು; ಆದರೆ ಬುದ್ಧಿಹೀನನಾದ ನನ್ನ ಹೃದಯದಲ್ಲಿ ಅವರ ಸತ್ಕಾರವು ಯಾವ ಬಗೆಯಿಂದ ಆಗಬೇಕು? ಆದರೂ ಬಡವರ ಮನೆಗೆ ಬಂದ ಭಾಗ್ಯಶಾಲಿಗಳು ಬಡವರ ಸಂತೋಷಕ್ಕಾಗಿ ತಮ್ಮ ಕರವಸ್ತ್ರವನ್ನೇ ತಮ್ಮ ಆಸನವನ್ನಾಗಿ ಮಾಡಿಕೊಂಡು ಕುಳಿತು ಮರ್ಯಾದೆ ಹೊಂದುವಂತೆ....''

ಈ ಮಾಧವಾಚಾರ್ಯರಲ್ಲಿ ವಿದ್ಯಾಬಲ, ತಪೋಬಲ ಮತ್ತು ದೈವೀಬಲ ಇವು ಮೂರೂ ಮುಪ್ಪುರಿಗೊಂಡಿದ್ದವು; ಅಣಿಮಾದಿ ಅಷ್ಟ ಮಹಾ ಸಿದ್ಧಿಗಳೂ ಪರಕಾಯ ಪ್ರವೇಶ ಮೊದಲಾದ ಕ್ಷುದ್ರ ಸಿದ್ಧಿಗಳೂ ವಶವಾಗಿದ್ದವು. ಮಹಾಭಾರತದಲ್ಲಿ ಶ್ರೀಕೃಷ್ಣನ ಪಾತ್ರ ಹೇಗೋ ಹಾಗೆಯೇ ಅವನಂತೆಯೇ ಇವರೂ ಮಹಾ ಮುತ್ಸದ್ದಿತನದಿಂದ ಪಾಂಡವರಿಗೆ ಮಾಡಿದಂತೆ ಧರ್ಮವಿಜಯವನ್ನು ಸಾಧಿಸಿದರು. ರಾಜಕೀಯ ಮುತ್ಸದ್ದಿತನಕ್ಕೆ ಅನೇಕ ಉದಾಹರಣೆಗಳು ಕಾದಂಬರಿಯಲ್ಲಿ ಸಿಕ್ಕುತ್ತವೆ. ಅಪಹೃತಳಾಗಿದ್ದ ಪದ್ಮಿನಿಯನ್ನು ಬಿಡಿಸುವುದಕ್ಕೆ ಬೇಕೆಂದೇ ಯತ್ನಿಸಲಿಲ್ಲ. ಸಂಗಮ ರಾಜನ ಕೊಲೆಯ ಸುದ್ದಿ ಹಬ್ಬಿಸಿ, ಅವನ ಮಕ್ಕಳು ಸಂತಪ್ತರಾಗಬೇಕೆಂದು ಅವರ ವಿಚಾರವಾಗಿದ್ದಿತು. ಅಷ್ಟೇ ಏಕೆ, ಹುಕ್ಕ ಬುಕ್ಕರು ಅಣ್ಣ ತಮ್ಮಂದಿರೆಂಬುದನ್ನು ಪರಸ್ಪರರಿಗೆ ಗೊತ್ತಾಗದಂತೆ ಮಾಡಿದ್ದರು. ಪಾಂಡವರಿಗೆ ಮಾಡಿದಂತೆ, ಧರ್ಮ ವಿಜಯವನ್ನು ಸಾಧಿಸಿದರು. ಒಂದೆಡೆ ಗಳಗನಾಥರು ಅವರನ್ನು ಪರಶಿವನಿಗೆ ಹೋಲಿಸಿದ್ದೂ ಉಂಟು. ಆದರೆ ಅವನಿಗಿಂತ ಇವರು ಶ್ರೇಷ್ಠರು ಎಂದೂ ಹೇಳುತ್ತಾರೆ! ಕಾರಣ ಶಿವನು ತನ್ನ ಅರ್ಧ ಅಂಗವನ್ನು ಪಾರ್ವತಿಗೆ ಬಿಟ್ಟುಕೊಟ್ಟು, ಅರ್ಧವನ್ನು ಮಾತ್ರ ಲೋಕಕಲ್ಯಾಣಕ್ಕಾಗಿ ವಿನಿಯೋಗಿಸಿದವನು. ಮಾಧವಾಚಾರ್ಯರೋ, ಸರ್ವಾಂಗವನ್ನೇ ಕರ್ನಾಟಕದ ಮಾತೆಯ ಸೇವೆಗಾಗಿ ಮುಡಿಪಿಟ್ಟವರು ಎಂದು!

ಮುಂದುವರಿದು ಉತ್ತಮನಾದ ಜಟ್ಟಿಯು ತನ್ನ ಎಲ್ಲ ಅವಯವಗಳ ಶಕ್ತಿ ಸಂಚಯನಕ್ಕೆ ತಕ್ಕ ಅನುಕೂಲತೆ ಮಾಡಿಕೊಂಡು ತನ್ನ ದೇಹವನ್ನು ಸದೃಢ

ಮಾಡಿಕೊಳ್ಳುವಂತೆ ಮಾಧವಚಾರ್ಯನೆಂಬ ಜಟ್ಟಿಯೂ ತನ್ನ ಅವಯವಗಳಂತಿರುವ ಕನ್ನಡಿಗರ ಶಕ್ತಿಸಂಚಯನಕ್ಕೆ ಅನುವು ಮಾಡಿಕೊಟ್ಟು ಇಡಿಯ ಕರ್ನಾಟಕರೂಪವಾದ ತನ್ನ ದೇಹವನ್ನು ಶಕ್ತಮಾಡತೊಡಗಿದ್ದರು... ಯಾವುದೊಂದು ಗೂಢತಮ ಉದ್ದೇಶವಿಟ್ಟುಕೊಂಡು ಅವರವರ ಶಕ್ತಿ ಯುಕ್ತಿಗಳ ಬೆಳವಣಿಗೆಗೆ, ಆಲಸ್ಯ ಪರಾವಲಂಬನೆ, ಬಾಧೆ ತಗುಲದಂತೆ ಮಾಡಿ, ಅದನ್ನು ಸಂಪೂರ್ಣವಾಗಿ ಬೆಳೆಸಲು ತಕ್ಕ ಉಪಾಯಗಳನ್ನು ಆ ಬ್ರಾಹ್ಮಣಶ್ರೇಷ್ಠನು ಯೋಚಿಸಿ ಕರ್ನಾಟಕದ ಪ್ರತಿಯೊಂದು ನಾಡಿಯು ಸಶಕ್ತವೂ ತೇಜಪೂರ್ಣವೂ ಆಗುವ ಕಾರ್ಯವನ್ನು ಅವಶ್ಯವಾಗಿ ನಡೆಸಿದ್ದರು ಎಂಬುದಾಗಿ ಅವರ ಕಾರ್ಯದ ಮಹತ್ವವನ್ನು ವರ್ಣಿಸಿದ್ದಾರೆ. ಒಟ್ಟಿನಲ್ಲಿ "ದೇಶೋದ್ಧಾರಕ್ಕಾಗಿಯೇ ಅವತರಿಸಿದ ಸತ್ವಮೂರ್ತಿ" ಎಂಬ ರೀತಿಯಲ್ಲಿ ಅವರ ಚಿತ್ರಣವನ್ನು ನಾವು ಕಾಣುತ್ತೇವೆ.

ಮಾಧವಚಾರ್ಯರನ್ನು ಇಷ್ಟರಮಟ್ಟಿಗೆ ಮೇಲೇರಿಸಿದ್ದರಲ್ಲಿ ಗಳಗನಾಥರಿಗೆ ಸದ್ಗುರುವಿನ ಬಗೆಗಿದ್ದ ಪರಿಕಲ್ಪನೆಯೂ ಕಾರಣವಾಗಿದೆ. ಅವರ ಎಲ್ಲ ಕಾದಂಬರಿಗಳಲ್ಲಿ ಬರುವಂತೆ ಸದ್ಗುರು ಸಮಾಗಮ ವಿಚಾರವು ಮೇಲಿಂದ ಮೇಲೆ ಬರುತ್ತದೆ. ಮನುಷ್ಯನು ಸತ್ವಶಾಲಿಯಾಗುವುದೂ, ಸತ್ವಹೀನನಾಗುವುದೂ ಸದ್ಗುರು ಸಹವಾಸದಿಂದಲೇ ಎಂದು ಹೇಳಿದ್ದಾರೆ. ಆ ಸಮಾಗಮವನ್ನು ಹೊಂದಿದ್ದವರ ಯೋಗ್ಯತೆ ಎಂಥದೇ ಇರಲಿ, ಕಾರ್ಯಸಿದ್ಧಿ ಕಟ್ಟಿಟ್ಟದ್ದು. ಕಾಸಿಮಖಾನನಿಗೆ ಏನು ಉತ್ತರ ಕೊಡಬೇಕೆಂದು ಬೈರಾಗಿಣಿಗೆ ಹೊಳೆಯದಿದ್ದಾಗ, ಸದ್ಗುರುವಿನ ಕೃಪೆಯಿಂದ ಉತ್ತರವು ತಡವಾಗಲಿಲ್ಲವಂತೆ. ಮಾಧವಾಚಾರ್ಯರನ್ನು ಮೊದಲ ಬಾರಿಗೆ ಕಂಡಾಗ ಭಾವಪರವಶನಾಗಿ ಹೆಗ್ಗನು ಗಳಗಳ ಅತ್ತುಬಿಟ್ಟನಂತೆ. ಕಣ್ಣೆದುರು ಇಲ್ಲದಿದ್ದಾಗಲೂ ಸದ್ಗುರುಗಳು ತಮ್ಮ ಪ್ರಭಾವವನ್ನು ಬೀರಬಲ್ಲರು. ದರ್ಬಾರು ನಡೆಸುತ್ತಿದ್ದ ಆನೆಗೊಂದಿಯ ದೇವರಾಯನು, ಮಾಧವಚಾರ್ಯರು ಬಂದಿರುವುದನ್ನು ದ್ವಾರಪಾಲಕನು ತಿಳಿಸಿದಾಗ, ಅವರನ್ನು ಬರಮಾಡಿಕೊಳ್ಳಲು ಥಟ್ಟನೆ ಎದ್ದು ಹೋದನಂತೆ. ಬಂದವರು ಮಾಧವಚಾರ್ಯರೇ ಎಂದು ದ್ವಾರಪಾಲಕನು ಹೇಳಿರಲಿಲ್ಲ. 'ಸೂರ್ಯನು ಮರೆಯಾಗಿದ್ದರೂ ಅವನ ತೇಜಸ್ಸು ನಮ್ಮ ನೇತ್ರೇಂದ್ರಿಯಕ್ಕೆ ಗೋಚರವಾಗುವಂತೆ, ಆ ತಪೋಧನರ ಗೂಢ ತೇಜಸ್ಸು ದೇವರಾಯನ ಆತ್ಮಕ್ಕೆ ಗೋಚರವಾಯಿತಂತೆ.

ಸದ್ಗುರುವಿನ ಮಹಿಮೆಯನ್ನು ಈ ಕಾದಂಬರಿಯಲ್ಲಿ ಗಳಗನಾಥರು ಇನ್ನಷ್ಟು ವಿಸ್ತರಿಸಿದ್ದಾರೆ. ಅವರ ಪ್ರಕಾರ, ಸದ್ಗುರುಗಳಾದವರು ಮನಸ್ವಿಗಳು. ಜಗತ್ಕಲ್ಯಾಣದ

ದೃಷ್ಟಿಯಿಂದ ಜಗತ್ತಿನ ದಾಸರಾಗಬಲ್ಲರು. ಮಾನಾಪಮಾನವಿಲ್ಲದೆ, ಆದರ, ಅನಾದರಗಳ ಕಡೆಗೆ ಲಕ್ಷ್ಯ ಕೊಡದೆ ತಾಯಿಯು ಎಳಗರುವಿದ್ದಲ್ಲಿಗೆ ಧಾವಿಸುವಂತೆ ನಾವಿದ್ದಲ್ಲಿಗೆ ಬಂದವರು. ಇನ್ನು ಅವರ ವಾಣಿಯನ್ನು ಕೇಳಿದ ಮೇಲಂತೂ ಅದರ ಫಲಶೃತಿಯನ್ನು ಹೇಳುವುದೇ ಬೇಡ. ಕಾಸೀಮಖಾನ, ಮೊದಲಾದ ದುಷ್ಟ ಚೇತನಗಳೂ ಸಾಧುತ್ವವನ್ನು ಪಡೆಯುವರೆಂದು ಗಳಗನಾಥರು ಸಂಪೂರ್ಣವಾಗಿ ನಂಬಿದ್ದರು. 'ಕ್ರಿಯಾ ಸಿದ್ಧಿ ಸತ್ವೇ ಭವತಿ ಮಹತಾಂ ನ ಉಪಕರಣೇ' ಎಂಬ ಉಕ್ತಿ ಸದ್ಗುರೋತ್ತಮರಿಗೆ ಅಕ್ಷರಶಃ ಅನ್ವಯಿಸುವುದು. ಅವರಿದ್ದಲ್ಲಿ ಕಾರ್ಯಕಾರಣ ಸಂಬಂಧವೇ ಇರುವುದಿಲ್ಲ. ಪ್ರಸಂಗ ಬಂದರೆ ಕಡ್ಡಿ ಹೋಗಿ ಗುಡ್ಡವಾಗುವುದು; ಇಲಿ ಹೋಗಿ ಹುಲಿಯಾಗುವುದು - ಎಂದು ಒಂದೆಡೆ ಉದ್ಗಾರವೆತ್ತಿದ್ದಾರೆ. ಹೆಚ್ಚೇನು, ಜಗತ್ತನ್ನು ಉದ್ಧರಿಸುವ ಪ್ರಸಂಗ ಬಂದಲ್ಲಿ ಜನ್ಮರಹಿತರಾದ ಅವರು ಜನ್ಮತಾಳುವರು. ದೇವಾಂಶಸಂಭೂತರಾಗಿ ಅಲ್ಲ; ಪ್ರತ್ಯಕ್ಷ ದೇವರಾಗಿಯೇ!

ಗಳಗನಾಥರ ಈ ನಿಲುಮೆ ಈ ಕಾಲದವರಿಗೆ ಅವಾಸ್ತವವಾಗಿ ತೋರಬಹುದು. ಆದರೆ ಅಗಡಿಯ ಶೇಷಾಚಲರ ಕಾರಣದಿಂದ ಅವರು ಗುರುಮಹಿಮೆಯನ್ನು ಸ್ವತಃ ಅನುಭವಿಸಿ ಆತ್ಮಸಾಕ್ಷಾತ್ಕಾರ ಮಾಡಿಕೊಂಡಿದ್ದ ಹಿನ್ನೆಲೆಯನ್ನು ನಾವು ಮರೆಯಕೂಡದು.

'ಮಾಧವಕರುಣಾವಿಲಾಸ'ವನ್ನು ತಾತ್ವಿಕ ಕಾದಂಬರಿಯೆಂದು ವಿಶೇಷವಾಗಿ ಕರೆದಿರುವರಷ್ಟೆ. ಅದರಲ್ಲಿ ಎರಡು ನೂರರಷ್ಟು ಪುಟಗಳು (೩೩೬ ರಿಂದ ೫೫೮) ಸಂಪೂರ್ಣವಾಗಿ ತಾತ್ವಿಕ ವಿವೇಚನೆಗೆ ಮೀಸಲಾಗಿವೆ. ಇವನ್ನುಳಿದು ಇತರ ಕಡೆ ಬಂದ ಸುಮಾರು ೫೦ ಪುಟಗಳನ್ನೂ ಸೇರಿಸಬಹುದೇನೋ. ಈ ತಾತ್ವಿಕ ವಿವೇಚನೆಯ ಬಾಹುಳ್ಯದಿಂದಾಗಿ ಪ್ರಸ್ತಾವನೆಯಲ್ಲಿ ಗಳಗನಾಥರು 'ಈ ಕಾದಂಬರಿಯನ್ನು ಬರಿಯೆ ಕಾದಂಬರಿ ಎಂಬ ದೃಷ್ಟಿಯಿಂದ ಬಡಬಡ ಓದಿಬಿಡುವುದಕ್ಕಿಂತ ಇದೊಂದು ಅಭ್ಯಾಸ ಮಾಡತಕ್ಕ ಪುಸ್ತಕವೆಂದು ವಿಚಾರಪೂರ್ವಕವಾಗಿ ಓದುವುದು ಲಾಭಕರವಾಗಿರುವುದು ಎಂದು ಸೂಚಿಸಿರುವರು. 'ಕನ್ನಡಿಗರ ವಿಲಕ್ಷಣ ಜಾಗೃತಿ' ಎಂಬ ಉಪಶೀರ್ಷಿಕೆಯನ್ನು ಕಾದಂಬರಿ ಹೊಂದಿದೆಯಷ್ಟೆ. ಈ ಜಾಗೃತಿಯನ್ನು ಧರ್ಮಾಚರಣೆಯಿಂದಲೇ ಸಾಧಿಸತಕ್ಕದ್ದು; ಧರ್ಮಾಭಿಮಾನದ ಮೂಲಕವೇ ದೇಶಾಭಿಮಾನ ಜಾಗೃತವಾಗುವದೆಂದು ಸ್ಪಷ್ಟಪಡಿಸಿದ್ದಾರೆ. ಇನ್ನು ಧರ್ಮವಿರುದ್ಧ ಕೃತಿಗಳಾದರೆ? ಸ್ವಾರ್ಥಕ್ಕಾಗಿ ಇದ್ದರೆ ಅಕ್ಷಮ್ಯ; ದೇಶಕ್ಕಾಗಿ ಇದ್ದರೆ ಕ್ಷಮ್ಯ! ಸ್ವಧರ್ಮ ಪಾಲನೆ,

ಲೋಕಹಿತ ಸಾಧನೆ ಇವುಗಳಲ್ಲಿ ಯಾವುದು ಹೆಚ್ಚಿನದು? ಗಳಗನಾಥರ ಪ್ರಕಾರ ಎರಡನೆಯದೇ ಶ್ರೇಷ್ಠವಾದದ್ದು. ಧಾರ್ಮಿಕ ಶಾಶ್ವತನ ಅದೆಷ್ಟು ಇದ್ದರೂ ಅದು ಸಂಕುಚಿತವಾದದ್ದಲ್ಲ - ಎನ್ನುವುದು ಸ್ಪಷ್ಟವಾಗದಿರದು. ಇದೇ ವಿಚಾರವನ್ನು ಬೇರೆ ರೀತಿಯಲ್ಲಿಯೂ ವ್ಯಕ್ತಪಡಿಸಿದ್ದಾರೆ; 'ಮಂದಿಯ ಸಲುವಾಗಿ ಸಾಯುವವನು ಸತ್ತರೂ ಬದುಕಿದಂತೆ. ಕೇವಲ ತನ್ನ ಸಲುವಾಗಿ ಬದುಕಿದವನು ಬದುಕಿಯೂ ಸತ್ತಂತೆ'. ಅಣಿ ಮುತ್ತಿನ ಮಾತುಗಳಿವು!

ಈ ಕಾದಂಬರಿಯಲ್ಲಿ ಗಳಗನಾಥರು ಯಾವ ಸಂಕೋಚವೂ ಇಲ್ಲದೆ ತಂದಿರುವ ಅನೇಕಾನೇಕ ತಾತ್ವಿಕ ವಿಚಾರಸರಣಿಯನ್ನು ಇಲ್ಲಿ ವಿವರವಾಗಿ ಪರಿಶೀಲಿಸುವ ಅಗತ್ಯವಿಲ್ಲ. ಅದಕ್ಕೆ ಸೂಕ್ತ ತಳಹದಿಯನ್ನು, ವರ್ಣಾಶ್ರಮದ ಕ್ರಮವನ್ನು ತುಸು ಬದಲಿಸಿ ನಾಲ್ಕು ಪಾತ್ರಗಳನ್ನು ಸೃಷ್ಟಿಸಿದ್ದಾರೆ. ಬ್ರಾಹ್ಮಣ ಮಾಧವಾಚಾರ್ಯ, ವೀರಶೈವರಾದ ವಿರೂಪಾಕ್ಷಾಚಾರ್ಯ, ಮ್ಲೇಚ್ಛನಾದ ಕಾಸಿಮ ಹಾಗೂ ಮಾದಿಗರ ದುರಗಪ್ಪ ಒಟ್ಟಿನ ಜನತೆಯಲ್ಲಿ ವೈದಿಕ, ಅವೈದಿಕ ಎಂಬ ಪ್ರಕಾರಗಳನ್ನು ಗುರುತಿಸಿ, ವೈದಿಕರಲ್ಲಿ ಮೇಲಿನಂತೆ ಚತುರ್ವರ್ಣಾತ್ಮಕ ಎಂಬುದಾಗಿಯೂ, ಅವೈದಿಕರಲ್ಲಿ ಅಸ್ಪೃಶ್ಯರು ಮತ್ತು ಮುಸಲ್ಮಾನರು, ವಿದೇಶೀಯರು ಎಂಬುದಾಗಿಯೂ ವಿಭಾಗಿಸಿದ್ದಾರೆ.

ಕಾದಂಬರಿಯಲ್ಲಿ ಚರ್ಚೆಗೊಳಗಾದ ವಿಷಯಗಳನ್ನಷ್ಟೆ ಹೇಳಿದರೆ ಸಾಕು, ಅದರ ವ್ಯಾಪ್ತಿಯ ಕಲ್ಪನೆ ಬಂದುಬಿಡುವುದು. ಅವೆಂದರೆ; ಮನುಷ್ಯನು ವಹಿಸಬೇಕಾದ ನಾಲ್ಕು ಭಾವಗಳು-ಸಮ, ವಿಷಮ, ಸೇವಕ ಮತ್ತು ಅಹಮ್ ಭಾವಗಳು. ಸಹಯೋಗ, ಅಸಹಯೋಗ, ಪ್ರತಿಯೋಗ ಎಂಬ ವ್ಯಾವಹಾರಿಕ ಯೋಗತ್ರಯಗಳು. ಪರಂಪರೆಯ ಆಢ್ಯತೆ ಮತ್ತು ಧರ್ಮವಿವೇಕ ಅಸ್ಪೃಶ್ಯತೆಯೂ. ಧಾರ್ಮಿಕ ವ್ಯವಹಾರವೂ. ಅಸಹಯೋಗದ ಪ್ರಭೇದಗಳು; ಹಿಂಸಾತ್ಮಕ ಅಸಹಯೋಗ ಮತ್ತು ಪ್ರತಿಯೋಗದ ಸಹಯೋಗ. ಕೊನೆಯದಾಗಿ ಬ್ರಾಹ್ಮಣ-ಬ್ರಾಹ್ಮಣೇತರ ವಿವೇಕ.

ಮೇಲಿನ ವಿಷಯಗಳ ನಿರೂಪಣೆಯಲ್ಲಿ ಗಳಗನಾಥರ ಸನಾತನ ಶ್ರದ್ಧೆ ಎದ್ದು ಕಾಣುವಂತಿದೆ. ಧರ್ಮದ ವಿಚಾರವಾಗಿ ಅವರು ಅತ್ಯಂತ ಉದಾರಮತವಾದಿಗಳೆಂಬುದನ್ನು ಮತ್ತೊಮ್ಮೆ ಗಣಿಸಬೇಕು. ಧರ್ಮವ್ಯಯವನ್ನು ಅವರು ಎಂದಿಗೂ ಸಹಿಸಿದವರಲ್ಲ. ಮುಸಲ್ಮಾನರ ವಿರುದ್ಧ ಹಿಂದೂ ರಾಜ್ಯ ಸ್ಥಾಪನೆ ಎಂದು ಮೇಲು ನೋಟಕ್ಕೆ ತೋರಿದರೂ, ಆ ಜಾತಿಯವರನ್ನೇ ದ್ವೇಷ-ತೋಷಗಳಿಂದ

ಕಂಡವರಲ್ಲ. ಕಾದಂಬರಿಯ ಆರಂಭದಲ್ಲಿಯೇ ಅವರ ಶಿಷ್ಯನೊಬ್ಬ ಪೈಗಂಬರರನ್ನು ಹೀಗಳೆದಾಗ ಮಾಧವಾಚಾರ್ಯರು ಅವನ ಭರ್ತ್ಸನೆ ಮಾಡಿ ಮುಸಲ್ಮಾನರಲ್ಲಿ ತಪ್ಪು ಕಂಡುಬಂದರೆ ಅದಕ್ಕೆ ಕೆಲ ಅನುಯಾಯಿಗಳು ಕಾರಣರಲ್ಲದೆ ಮಹಮ್ಮದ ಪೈಗಂಬರರಲ್ಲ, ಭಕ್ತಿ, ಜ್ಞಾನ, ವೈರಾಗ್ಯ ಸಾಧನೆ ಇಬ್ಬರಿಗೂ ಸಮಾನ ಎಂದಿದ್ದಾರೆ. ಅದಕ್ಕೂ ಮುಂದೆ ಹೋಗಿ, ಪೈಗಂಬರರೇ ಒಮ್ಮೆ ಕಾಸೀಮನ ಕನಸಿನಲ್ಲಿ ಬಂದು 'ನನಗೂ ಮಾಧವಚಾರ್ಯರಿಗೂ ಭೇದವೇನೂ ಇಲ್ಲ' ಎಂದು ಹೇಳಿದ್ದಾಗಿ ಕಲ್ಪಿಸಿದ್ದಾರೆ! ಅವರ ಈ ನಿಲುಮೆ ೭೦-೮೦ ವರ್ಷಗಳಷ್ಟು ಹಿಂದಿನದು. ಹೀಗೆಲ್ಲ ಬರೆದು ಅಲ್ಪಸಂಖ್ಯಾತ ಮುಸ್ಲಿಮರನ್ನು ಮೆಚ್ಚಿಸುವ ಅಗತ್ಯವೇನೂ ಅವರಿಗಿರಲಿಲ್ಲ. ಇದನ್ನು ಗಮನಿಸಬೇಕು; ಅದು ಅವರ ಪ್ರಾಮಾಣಿಕ ಅಭಿಪ್ರಾಯವೇ ಆಗಿದ್ದಿತು.

ಅದೇ ನಿಲುಮೆಯನ್ನಿಟ್ಟುಕೊಂಡು ಕೆಲವು ಮುಸಲ್ಮಾನರು ವಿಜಯನಗರದವರ ಪಕ್ಷವನ್ನು ವಹಿಸಿದ್ದಾರೆ. ಉದಾಹರಣೆಗೆ: ಬಖತ್ಯಾರ, ಅವರೆಲ್ಲ 'ಸ್ವಜನಾಭಿಮಾನಕ್ಕಿಂತ ಸತ್ಪಕ್ಷಾಭಿಮಾನವೇ ಶ್ರೇಷ್ಠ' ಎಂದು ಭಾವಿಸಿದವರು.

ಈ ಕಾದಂಬರಿಯನ್ನು ರಚಿಸುತ್ತಿದ್ದ ಕಾಲಕ್ಕೆ (೧೯೨೧-೧೯೨೩) ಗಾಂಧಿಯುಗ ಅದೇ ತಾನೇ ಆರಂಭವಾಗಿದ್ದಿತು. ಸ್ವಾತಂತ್ರ್ಯದ ಉತ್ಕಟತೆ, ಅಹಿಂಸೆ, ಅಸಹಕಾರ, ಅಸ್ಪೃಶ್ಯತಾ ನಿವಾರಣೆ ಮುಂತಾದವು ಜನಕ್ಕೆ ಚೆನ್ನಾಗಿ ವೇದ್ಯವಾಗಿರಲಿಲ್ಲ. ಅಂಥ ಸ್ಥಿತಿಯಲ್ಲಿ ಗಳಗನಾಥರು ರಾಜಕೀಯ ಪ್ರಜ್ಞೆಯನ್ನು ಮೈಗೂಡಿಸಿಕೊಂಡಿದ್ದಕ್ಕೆ ಈ ಕಾದಂಬರಿಯಲ್ಲಿ ಸ್ಪಷ್ಟವಾದ ಸಾಕ್ಷಿಗಳಿವೆ. ಗಾಂಧೀಜಿಯ ಹೆಸರನ್ನು ಅವರು ಎಲ್ಲಿಯೂ ಉಲ್ಲೇಖಿಸಿಲ್ಲ. ತಮಗೆ ಹತ್ತಿರದವರಾದ ತಿಲಕರನ್ನಾದರೂ ಪರೋಕ್ಷವಾಗಿ ತರಬಹುದಿತ್ತು; ಹಾಗೆ ಮಾಡಿಲ್ಲ. ಆದರೆ ಈ ಸಂದರ್ಭದ ಕೆಲವು ಪ್ರಕರಣಗಳ ಶೀರ್ಷಿಕೆಗಳನ್ನು ಗಮನಿಸಬಹುದು; 'ಪರತಂತ್ರರಿಗೆ ಸೆರೆಮನೆಯೇ ಸ್ವರಾಜ್ಯವು' 'ಮಹಾತ್ಮರ ಕಾರಾಗೃಹವಾಸವು' 'ಅಹಿಂಸಾತತ್ವವೂ ರಾಜಕೀಯ ಅಹಿಂಸೆಯೂ' 'ಅಸ್ಪೃಶ್ಯತೆಯೂ ರಾಜಕೀಯ ವ್ಯವಹಾರವೂ' 'ದೇಶದ್ರೋಹವೂ ರಾಜದ್ರೋಹವೂ.'

ಬ್ರಿಟಿಷರನ್ನು ಹೊಡೆದಟ್ಟಬೇಕು; ದೇಶಕ್ಕೆ ಸ್ವಾತಂತ್ರ್ಯ ದೊರೆಯಬೇಕು ಎಂಬುದಾಗಿ ಅವರು ಎಷ್ಟರ ಮಟ್ಟಿಗೆ ಆಕಾಂಕ್ಷೆಯುಳ್ಳವರಾಗಿದ್ದರೆಂಬುದು ಸ್ಪಷ್ಟವಿಲ್ಲವಾದರೂ 'ಪ್ರಜಾಸಂತಾಪದಿಂದ ಹುಟ್ಟಿದ ಅಗ್ನಿಯು ಸಿಡಿಲಿಗಿಂತ ಕ್ರೂರ. ಸಿಡಿಲು ತನ್ನ ಅಳವಿಗೆ ಸಿಕ್ಕ ಇಬ್ಬರು-ಮೂವರನ್ನು ಮಾತ್ರ ಸುಡುತ್ತದೆ. ಆದರೆ ಪ್ರಜಾಸಂತಾಪ ಜನಿತ ಅಗ್ನಿಯು ರಾಜ್ಯವನ್ನು, ತನ್ನವರನ್ನು, ತನ್ನನ್ನು ಸಹ ಸುಡುವುದು

ಎಂದು ಸ್ಕಂದ ಪುರಾಣದಲ್ಲಿ ಬಂದಿದೆ' ಎಂಬ ಮಾತನ್ನು ಹೇಳುವಲ್ಲಿ ಅವರ ವಿಚಾರ ಸರಣಿಯನ್ನು ಅರ್ಥಮಾಡಿಕೊಳ್ಳಬಹುದು. ಮಾಧವಚಾರ್ಯರು ಆದಷ್ಟು ಮಟ್ಟಿಗೆ ಯುದ್ಧದ, ಕೊಲೆಸುಲಿಗೆಗಳ ಪ್ರಸಂಗಗಳನ್ನು ತಪ್ಪಿಸುತ್ತಿದ್ದರು. ತಂತ್ರದಿಂದ ವೈರಿಗಳನ್ನು ಗೆಲ್ಲಬೇಕೆಂದು ಹೇಳುತ್ತಿದ್ದುದರಲ್ಲಿ ಗಾಂಧಿ ಪ್ರಣೀತ ಅಹಿಂಸಾ ತತ್ವ ಕೆಲಸ ಮಾಡಿರಬೇಕೆನಿಸುವುದು. ಅಸ್ಪೃಶ್ಯತೆಯ ಬಗ್ಗೆ ಮಾತ್ರ ಅವರ ನಿಲುಮೆ ಭೇದ ಮಾಡಬಹುದು. ಹಾಗೆಂದು ಬುದ್ಧಿಪೂರ್ವಕವಾಗಿ ವರ್ಣಸಂಕರ ಕೂಡದು ಎಂದು ಹೇಳಿದ್ದಾರೆ.

ಈ ಕಾದಂಬರಿಯಲ್ಲಿ, ವಿಜಯನಗರ ರಾಜ್ಯಸ್ಥಾಪನೆಯ ಕಾರ್ಯದಲ್ಲಿ ಕನ್ನಡಿಗರಲ್ಲಿ ಜಾಗೃತಿಯಾದದ್ದು ಬಹು ಮುಖ್ಯವಾದ ಪ್ರಮೇಯವಾಗಿರುವುದರಿಂದ, ಅದರ ಬಗೆಯನ್ನು ನೋಡೋಣ.

ಜಾಗೃತಿಗೆ ಮುಂಚೆ ಕನ್ನಡಿಗರ ಸ್ವಭಾವ, ಲಕ್ಷಣವನ್ನು ಹೇಳಬೇಕಲ್ಲವೆ. ಮಲ್ಲಯುದ್ಧ ನಡೆದಾಗಿನ, ಹಾಗೂ ಬೇರೆಕಡೆಯ ಸಂದರ್ಭದ ನಿಮಿತ್ತ ಮಾಡಿಕೊಂಡು ವಯೋವೃದ್ಧರು, ಹುಡುಗರನ್ನು ಕುರಿತು ಮಾಡುವ ಸೌಮ್ಯ ಟೀಕೆಯ ರೂಪದಲ್ಲಿ ವಿವರವಾಗಿ ವಿವರಿಸಿದ್ದಾರೆ:

'ಕನ್ನಡಿಗರಲ್ಲಿ ಸ್ವತಂತ್ರ ವಿಚಾರಶಕ್ತಿ ಕಡಿಮೆ. ಒಬ್ಬರನ್ನು ನೋಡಿ ಅದರಂತೆಯೇ ಇನ್ನೊಬ್ಬರು ಕಣ್ಣುಮುಚ್ಚಿ ಅನುರಿಸುವುದು ಅವರ ಹುಟ್ಟುಗುಣ. ಒಬ್ಬನು ಹುಯ್ ಅಂದರಾಯಿತು, ಎಲ್ಲರೂ ಹುಯ್ ಎಂದು ಗಲಭೆ ಮಾಡುವವರು. ಇವರ ನಾಲಿಗೆ ಉದ್ದ; ಕೈ ಕಿರಿದು! ಅರ್ಥಾತ್ ಪರೋಪದೇಶೇ ಪಾಂಡಿತ್ಯವನ್ನು ಪ್ರದರ್ಶಿಸುವವರು, ಆದಷ್ಟು ಮೈ ಉಳಿಸಿಕೊಳ್ಳುವವರು, ಕಡಿಮೆ ಧಾವತಿಯಿಂದ ಹೆಚ್ಚು ಪ್ರಯೋಜನ ಪಡೆಯಬಯಸುವವರು. ಅಲ್ಲದೆ ಹೀಗೆ ಮಾಡಿದರೆ ಹ್ಯಾಗಾದೀತು; ಹಾಗೆ ಮಾಡಿದರೆ ಏನಾದೀತು ಎಂದು ಸಾಶಂಕರಾಗುವರು'. ಕನ್ನಡಿಗರ ಈ ಹೇಡಿತನದ ಕುರುಹಾಗಿಯೆ ಊರೂರಿಗೆ ದೆವ್ವದ ಮನೆಗಳೂ, ಅಂಜಿಕೆಯ ಸ್ಥಳಗಳೂ ಇವೆಯಂತೆ!

ಆ ಕಾಲಕ್ಕೆ ಮುಸಲ್ಮಾನರ ಕೈ ಮೇಲಾದುದಕ್ಕೂ ಹಿಂದುಗಳು ಹಿಂಜರಿಯುವದಕ್ಕೂ ಕಾರಣವೇನೆಂಬುದನ್ನು ವಿವರಿಸಿದ್ದಾರೆ. ಮುಸಲ್ಮಾನರಲ್ಲಿ ಆತ್ಮವಿಶ್ವಾಸ ಬಹಳ. ನಾವೇ ಬಲಿಷ್ಠರು ಎಂಬ ಸ್ವಪ್ರಜ್ಞೆ ಅವರಲ್ಲಿದ್ದಿತಂತೆ. ಕನ್ನಡಿಗರಲ್ಲಿ ಈ ಅಭಿಮಾನ ಇಲ್ಲವಂತಲೇ ಹೀಗಾಯಿತು ಎನ್ನುತ್ತಾರೆ. ಆದರ ಅಂಜಿದರೆ ಅವರಂಥ ಅಂಜುಬುರುಕರಿಲ್ಲ; ಬೈಲಿಗೆ ನಿಂತರೆ ಅವರಂಥ ಬಂಟರಿಲ್ಲ ಎಂಬ ವೈಶಿಷ್ಟ್ಯವನ್ನು

ಹೇಳಿ, ಆ ಅಂಜುಬುರುಕತನವನ್ನು ಹೋಗಲಾಡಿಸಲು, ಅವರಲ್ಲಿ ಆತ್ಮವಿಶ್ವಾಸ ತುಂಬಲು ಹುಕ್ಕ-ಬುಕ್ಕರು ಪ್ರಯತ್ನಿಸಿದರಲ್ಲದೆ, ಮಾಧವಾಚಾರ್ಯರಂಥ ಮಹಿಮಾಶಾಲಿಗಳು ತಮ್ಮ ತಪ ವಿದ್ಯೆಗಳನ್ನು ಜನತೆಗೆ ಧಾರೆಯೆರೆದಿದ್ದಾರೆಂದೇ ವಿಲಕ್ಷಣ ಜಾಗೃತಿ ಉಂಟಾಯಿತೆಂದಿದ್ದಾರೆ. ದೇಶೋದ್ಧಾರದ ಕಾರ್ಯದಲ್ಲಿ ಸ್ತ್ರೀಯರ ಪಾತ್ರವೂ ಹಿರಿದಾದುದನ್ನು ಗಳಗನಾಥರು ತೋರಿಸಿಕೊಟ್ಟಿದ್ದಾರೆ. ಹಾಗೆ ನೋಡಿದರೆ ದೇಶೋದ್ಧಾರವು ಬರಿಯ ಶೂರರ, ಮುತ್ಸದ್ದಿಗಳ ಕೆಲಸವಲ್ಲ. ಪ್ರತಿಯೊಬ್ಬ ಕಸುಬುಗಾರನೂ, ಜಾತಿ, ವಯಸ್ಸುಗಳ ಭೇದವಿಲ್ಲದೆ ದುಡಿದರೆ ಅದು ಕೂಡ ದೇಶಸೇವೆಯಲ್ಲಿಯೇ ಪರಿಗಣಿತವಾಗತಕ್ಕದ್ದು. ದೇವರ ರಥವನ್ನು ಎಳೆಯುವಾಗ ಅಶಕ್ತನೂ ಕೈಗೊಡುತ್ತಾನಲ್ಲದೆ ತನ್ನಿಂದಾಗಿಯೂ ರಥವು ಮುಂದೆ ಹೋಯಿತೆಂದು ತಿಳಿಯುತ್ತಾನೆ. ಹಾಗೆಯೇ ದೇಶೋದ್ಧಾರದ ಕಾರ್ಯ....

೪. ಸಮಾರೋಪ

ಕನ್ನಡ ಕಾದಂಬರಿ ಕ್ಷೇತ್ರಕ್ಕೆ ಅದರಂತೆ ಭಾರತೀಯ ಕಥನ ಸಾಹಿತ್ಯಕ್ಕೆ ಗಳಗನಾಥರಿಂದ ಸಂದ ಕಾಣಿಕೆ ಏನು? ಈ ಕುರಿತು ಸಮಾಲೋಚಿಸುವಾಗ ಅವರ ಕಾಲದ ಸಾಹಿತ್ಯಿಕ ಸ್ಥಿತಿಗತಿ ಏನಿತ್ತೆಂಬುದನ್ನು ಮೊದಲು ಗಮನದಲ್ಲಿ ಇರಿಸಬೇಕು, ಕನ್ನಡದ ಮಟ್ಟಿಗೆ ಆಧುನಿಕ ಕಾದಂಬರಿಯ ಬರವಣಿಗೆಯು ೧೯೩೦ರ ದಶಕದಿಂದ ಆರಂಭವಾಯಿತು (ಕಾರಂತ, ಬೆಟಗೇರಿ ಕೃಷ್ಣಶರ್ಮ, ಅ.ನ.ಕೃ. ಅವರುಗಳಿಂದ). ಅದಕ್ಕೆ ಪೂರ್ವದಲ್ಲಿ ಎಂದರೆ ೧೯೧೦, ೧೯೨೦ರ ದಶಕಗಳಲ್ಲಿ ಈ ಸಾಹಿತ್ಯ ಪ್ರಕಾರವನ್ನು ಬರಮಾಡಿಕೊಳ್ಳುವುದಕ್ಕೆ ಕನ್ನಡ ಜನತೆಯನ್ನು ಸಜ್ಜುಗೊಳಿಸುವುದರಲ್ಲಿ ಗಳಗನಾಥರು ಅತ್ಯಂತ ಮೇಲಿನ ಸ್ಥಾನದಲ್ಲಿದ್ದವರು.

ಅವರಿಗಿಂತ ಪೂರ್ವದಲ್ಲಿ ಕಥಾವಸ್ತುವಿನ ಆಯ್ಕೆ, ಪಾತ್ರಸೃಷ್ಟಿ, ಸನ್ನಿವೇಶ ನಿರ್ಮಾಣ, ಸಂಭಾಷಣಾ ವಿಧಾನ - ಇದಾವುದೂ ವ್ಯವಸ್ಥಿತವಾಗಿ ನೆಲೆಗೊಂಡಿರದ ಪರಿಸ್ಥಿತಿ ಇದ್ದಿತು. ಬಿ. ವೆಂಕಟಾಚಾರ್ಯರು ಬಂಕಿಮಚಂದ್ರ ಮೊದಲಾದವರ ಬಂಗಾಲೀ ಕಾದಂಬರಿಗಳನ್ನು, ಗಳಗನಾಥರಿಗಿಂತ ಮುಂಚಿನ ಎರಡು-ಮೂರು ದಶಕಗಳಲ್ಲಿ ಅನುವಾದಿಸಿದ್ದರೂ ಆ ಭಾಷೆ ಮತ್ತು ನಿರೂಪಣಾ ವಿಧಾನವು ಜನಮನವನ್ನು ತಟ್ಟಿರಲಿಲ್ಲ. ಗಳಗನಾಥರು ಸಾಮಾನ್ಯ ಜನತೆಯಲ್ಲಿ ಸಾಹಿತ್ಯದ ಬಗ್ಗೆ ಅಭಿರುಚಿಯನ್ನು ಹುಟ್ಟಿಸಿದರು; ಹೆಚ್ಚಿಸಿದರು. ಕಥನ ಪ್ರಕಾರವನ್ನು ಆತ್ಮೀಯವಾಗಿಸಿಕೊಳ್ಳುವಂತೆ ಮಾಡಿದರು; ಕಾದಂಬರಿಗಳನ್ನು ಓದಿ ಮೆಚ್ಚುವ, ಮತ್ತೆ ಮತ್ತೆ ಕಾದಂಬರಿಗಳನ್ನು ಓದಬೇಕೆನ್ನುವ ಆತುರ ಭಾವವನ್ನು ಮೂಡಿಸಿದ್ದರು.

ಬಿ. ವೆಂಕಟಾಚಾರ್ಯರು ಬಂಗಾಲಿ ಕಾದಂಬರಿಗಳನ್ನೂ, ಗಳಗನಾಥರು ಮರಾಠೀ ಕಾದಂಬರಿಗಳನ್ನೂ ಅನುವಾದಿಸಿದರು ಎಂಬ ಸಾಮಾನ್ಯ ಗ್ರಹಿಕೆ ಇದೆ. ಸಾಹಿತ್ಯ ಚರಿತ್ರೆಗಳಲ್ಲಿ ಹಾಗೆ ಸ್ಥೂಲವಾಗಿ ಕಾಣಿಸುವುದೂ ಉಂಟು. ಗಳಗನಾಥರ ವಿಷಯದಲ್ಲಿ ಅದು ನಿಜವಲ್ಲ. ಏಕೆಂದರೆ ಅವರ ೨೩ ಕಾದಂಬರಿಗಳಲ್ಲಿ ಹಲವಾರು ಸ್ವತಂತ್ರ ಕೃತಿಗಳಿರುವುದನ್ನು ನೋಡಿದ್ದೇವೆ. ಉಳಿದವು, 'ಕಮಲಕುಮಾರಿ' ಒಂದು ಬಿಟ್ಟರೆ ನೇರ ಅನುವಾದಗಳಲ್ಲ; ರೂಪಾಂತರಗಳು. 'ತಮ್ಮ ವಾಡಿಕೆಯ ಪದ್ಧತಿಯಂತೆ

ಮೂಲ ಕಾದಂಬರಿಯನ್ನು ಕುಗ್ಗಿಸುವಲ್ಲಿ ಕುಗ್ಗಿಸಿ, ಹಿಗ್ಗಿಸುವಲ್ಲಿ ಹಿಗ್ಗಿಸಿ, ಹೊಸ ವಿಷಯ ಸೇರಿಸುವಲ್ಲಿ ಹೊಸವಿಷಯ ಸೇರಿಸಿ, ಹೊಸ ಪಾಕವನ್ನು ಸಿದ್ಧ ಮಾಡಿರುವೆವು' ಎಂದು ಪೀಠಿಕೆಯೊಂದರಲ್ಲಿ ಹೇಳಿದ್ದಾರೆ.

ತಮ್ಮ ವಾಡಿಕೆಯಂತೆ! ಹೌದು ಅವರು ಕಾದಂಬರಿ ರಚನೆಯಲ್ಲಿ ತಮ್ಮದೇ ಆದ ಕ್ರಮವನ್ನು ಬಳಕೆಗೆ ತಂದರು. ಅಕ್ಷರಶಃ ಅನುವಾದ ಮಾಡಿಕೊಂಡಿರದೆ ಈ ಹಿಗ್ಗಿಸುವ ಕುಗ್ಗಿಸುವ ಕ್ರಮದಲ್ಲಿ ವಾಚನೀಯತೆಯನ್ನು ಬಹುವಾಗಿ ಉಳಿಸಿಕೊಳ್ಳುವಂತಾಯಿತು. ಹಾಗೆ ಮಾಡುವಾಗ ಅವರು ಮೂಲ ಕೃತಿಗೆ ಅಧೀನರಾಗಿರಲಿಲ್ಲ. ಮೂಲವನ್ನೆ ತನ್ನಾಧೀನ ಮಾಡಿಕೊಂಡರು.

ಗಳಗನಾಥರು ಗಳಿಸಿದ ಜನಪ್ರಿಯತೆ ಅಪಾರವಾದದ್ದು. ಸಾಮಾನ್ಯ ವಾಚಕರಲ್ಲದೆ ವಿದ್ವಾಂಸರೂ ಲೇಖಕರೂ ಅವರ ಕೃತಿಗಳನ್ನು ಮನದುಂಬಿ ಹೊಗಳಿದ್ದಾರೆ. ಆಗಿನ ವಿಶ್ವವಿದ್ಯಾಲಯಗಳಲ್ಲಿ ಅವರ ಹತ್ತಾರು ಕಾದಂಬರಿಗಳು ಪಠ್ಯವಾಗಿದ್ದವಲ್ಲದೆ, ಬೇರೆ ರೀತಿಯ ಪುರಸ್ಕಾರಗಳೂ ಅವರಿಗೆ ಸಂದಿವೆ. ಹಳ್ಳಿಗಳಲ್ಲಿ ಜನ ಓದಿಸಿಕೊಳ್ಳುತ್ತಿದ್ದರು. ಕೆಲವು ಕಾದಂಬರಿಗಳನ್ನು ಜನಪದ ಆಟಗಳಾಗಿ ಮಾಡಿಕೊಂಡು ರಂಗದ ಮೇಲೆ ತಂದರು. ಮಧ್ಯಯುಗದಲ್ಲಿ ಕನ್ನಡದ ಹಿರಿಯ ಕವಿ ಕುಮಾರವ್ಯಾಸನಿಗೆ, ಪಂಡಿತ ಪಾಮರರಿಬ್ಬರಿಂದಲೂ ಯಾವ ಗೌರವ ಸಂದಿದ್ದಿತೊ ಅದೇ ಬಗೆಯ ಗೌರವ ಗಳಗನಾಥರಿಗೆ ಕೆಲ ಕಾಲವಾದರೂ ಸಂದಿವೆ.

ಇವತ್ತು ನಾವು ಗಳಗನಾಥರನ್ನು ಶ್ರೇಷ್ಠ ಕಾದಂಬರಿಕಾರರೆಂದು ಮನ್ನಿಸುತ್ತೇವೆ. ಆದರೆ ಅವರು ಕೇವಲ ಕಾದಂಬರಿಕಾರರಾಗಿ ಹೆಸರು ಮಾಡಬೇಕೆಂದು ಹೊರಟವರೇ ಅಲ್ಲ. ಬೇರೊಂದು ಕಾರ್ಯಸಾಧನೆಗಾಗಿ ಅವರು ಈ ಕ್ಷೇತ್ರದಲ್ಲಿ ಕಾಲಿರಿಸಬಯಸಿದವರು. ಅದುವೆ ಧರ್ಮ ಕಾರ್ಯ. ಕಾದಂಬರಿ ಬರೆದು ('ಸದ್ಬೋಧ ಚಂದ್ರಿಕೆ' ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಿಸಿ) ಹಣ ಸಂಪಾದಿಸಬೇಕು, ಅದನ್ನು ಆರ್ಯ ಧರ್ಮದ ಶಿಕ್ಷಣಕ್ಕಾಗಿ ವೆಚ್ಚ ಮಾಡಬೇಕು ಎಂಬುದು ಅವರ ಅಂತಿಮ ಗುರಿಯಾಗಿದ್ದಿತು. ಈ ಧಾರ್ಮಿಕ 'ಶಿಕ್ಷಣ' ಕಾರ್ಯವನ್ನು ತಮ್ಮ ಕಾದಂಬರಿಗಳೊಳಗೂ ಬೇಕಾದಷ್ಟು ತಂದಿದ್ದಾರಲ್ಲ! ಅವರ ಧಾರ್ಮಿಕ ಶ್ರದ್ಧೆ ಕಥನದ ಕಲಾವಂತಿಕೆಗಳಿಗೆ ಅಡ್ಡಿ ತಂದಿದೆಯೆಂದು ಹೇಳುವ ವಿಮರ್ಶಕರಿದ್ದಾರೆ. ಆದರೆ ಆಗಿನ ಕಾಲದ ಬರಹಗಳಲ್ಲಿ ಸೂಕ್ಷ್ಮತೆಯನ್ನು ಚಾಚೂ ತಪ್ಪದೆ ಪಾಲಿಸಬೇಕೆನ್ನುವುದು ಒಂದು ಆದರ್ಶವಾಗಿ ಅಂದಿನ ಲೇಖಕರಲ್ಲಿ ಇದ್ದಿತೆಲ್ಲಿ? ಸಾಹಿತ್ಯರಚನೆಯು ಮನರಂಜನೆಯ ಜೊತೆಗೆ ಉತ್ತಮ ಸಂಸ್ಕಾರಕ್ಕೂ, ಸನ್ಮಾರ್ಗ ಬೋಧನೆಗೂ ನೆರವಾಗಬೇಕೆಂದು ಅವರ

ಸ್ಪಷ್ಟ ಗುರಿಯಾಗಿದ್ದಿತು. ಅದಕ್ಕೆಂದು ಅವರು ಆಯ್ದುಕೊಂಡದ್ದು ಐತಿಹಾಸಿಕ ಪ್ರಸಂಗಗಳನ್ನು ಮಾತ್ರ. ಅದಕ್ಕೆಂದೇ ಉದಾತ್ತ ಪಾತ್ರಚಿತ್ರಣಕ್ಕೆ ಹೆಚ್ಚು ಒತ್ತು ಕೊಟ್ಟರು. ಅವರ ಬಾಳಿನುದ್ದಕ್ಕೂ ನಂಬಿಕೊಂಡು ಬಂದಿದ್ದ ಸದ್ಗುರು ಸಮಾಗಮವೂ ಮಲ್ಲಯುದ್ಧವೂ ಕಾದಂಬರಿಗಳಲ್ಲಿ ಕಾಣಿಸಿಕೊಳ್ಳುತ್ತದೆ. ಅದು ಅವರ ಪೂರ್ಣ ನಿರ್ಧಾರಿತ ಘೋಷಿತ ಪ್ರಮೇಯವೇ ಆಗಿದ್ದರಿಂದ ಆಕ್ಷೇಪಣೆಗೆ ಅವಕಾಶ ಉಳಿಯದು.

ಅವರ ಶೈಲಿಯ ಬಗ್ಗೆ ಒಂದು ಮಾತು, ಉತ್ತರ ಕರ್ನಾಟಕದ ಗದ್ಯ ಲೇಖಕರ ಶೈಲಿಗೆ ತನ್ನದೇ ಆದ ವೈಶಿಷ್ಟ್ಯವಿದೆ. ಅದರ ಸ್ಪಷ್ಟ ನಿದರ್ಶನವನ್ನು ಮತ್ತು ಆರಂಭವನ್ನು ಪೂರ್ವೋಕ್ತ ಗಂಗಾಧರ ಮಡಿವಾಳೇಶ್ವರ ತುರಮರಿ-ಇವರಲ್ಲಿ ಕಾಣುತ್ತೇವೆ. ದೇಸಿಯ ಸತ್ವವನ್ನು ಮೈಗೂಡಿಸಿಕೊಂಡ ಗಂಡು ಶೈಲಿ, ಅದು. ನಾಡಿನ ದಕ್ಷಿಣ ದೇಶದ ಸಂಪರ್ಕದಿಂದಾಗಿ ಇಂದು ಆ ಕನ್ನಡ ಶೈಲಿ ಬೇರೊಂದು ದಿಸೆಯಲ್ಲಿ ಸಾಗತೊಡಗಿದ್ದರೂ ಅದು ಆ ಭಾಗದ ಅನೇಕ ಲೇಖಕರಲ್ಲಿ ಈಗೂ ಉಳಿದುಕೊಂಡಿದೆ. ಹೇಗೇ ಇರಲಿ, ಆ ಭಾಗದ ಪ್ರಾಸಾದಿಕ ಶೈಲಿಯನ್ನು ಪ್ರೌಢಾವಸ್ಥೆಗೆ ತಂದು ನಿಲ್ಲಿಸಿದವರು ಗಳಗನಾಥರು.

ಅವರ ಕಥನ ಕಲೆಯ ವೈಶಿಷ್ಟ್ಯದ ಬಗ್ಗೆ ಒಬ್ಬ ಹಿರಿಯ ಗಣ್ಯ ಲೇಖಕ ವಿ. ಸೀತಾರಾಮಯ್ಯನವರ ಮಾತುಗಳನ್ನು ಉದ್ಧರಿಸಿ ಈ ಬರಹವನ್ನು ಮುಗಿಸುವೆ: ''ಅವರ ಬರವಣಿಗೆಯಲ್ಲಿ ಚಂಡ ಸತ್ವವಿದೆ, ಓಜಸ್ಸಿದೆ. ಒಳ್ಳೆಯ ಕಥೆಗಳನ್ನು ಕಟ್ಟಿ ಮೊದಲ ಪಂಕ್ತಿಯಿಂದ ಹಿಡಿದು ಕೊನೆಯ ವರೆವಿಗೂ ಇವರು ನಮ್ಮ ಮನಸ್ಸನ್ನು ಸೆರೆ ಹಿಡಿಯಬಲ್ಲರು. ಕಥೆಯ ವ್ಯಕ್ತಿಗಳಿಗೆ ಜೀವವಿರುವ ಅವರನ್ನು ಮಾತನಾಡಿಸಿ, ಅವರಿಂದ ತಮಗೆ ಬೇಕಾದ ಕೆಲಸವನ್ನು ಮಾಡಬಲ್ಲರು. ಅವರ ಸ್ವಭಾವವು ವ್ಯಕ್ತವಾಗುವಂತೆಯೂ, ಅವರ ಶೀಲ, ಚಾರಿತ್ರ್ಯಗಳು ಕಳೆಗೊಳ್ಳುವಂತೆಯೂ ತೋರಿಸಬಲ್ಲರು. ಕಥೆಯ ಆವರಣಕ್ಕೂ ಕಟ್ಟಡಕ್ಕೂ ಹೊಂದಿಕೊಳ್ಳುವ ಸಡಲಿಸದ ಸನ್ನಿವೇಶಗಳನ್ನು ಕಲ್ಪಿಸಬಲ್ಲರು. ಕಲ್ಪಿತ ವ್ಯಕ್ತಿಗಳ ಸಂಭಾಷಣೆಗೆ ಪ್ರಾಣ ತುಂಬಿ ಕಥೆಯ ನಡೆಯನ್ನು ಮುಂದುವರಿಸಬಲ್ಲರು... ಬೇರೆ ಬೇರೆ ಜನರಲ್ಲಿ ಮಿತ್ರತ್ವ ಶತ್ರುತ್ವಗಳನ್ನು ಉಂಟು ಮಾಡಿ ಪರಸ್ಪರ ಸಂಬಂಧಗಳನ್ನು ಯಾವ ರೀತಿ ಹೂಡಿ ಕಥೆಯ ಪರಿಣಾಮಕ್ಕೆ ಸಾಧನವಾಗುವದೆಂಬುದನ್ನು ತೋರಿಸಿ ತಮಗೆ ತೋರಿದ ನೀತಿಗಳನ್ನು ಅಲ್ಲಲ್ಲಿ ತಿಳಿಸುವರು.'' (೧೯೨೫)

★

ಅನುಬಂಧ ೧

'ಕುಮುದಿನಿ' ಕಾದಂಬರಿಯ ಒಂದು ಪ್ರಕರಣ -

ಅಂತಕನ ಕೋಲಾಹಲ

ಸಂದರ್ಭ: ರಂಗರಾಯನ ರಾಜಪರಿವಾರವನ್ನು ಸೆರೆಯಿಂದ ಪಾರು ಮಾಡಲು, ಎಚ್ಚಮನಾಯಕನ ಕಡೆಯವರು ತೋಡಿದ ಸುರಂಗವು ಕುಸಿದು ಬಿದ್ದಿತು. ಆದರಿಂದ ಆ ಪರಿವಾರವನ್ನೇ ಸಂಹರಿಸಲು ಅರಸನಾದ ಜಗರಾಯನು ನಿರ್ಧರಿಸಿದನು.

ಇತ್ತ ಜಗರಾಯನು ರಂಗರಾಯನ ಮೇಲೆ ಬಹಳ ಸಿಟ್ಟಾದನು. ಎಲ್ಲಾ ಅನರ್ಥಗಳಿಗೂ ಇವನೇ ಕಾರಣನಾದ್ದರಿಂದ ಸಕುಟುಂಬವಾಗಿ ಇವನನ್ನು ಮೊದಲು ಸಂಹರಿಸಬೇಕೆಂದು ಹಿಂದುಮುಂದಿನ ವಿಚಾರವಿಲ್ಲದೆ, ತನ್ನ ತಮ್ಮನಾದ ಚೆನ್ನ ಓಬಲನನ್ನು ಆ ಕಾರ್ಯಕ್ಕೆ ನಿಯಮಿಸಿದನು. ಚೆನ್ನ ಓಬಲನನ್ನು ಪ್ರತ್ಯಕ್ಷ ಯಮನೆಂತಲೇ ಹೇಳತಕ್ಕದ್ದು. ಆ ವಜ್ರಹೃದಯದ ಮದಾಂಧನು ಖಡ್ಗಪಾಣಿಯಾಗಿ ನಾಲ್ಕು ಜನ ಅಂಗರಕ್ಷಕರೊಡನೆ ಸೆರೆಮನೆಗೆ ಸಾಗುತ್ತಿರಲು, ಸೇನಾಪತಿಯಾದ ಇರುಗನಾಯಕನು ಆತನನ್ನು ತಡೆದು, ಜಗರಾಯನ ಕಡೆಗೆ ನೋಡಿ-'ಹೀಗೆ ಮಾಡುವುದು ಹಿತಕರವಲ್ಲೆಂದು' ಹೇಳಿದನು. ಅದಕ್ಕೆ ಜಗರಾಯನು - ಸೇನಾಪತೀ, ನೀನು ಹೇಳುವುದೆಲ್ಲ ಸರಿ; ಆದರೆ ಈ ಕಲಿಯುಗದಲ್ಲಿ ಕಿವಿಯೊಳಗೆ ತುಲಸಿಯ ಪತ್ರವನ್ನಿಟ್ಟುಕೊಂಡರೆ, ಯಾವ ಕಾರ್ಯವೂ ಆಗುವುದಿಲ್ಲ. ರಾಜಕಾರ್ಯದಲ್ಲಿ ಮೋಸವೂ ಅನ್ಯಾಯದ ಕೊಲೆಯೂ ಬೇಕೇ ಬೇಕು. ಅರ್ಜುನನು ಯುದ್ಧದಲ್ಲಿ ಎದುರಾದ ಗುರು-ಹಿರಿಯರನ್ನೂ ಬಂಧು-ಬಳಗದವರನ್ನು ಕಟುಕನಂತೆ ಸಂಹರಿಸಿ ರಾಜ್ಯವನ್ನು ಗಳಿಸಲಿಲ್ಲವೆ? ಭೀಷ್ಮನನ್ನು ಸೋಲಿಸುವಾಗ ಅರ್ಜುನನು ಶಿಖಂಡಿಯನ್ನು ಮುಂದೆ ಮಾಡಿದನಲ್ಲ? ಆಗ ಅರ್ಜುನನ ಕ್ಷಾತ್ರಧರ್ಮವು ಎಲ್ಲಿ ಹೋಗಿತ್ತು? ದ್ರೋಣಾಚಾರ್ಯರ ಭಯಂಕರವಾದ ಯುದ್ಧ ವ್ಯಾಪಾರವನ್ನು ನಿಲ್ಲಿಸುವುದಕ್ಕೆ ಧರ್ಮರಾಜನು 'ಅಶ್ವತ್ಥಾಮನು ಸತ್ತನು' ಎಂದು ಸುಳ್ಳು ಆಡಿದನಲ್ಲ? ಆಗ ಧರ್ಮರಾಜನ ಸಾಧುವೃತ್ತಿಯು ಎಲ್ಲಿ ಅಡಗಿತ್ತು? ಪಾಂಡವರಿಗೆ ಜಯವಾಗಬೇಕೆಂದು ಶ್ರೀಕೃಷ್ಣನು ಕರ್ಣ-ದುರ್ಯೋಧನರನ್ನು ಅನ್ಯಾಯದಿಂದ ವಂಚಿಸಿದ್ದನ್ನು

ಅರಿಯೆಯಾ? ಮೊದಲು ರಾಜಕಾರಣವೇ ಕುಟಿಲನೀತಿಯುಳ್ಳದ್ದು. ಅದರಲ್ಲಿ ಕಲಿಯುಗದೊಳಗಂತೂ ಅದು ಅನೀತಿಯ ಪರಮಾವಧಿಯನ್ನು ಒಳಗೊಂಡಿರುತ್ತದೆಂದು ಹೇಳಬೇಕಾಗುವುದು! ಕಲಿಯುಗದಲ್ಲಿ ರಾಜ್ಯವನ್ನು ಸಂಪಾದಿಸುವವನು, ಆಪ್ತೇಷ್ಟರ, ಅದೇಕೆ? ಪ್ರತ್ಯಕ್ಷ ತಾಯಿ-ತಂದೆಗಳ, ಹಾಗೂ ಹೊಟ್ಟೆಯ ಮಕ್ಕಳ ಹೆಣಗಳನ್ನು ತುಳಿಯುತ್ತ ರಕ್ತದ ಪ್ರವಾಹಗಳನ್ನು ದಾಟುತ್ತ, ಗುರು-ಹಿರಿಯರಿಗೂ, ಆಪ್ತೇಷ್ಟರಿಗೂ ಕೊಟ್ಟ ವಚನಗಳನ್ನು ಆಕ್ರಮಿಸುತ್ತ, ಸತ್ಯ, ನ್ಯಾಯ-ನೀತಿಗಳನ್ನು ಬದಿಗೊತ್ತಿ, ತನ್ನ ದುಷ್ಕರ್ಮದ ಯೋಗದಿಂದುಂಟಾದ ಪಾಪರಾಶಿಯ ಮೊಟ್ಟೆಯನ್ನು ಹೊತ್ತುಕೊಂಡು, ಹಿತಾಹಿತದ ಪ್ರಜ್ಞೆಯಿಲ್ಲದೆ ರತ್ನಖಚಿತ ಸಿಂಹಾಸನವೇರುವ ಪ್ರಸಂಗ ಬಂದರೂ ಹಿಂಜರಿಯಬಾರದು. ಅಂತೆಯೇ ಕಲಿಯುಗದಲ್ಲಿ ಪೃಥ್ವಿಯು ಬಲಿಷ್ಠರದೆಂಬ ಮಾತು ಸಿದ್ಧವಾಗಿರುತ್ತದೆ. ಬಲಿಷ್ಠನಾದವನು ದುರ್ಬಲರನ್ನು ನಾಶಗೊಳಿಸಿಯೇ ಅರಸೊತ್ತಿಗೆಯನ್ನು ಸಂಪಾದಿಸಬೇಕಾಗುತ್ತದೆ; ಆದ್ದರಿಂದ-ಸೇನಾಪತೀ, ರಾಜಕುಟುಂಬದ ಕೊಲೆಗೆ ಈಗ ನೀನು ಆಡ್ಡಾಗಬೇಡ, ಎಲೈ ಚಿನ್ನ ಓಬಲಾ, ನಡಿ ಬೇಗನೆ; ಯಾವಾಗಲಾದರೂ ಮಾಡಬೇಕಾಗಿದ್ದ ಕೆಲಸವನ್ನು ಒಮ್ಮೆ ತಟ್ಟನೆ ಮಾಡಿಬಿಡು! ಆದರೆ ಸೇನಾಪತಿಯು ಹೇಳುವನಾದ್ದರಿಂದ ಇಂದಿನ ಕೆಲಸ ನಾಳೆ ಮುಂಜಾನೆಗೆ ಹಾಕು.''

ಮರುದಿನ ಬೆಳಗಾಯಿತು. ರಂಗರಾಯನು ತನ್ನ ದುರವಸ್ಥೆಯನ್ನು ಕುರಿತು ಚಿಂತಿಸುತ್ತ ಯಾವ ಪಾಪವನ್ನೂ ಅರಿಯದೆ ಸೆರೆಮನೆಯಲ್ಲಿ ಒಂದು ಚಾಪೆಯ ಮೇಲೆ ಕುಳಿತಿದ್ದನು! ತಾಸು ಹೊತ್ತು ಏರಿದ್ದರೂ ಆತನೂ ಕುಳಿತಿದ್ದ ಸ್ಥಳದ ಕಸ ತೆಗೆದಿದ್ದಿಲ್ಲ. ಅರಸನಿಂದ ಸ್ವಲ್ಪ ಅಂತರದ ಮೇಲೆ ರಾಣಿಯೂ ಕಸದಲ್ಲಿಯೇ ನೆಲದ ಮೇಲೆ ಕುಳಿತಿದ್ದಳು. ಹಿರಿಯ ಮಗನಾದ ವೀರನರಸಿಂಗನು ತಾಯಿಯ ಬಳಿಯಲ್ಲಿ ಕುಳಿತು ಮೆಲ್ಲಗೆ ಏನೋ ಮಾತಾಡುತ್ತಿದ್ದನು. ಅರಸನ ನಡುವಿನ ಮಗಳಾದ ಮುದ್ದು ರಂಗಮ್ಮನೂ, ಹಿರಿಯ ಮಗನಾದ ದೇವರಾಯನೂ ಅರಸನ ಚಿಕ್ಕ ಮಗುವಾದ ನಾಗಲಾಂಬಿಕೆಯನ್ನು ಆಡಿಸುತ್ತ ಅವರೆಲ್ಲರ ನಡುವೆ ಕುಳಿತಿದ್ದರು. ನಿನ್ನೆ ಒದಗಿದ ಭಯಂಕರ ಪ್ರಸಂಗದ ಸ್ಮರಣದಿಂದ ನಾಗಲಾಂಬಿಕೆಯ ಹೊರತು ಉಳಿದವರಿಗೆ ರಾತ್ರಿ ನಿದ್ರೆ ಬಂದಿದ್ದಿಲ್ಲ. ಹೆಚ್ಚಿದ ಚಿಂತೆಯಿಂದ ಅವರಿಗೆ ಯಾವುದೂ ಬೇಡಾಗಿತ್ತು; ಆದರೆ ಚಪಲೆಯಾದ ನಮ್ಮ ನಾಗಲಾಂಬಿಕೆಯು ಅಲ್ಪ ಕಾಲವೇ ಆಗಲೊಲ್ಲದೇಕೆ, ಆ ರಾಜಕುಟುಂಬದ ಚಿಂತೆಯನ್ನು ದೂರಮಾಡಿ ಆನಂದವನ್ನುಂಟು ಮಾಡಿದಳು. ಆ ಕೂಸಿಗೆ ಅದೇ ಎರಡು ತುಂಬಿ ಮೂರರಲ್ಲಿ ಬಿದ್ದದರಿಂದ ನಗುವಾಗ ಕಾಣುವ ಆ

ಕೂಸಿನ ಸುಂದರವಾದ ಮೊಳಕೆಯ ಹಲ್ಲುಗಳೂ, ಕಿವಿಗೆ ಇಂಪಾಗಿ ತೋರುವ ಅದರ ಅಸಂಬದ್ಧವಾದ ಮುದ್ದು ಮಾತುಗಳೂ, ಸುಳಿದಾಡುವ ಮುಂಗುರುಳುಗಳಿಂದ ಸುಮನೋಹರವಾಗಿ ಒಪ್ಪುವ ಅದರ ಸುಂದರ ಮುಖವೂ ಆ ರಾಜಕುಟುಂಬವನ್ನು ಸಂತೋಷಪಡಿಸಿದ್ದವು. ಆ ಚಿಕ್ಕ ಮಗುವು ಥಿಗ್ಗನೆ ಎದ್ದು ಅಕ್ಕನ ಬಳಿಯಿಂದ ತಾಯಿಯ ಬಳಿಗೂ, ತಾಯಿಯ ಬಳಿಯಿಂದ ತಂದೆಯ ಬಳಿಗೂ ತಂದೆಯ ಬಳಿಯಿಂದ ಅಣ್ಣನ ಬಳಿಗೂ ಓಡುತ್ತ ಹೋಗಿ ಅವರನ್ನು ಅಪ್ಪಿಕೊಳ್ಳುವಾಗ, ಅವರ ಚಿಂತೆಯೆಲ್ಲ ನಷ್ಟವಾಗಿ ರೋಮಾಂಚನಗಳೆದ್ದು, ಕ್ಷಣಮಾತ್ರ ಅವರು ಸ್ವರ್ಗ ಸುಖಾನುಭವದಿಂದ ಮತ್ತರಾದರು! ಇಂಥ ಆಪ್ಯಾಲಿಂಗನ ಸುಖವನ್ನು ಪಡೆದ ತಾಯಿ-ತಂದೆಗಳೇ ಧನ್ಯರು! ಅಪತ್ಯವು, ಸಂಸಾರತಾಪವನ್ನು ಶಾಂತಗೊಳಿಸುವ ಶೀತಲ ಜಲವೂ, ಉದ್ಯೋಗಾತಿಶಯದಿಂದ ಶಾಂತವಾದ ಮನಸ್ಸನ್ನು ಹುರುಪುಗೊಳಿಸುವ ಉತ್ತೇಜಕ ಪೇಯವೂ, ದಂಪತಿಗಳ ಕಲಹವನ್ನು ಕ್ಷಣದಲ್ಲಿ ಅಳುಕಿಸಿ, ಅವರನ್ನು ಏಕಜೀವವಾಗುವಂತೆ ಗಟ್ಟಿಯಾಗಿ ಕಟ್ಟುವ ಪ್ರೇಮರಜ್ಜುವೂ ಆಗಿರುವುದು. ಪ್ರಿಯ ವಾಚಕರೇ ಅಂತೇ, ಸಾಂಸಾರಿಕ ಸುಖರಾಶಿಗೆ ಅಪತ್ಯಪ್ರಾಪ್ತಿಯು ಶಿಖರಪ್ರಾಯವಾಗಿರುವುದೆಂದು ಹೇಳುವುದುಂಟು! ಈ ಜಗತ್ತಿನಲ್ಲಿ ಎಷ್ಟೋ ಜನರ ಪರ್ವತಪ್ರಾಯವಾದ ಸಾಂಸಾರಿಕ ಸುಖ ರಾಶಿಗಳು, ಈ ಶಿಖರವಿಲ್ಲದಿದ್ದರಿಂದ ಭಣಗುಟ್ಟಿ ಔದಾಸೀನ್ಯವನ್ನು ತೋರ್ಪಡಿಸುವುವು! ನಮ್ಮ ರಂಗರಾಯನ ಸಾಂಸಾರಿಕ ಸುಖರಾಶಿಯೆಲ್ಲ ಅಸ್ತವಾಗಿ ಹೋಗಿದ್ದರೂ, ಅದರ ಸುಂದರ ಕಳಸವನ್ನು ನೋಡಿ ಆ ಕುಟುಂಬಕ್ಕೆ ಆಗಲೊಲ್ಲವೇಕೆ, ಮೇಲೆ ಹೇಳಿದಂತೆ ಸ್ವರ್ಗಸುಖವು ಪ್ರಾಪ್ತವಾಗಿತ್ತು.

ಈ ಮೇರೆಗೆ ರಾಜಕುಟುಂಬವು ನಾಗಲಾಂಬಿಕೆಯ ಬಾಲಲೀಲೆಗಳಿಂದ ಆನಂದ ಪರವಶವಾಗಿರಲು, ಆ ಕೂಸು ಆನಂದಾತಿಶಯದಿಂದ ಎದ್ದು ನಿಂತು ಅಟ್ಟಹಾಸದೊಡನೆ ಕುಣಿಯಹತ್ತಿತು. ರಾಣಿಯು ಕೂಸಿನ ಈ ಮನೋಹರ ಕುಣಿತವನ್ನು ನೋಡುವಾಗ ಆಕೆಯ ಮನಸ್ಸಿನಲ್ಲಿ ಕೂಸಿನ ಕಾಲೊಳಗೆ ಒಂದಾದರೂ ಒಡವೆಯಿಲ್ಲೆಂಬ ಅಲ್ಪವಾದ ದುಃಖವು ಹುಟ್ಟಲು, ಆ ಅಲ್ಪ ದುಃಖವೇ ದುರ್ದೈವದಿಂದ ಪರ್ವತಾಕಾರವನ್ನು ಧರಿಸಿ ನಿಂತಿತು. ಖಡ್ಗಪಾಣಿಯಾದ ಚಿನ್ನ ಓಬಲನು ಅವರೆದುರಿಗೆ ನಿಂತುಕೊಂಡನು! ಅಕಸ್ಮಾತ್ತಾಗಿ ರಾಹುವು ನುಂಗುವುದರಿಂದ ಚಂದ್ರನು ಕಾಣದಂತಾಗಿ ಲೋಕದ ಆನಂದವು ಅಸ್ತವಾಗುವಂತೆ, ಚಿನ್ನ ಓಬಲನು ಬಂದದ್ದರಿಂದ ನಾಗಲಾಂಬಿಕೆಯು ಚಟ್ಟನೆ ಚೀರಿ ಓಡಿಹೋಗಿ ತಾಯಿಯನ್ನು ಅಪ್ಪಿಕೊಳ್ಳಲು, ಆ ರಾಜಕುಟುಂಬದ ಆನಂದವು ಅಸ್ತವಾಯಿತು! ರಾಜಪತ್ನಿಯು

ನಡುಗುತ್ತಾ ತನ್ನ ಮಕ್ಕಳನ್ನು ಕರಕೊಂಡು ಒಳಗೆ ಹೋದಳು. ರಂಗರಾಯನು ಗಾಬರಿಯಾಗಿ ಚಿನ್ನ ಓಬಲನಿಗೆ-'ವೀರನೇ, ಇದೇನು? ಅಕಾಲದಲ್ಲಿ ನಿನ್ನ ಬರುವಿಕೆಯು? ಈಗ ಹಿರಿದ ಕತ್ತಿಯೇಕೆ? ನಮ್ಮಿಂದ ಹಲವು ತೊಂದರೆಗಳಾಗುತ್ತವೆಂದು ತಿಳಿದು, ನೀನು ನಮ್ಮನ್ನು ಸಂಹರಿಸಬೇಕೆಂದು ಬಂದಿದ್ದರೆ, ಓಬಲರಾಯ, ನಿಶ್ಚಯವಾಗಿ ಹೇಳುತ್ತೇನೆ, ನಾನು ಯಾವ ಪಾಪವನ್ನೂ ಅರಿತವನಲ್ಲ; ಸುಮ್ಮನೆ ನಮ್ಮನ್ನು ಸಂಹರಿಸಬೇಡ ಕಂಡೆಯಾ! ದಯಮಾಡಿ ಕತ್ತಿಯನ್ನು ಒರೆಗಾಣಿಸಿ, ಬಂದ ಕಾರಣವನ್ನು ಸಮಾಧಾನದಿಂದ ಹೇಳು' ಎನ್ನಲು, ಕ್ರೂರನಾದ ಚಿನ್ನ ಓಬಲನು- 'ರಂಗರಾಯಾ, ನಿನ್ನ ಸಂಗಡ ನಾನು ಮಾತಾಡಲು ಇಚ್ಛಿಸುವುದಿಲ್ಲ. ಸಕುಟುಂಬವಾಗಿ ನಿನ್ನನ್ನು ಸಂಹರಿಸಬೇಕೆಂದು ರಾಜಾಜ್ಞೆಯಾಗಿದೆ. ಬೇಗನೆ ನೀನು ಆತ್ಮಹತ್ಯೆ ಮಾಡಿಕೋ; ಇಲ್ಲದಿದ್ದರೆ, ನಾನೇ ನಿಮ್ಮನ್ನು ಕೈಮುಟ್ಟಿ ಕೊಲ್ಲಬೇಕಾಗುವುದು' ಎಂದು ಹೇಳಿದನು. ಓಬಲನ ಈ ಕಠೋರ ಭಾಷಣದಿಂದ ರಂಗರಾಯನ ಎದೆಗೆ ವಜ್ರಾಘಾತವಾದಂತಾಗಿ ಆತನು ನೆಲಕ್ಕೆ ಕುಸಿದು ಬಿದ್ದನು! ಆತನು ವಿನಯದಿಂದ ಚಿನ್ನ ಓಬಲನಿಗೆ, 'ಓಬಲಾಯ, ನನಗೆ ಅರಸೊತ್ತಿಗೆಯು ಸರ್ವಥಾ ಬೇಡ. ನನ್ನ ಮಕ್ಕಳಿಗೂ ಬೇಡ! ನಾವು ಎಲ್ಲಿಯಾದರೂ ಬದುಕಿರುತ್ತೇವೆ. ಮೊದಲೇ ಈ ಕೆಟ್ಟ ಪಟ್ಟಕ್ಕೆ ಹೇಸಿಕೊಂಡಿದ್ದ ನಾನು, ಈ ಸೌಭಾಗ್ಯವನ್ನುಂಡ ಬಳಿಕ ತಿರುಗಿ ಪಟ್ಟವನ್ನು ಬಯಸಬಹುದೇ, ನೀನೇ ಹೇಳು! ಸ್ವಂತ ಪರಾಕ್ರಮದಿಂದ ಅರಸುತನವನ್ನು ಪಡೆದ ತೇಜಸ್ವಿಗಳಿಗೆ ಅರಸೊತ್ತಿಗೆಯು ದಕ್ಕಿದರೆ ದಕ್ಕಬೇಕಲ್ಲದೆ, ನಮ್ಮಂತಹ ಅನಾಮ ಹೇಡಿಗಳಿಗೆ ಅದನ್ನು ಜುಲುಮೆಯಿಂದ ಕೊರಳಲ್ಲಿ ಕಟ್ಟಿದರೆ ಹ್ಯಾಗೆ ದಕ್ಕೀತು! ಇಗೋ, ನಾನು ನಿನಗೆ ಶರಣುಹೊಕ್ಕಿದ್ದೇನೆ, ಹ್ಯಾಗಾದರೂ ಮಾಡಿ ನಿಮ್ಮ ಅಣ್ಣನಾದ ಜಗರಾಯನಿಗೆ ಏನಾದರೂ ಹೇಳಿ ನಮಗಿಷ್ಟು ಜೀವದಾನವನ್ನು ಕೊಡಿಸು' ಎಂದು ಬೇಡಿಕೊಳ್ಳಲು, ಓಬಲನು, 'ಛೀ, ನೃಪಾಧಮನೇ, ಹೆಂಗಸಿನಂತೆ ಹೀಗೆ ಬೇಡಿಕೊಳ್ಳುವುದಕ್ಕೆ ನಿನಗೆ ನಾಚಿಕೆ ಬರುವುದಿಲ್ಲವೇ? ನಿನ್ನಂಥ ಅಧಮನು ಬದುಕಿ ಇದ್ದು ಕ್ಷತ್ರಿಯ ಕುಲಕ್ಕೆ- ಕಲಂಕವನ್ನುಂಟುಮಾಡುವುದಕ್ಕಿಂತ ಆತ್ಮಹತ್ಯೆ ಮಾಡಿಕೊಳ್ಳುವುದು ಯೋಗ್ಯವು!' ಎಂದನು.

ದುಷ್ಟನ ಈ ಮಾತುಗಳನ್ನು ಕೇಳಿ ವೀರನರಸಿಂಹನು ತಂದೆಗೆ- 'ತಾತಾ, ಈ ಅಧಮನಿಗೆ ಪ್ರಾರ್ಥಿಸುವಿರೇಕೆ? ನನ್ನ ಸಲುವಾಗಿ ನೀವು ವ್ಯಸನಪಡುವ ಕಾರಣವಿಲ್ಲ. ನನ್ನೊಡನೆ ದ್ವಂದ್ವಯುದ್ಧ ಮಾಡಲಿಕ್ಕೆ ಧೈರ್ಯವಿದ್ದರೆ, ಈ ಚಿನ್ನ ಓಬಲನು ಬರಲಿ; ಅದಕ್ಕೆ ಹೇಡಿತನದಿಂದ ಒಪ್ಪಿಕೊಳ್ಳದೆ ಪರಾಧೀನರೂ, ಶಸ್ತ್ರಹೀನರೂ ಆದ ನಮಗೆ

ಆತ್ಮಹತ್ಯವನ್ನೇ ಮಾಡಿಕೊಳ್ಳಲು ಒತ್ತಾಯ ಮಾಡಿದರೆ, ನಾನು ನಿರ್ಭಯದಿಂದ ಆತ್ಮಹತ್ಯೆ ಮಾಡಿಕೊಳ್ಳಲಿಕ್ಕೆ ಸಿದ್ಧನಿದ್ದೇನೆ. ಹುಟ್ಟಿದ ಪ್ರಾಣಿಗೆ ಮರಣವು ಸಿದ್ಧವಾದದ್ದು. ಇಷ್ಟು ಹೊತ್ತಿಗೆ ಈ ವಿಜಯನಗರದ ಸಿಂಹಾಸನದ ಕಾಲದಲ್ಲಿ ಎಷ್ಟೋ ರಾಜಪುರುಷರ ಕೊಲೆಯಾಗಿರುವುದಲ್ಲದೆ ಲಕ್ಷಾಂತರ ದಂಡಾಳುಗಳ ನಾಶವೂ, ನಿರಪರಾಧಿಗಳಾದ ಅನಂತ ಪ್ರಜೆಗಳ ನಾಶವೂ ಆಗಿರುವುದು. ಅಷ್ಟು ದೂರವೇಕೆ, ನಮ್ಮ ಕಾಲದಲ್ಲಿ ನಿನ್ನೆಯೇ ಸಾವಿರಾರು ಜನರ ಕೊಲೆಯಾಗಿರುವುದು; ಅಂದ ಬಳಿಕ ನಮ್ಮ ಪಾಡೇನು? ಈ ನೀಚನಿಗೆ ಹೇಳಿಕೊಳ್ಳುವುದೇಕೆ? ಎಲಾ ನೀಚಾ, ಚಿನ್ನ ಓಬಲಾ, ಮರಣಕ್ಕೆ ಸಿದ್ಧರಾಗಿ ನಿಂತವರಿಗೆ ನೀನು ಕಣ್ಣು ಕಿಸಿದು ಮಾಡುವುದೇನು? ಇಗೋ ನೋಡು, ಮರಣಕ್ಕೆ ಸಿದ್ಧನಾಗಿದ್ದೇನೆ, ಸಂಹರಿಸುವ ಹಾಗಿದ್ದರೆ ಸಂಹರಿಸು ಬಾ', ಎಂದು ರಾಜಪುತ್ರನು ಓಬಲನ ಮುಂದೆ ಎದೆ ಹಾಯಿಸಿ ನಿಂತುಕೊಳ್ಳಲು, ರಂಗರಾಯನು-'ತಮ್ಮಾ, ನಿಲ್ಲು, ಪುತ್ರಶೋಕದ ಅನುಭವವನ್ನು ಈ ದುರ್ದೈವಿಗೆ ಉಂಟುಮಾಡಬೇಡ. ಎಲಾ ಓಬಲ, ತಾ ಖಡ್ಗವನ್ನು' ಎಂದು ಕೈ ಚಾಚಲು, ಓಬಲನು ಖಡ್ಗವನ್ನು ಕೊಟ್ಟನು. ಅಷ್ಟರಲ್ಲಿ ರಾಜಪತ್ನಿಯು ಹೊರಗೆ ಬಂದು ಪತಿಯ ಚರಣಕ್ಕೆರಗಿ- 'ಪ್ರಾಣಪ್ರಿಯರೇ ನನಗೆ ವೈಧವ್ಯದ ಕಲಂಕವು ಹತ್ತದಂತೆ ಅನುಗ್ರಹಿಸಿರಿ! ತಂಗೀ ಕುಪ್ಪಮ್ಮಾ, ಕರೆದುಕೊಳ್ಳವ್ವಾ, ಈ ನಾಗಲಾಂಬಿಕೆಯನ್ನು. ನೋಡು, ಪತಿಯ ಚರಣಕಮಲಕ್ಕೆ ನನ್ನ ಶಿರಃಕಮಲವನ್ನು ಏರಿಸಿ ಧನ್ಯಳಾಗಬೇಕೆನ್ನುವ ಅವಸರದಲ್ಲಿ, ಈ ಕಂದಮ್ಮನು ಹ್ಯಾಗೆ ನನ್ನನ್ನು ಬಿಗಿಯಾಗಿ ಅಪ್ಪಿಕೊಂಡಿದ್ದಾಳೆ! ಹಾಯ್ ಹಾಯ್! ನಾಗಲಾಂಬಿಕೇ, ಇಂಥಾ ಅನರ್ಥವು ಒದಗತಕ್ಕದ್ದಿರುವುದರಿಂದಲೇ ಇಂದು ನೀನು, ಎಂದೂ ತೋರಿಸದ ಬಾಲಲೀಲೆಯಿಂದ ನಮ್ಮೆಲ್ಲರಿಗೆ ವಿಚಿತ್ರವಾದ ಆನಂದವನ್ನು ಉಂಟುಮಾಡಿದೆಯಲ್ಲವೇ? ಕಂದಾ, ಹೋಗಮ್ಮಾ ಅತ್ತಿಗೆಯ ಹತ್ತಿರ', ಎಂದು ಜುಲುಮೆಯಿಂದ ಸೊಸೆಯ ಕೈಯಲ್ಲಿ ಕೊಡಹೋಗಲು, ನಾಗಲಾಂಬಿಕೆಯು ತಾಯಿಯನ್ನು ಗಟ್ಟಿಯಾಗಿ ಅವಚಿಕೊಂಡು ದೊಡ್ಡ ದನಿಯಿಂದ ಅಳಹತ್ತಿದಳು! ಅತ್ತ ಮುದ್ದುರಂಗಮ್ಮನು ಗಾಬರಿಯಾಗಿ, ಬೆದರಿದ ಚಿಗರೆಯ ಮರಿಯಂತೆ ತನ್ನ ದೊಡ್ಡ ಕಣ್ಣುಗಳನ್ನು ತಿರುಗಿಸುತ್ತ-ಅವ್ವನ ಹತ್ತಿರ ಹೋಗಲೋ, ಅಪ್ಪನ ಹತ್ತಿರ ಹೋಗಲೋ, ಅಣ್ಣನ ಹತ್ತಿರ ಹೋಗಲೋ, ಅತ್ತಿಗೆಯ ಹತ್ತಿರ ಹೋಗಲೋ ಎಂದು ಯೋಚಿಸುತ್ತಿದ್ದಳು. ನೋಡ ನೋಡುತ್ತಾ ಆ ಬಾಲೆಯ ಕಣ್ಣುಗಳು ನೀರಿನಿಂದ ತುಂಬಲು, ಆಕೆಯು ಅಂಜಿ ಓಡುತ್ತಾ ತಂದೆಯನ್ನು ಗಟ್ಟಿಯಾಗಿ ಅಪ್ಪಿಕೊಂಡು ಬಿಕ್ಕಿ ಬಿಕ್ಕಿ ಅಳಹತ್ತಿದಳು! ದೇವರಾಯನು ಅಳುತ್ತಾ ಅಣ್ಣನ ಕೊರಳಿಗೆ ಬಿದ್ದನು. ಹೀಗೆ

ರಾಜನೂ, ರಾಜಪತ್ನಿಯೂ ರಾಜಪುತ್ರನೂ ಅಳುತ್ತಿರುವ ಒಂದೊಂದು ಕೂಸುಗಳನ್ನು ಎತ್ತಿಕೊಂಡು ಚುಂಬಿಸಿ ಕಣ್ಣೀರು ಸುರಿಸಹತ್ತಿದರು. ಅದನ್ನು ನೋಡಿ ಕುಪ್ಪಮ್ಮನ ಕಣ್ಣೊಳಗಿಂದ ಬಳಬಳ ನೀರು ಸುರಿದವು! ಅಷ್ಟರಲ್ಲಿ ರಂಗರಾಯನು ಎಚ್ಚೆತ್ತು, 'ಈ ನೀಚ ಓಬಲನ ಮುಂದೆ ಹೀಗೆ ಅಳುತ್ತ ನಿಲ್ಲುವುದು ಯೋಗ್ಯವಲ್ಲೆಂದು ತಿಳಿದು, ಮಗನ ಕೈಯಲ್ಲಿ ಮುದ್ದುರಂಗಮ್ಮನನ್ನು ಜುಲುಮೆಯಿಂದ ಕೊಟ್ಟನು. ಅತ್ತ ರಾಜಪತ್ನಿಯು ಪತಿಯ ಆಜ್ಞೆಯಂತೆ ನಾಗಲಾಂಬಿಕೆಯನ್ನು ಸೊಸೆಯ ಕೈಯಲ್ಲಿ ಕೊಟ್ಟು, ಕೈ ಜೋಡಿಸಿಕೊಂಡು ಪತಿಯ ಮುಂದೆ ನಿಂತುಕೊಂಡಳು. ಆಗ ರಂಗರಾಯನು- 'ಪ್ರಿಯೆ, ಅಗ್ನಿಸಾಕ್ಷಿಯಿಂದ ನನ್ನ ಕೈಯನ್ನು ಹಿಡಿದ ನೀನು, ಸತೀ ಧರ್ಮವನ್ನು ತಪ್ಪದೇ, ಅರ್ಧಾಂಗಿಯೆಂಬ ಹೆಸರಿಗೆ ಒಪ್ಪುವಂತೆ ನಡೆದು ನನಗೆ ಪರಮ ಸೌಖ್ಯವನ್ನು ಕೊಟ್ಟೆ. ರಾಜಪತ್ನಿಯೆನಿಸಿದ ನೀನು, ನನ್ನ ಸಹವಾಸದಿಂದ ಕಡೆತನಕ ಕಷ್ಟವನ್ನೇ ಅನುಭವಿಸಬೇಕಾಯಿತಲ್ಲದೆ, ಈಗ ನನ್ನ ಕೈಯಲ್ಲಿರುವ ಈ ಖಡ್ಗಕ್ಕೆ ತುತ್ತಾಗಬೇಕಾಗಿದೆ. ರಂಗರಾಯಾ, ಏನು ನಿನ್ನ ದುರ್ದೈವವಿದು! ಎಂಥ ಹತಭಾಗ್ಯನು ನೀನು!! ಸುಖಪಟ್ಟೇನೆಂಬ ಆಶೆಯಿಂದ, ಹುಟ್ಟಿದ ಮನೆಯನ್ನು ಬಿಟ್ಟು ತನುಮನಧನಗಳಿಂದ ನಿನ್ನನ್ನು ಆಶ್ರಯಿಸಿರುವ ಈ ಸತೀಮಣಿಯನ್ನು, ಕಟುಕನು ತಾನು ಸಾಕಿದ ಗಿಳಿಯ ಗೋಣು ಮುರಿಯುವಂತೆ ಖಡ್ಗದಿಂದ ತುಂಡರಿಸುವೆಯಾ! ಹಾ! ಪ್ರಿಯೆ, ಬಾ ಮುಂದಕ್ಕೆ; ಸ್ಮರಿಸು ದೇವರನ್ನು', ಅನ್ನಲು ರಾಜಪತ್ನಿಯು- 'ಪ್ರಿಯರೇ, ಪ್ರತ್ಯಕ್ಷ ಮೂರ್ತಿಮಂತ ದೇವರು ಕೈಯಲ್ಲಿ ಖಡ್ಗವನ್ನು ಹಿಡಕೊಂಡು ಸ್ವರ್ಗವನ್ನು ಪ್ರವೇಶಿಸು ಬಾ, ಎಂದು ಕರೆಯುತ್ತಾ ಎದುರಿಗೆ ನಿಂತಿರಲು, ಇನ್ನೆಲ್ಲಿಯ ದೇವರನ್ನು ತರಲಿ? ಇಗೊಳ್ಳಿರಿ, ಇವೇ ನನ್ನ ಆರಾಧ್ಯ ದೇವತೆಯ ಚರಣಗಳು! ಈ ಚರಣಕಮಲಗಳು ನನ್ನ ಶಿರಃಕಮಲದಿಂದ ಅಲಂಕೃತವಾಗುವಂತೆ ಮಾಡಿರಿ! ಸತಿಗೆ ಪತಿಯ ಚರಣಗಳು ಕಾಶಿಗಿಂತ ದೊಡ್ಡ ಕ್ಷೇತ್ರವಾಗಿರುವುದರಿಂದ, ಅಲ್ಲಿ ದೇಹವನ್ನು ನೀಗುವ ನಾನು ಪರಮಧನ್ಯಳು. ಪರಮಭಾಗ್ಯವಂತಳು. ಪರಮ ಪುಣ್ಯವತಿಯು' ಎಂದು ನುಡಿದು ಪುನಃ ಪುನಃ ಪತಿಯ ಚರಣಗಳಿಗೆ ಎರಗಿ ನಿಂತುಕೊಳ್ಳಲು, ರಂಗರಾಯನು ಒಂದೇ ಕಡಿತದಿಂದ ಹೆಂಡತಿಯ ಶಿರಸ್ಸನ್ನು ಭೂಮಿಗಿಳಿಸಿದನು.

ತಾಯಿಯ ಈ ಅವಸ್ಥೆಯನ್ನು ನೋಡಿ ಮುದ್ದುರಂಗಮ್ಮನು ಬಿರಿಬಿರಿ ಕಣ್ಣು ಬಿಡುತ್ತಾ, ಅಂಜಿಕೆಯಿಂದ ಗದಗದ ನಡುಗುತ್ತ ತಂದೆಯನ್ನು ನೋಡುತ್ತಿರಲು, ಹೆಂಡತಿಯ ರಕ್ತದಿಂದ ಸ್ನಾನಮಾಡಿದ್ದ ರಂಗರಾಯನು ಆವೇಶಗೊಂಡು ಆಕೆಯನ್ನು ಕೆಳಗಿಳಿಸೆಂದು ಮಗನಿಗೆ ಹೇಳಿದನು, ಆಗ ರಾಜಪುತ್ರನು ಬೋರೆಂದು ಅಳುತ್ತ

ತಂಗಿಯನ್ನು ಜುಲುಮೆಯಿಂದ ಇಳಿಸಿ ಹಿಂದಕ್ಕೆ ಸರಿಯಲು ರಂಗರಾಯನ ಕ್ರೂರವಾದ ಖಡ್ಗವು ''ಅಪ್ಪಾ, ಬೇಡ ಬೇಡ'' ಎಂದು ಕೈ ಮರೆ ಮಾಡಿ ಕೂಗುವ ಆ ಕೂಸಿನ ರುಂಡವನ್ನು ನಿರಾಯಾಸದಿಂದ ನೆಲಕ್ಕೆ ಕೆಡವಿತು!! ಕೂಡಲೇ ದೇವರಾಯನ ರುಂಡವೂ ಅರಸನ ಕೈ ಖಡ್ಗದಿಂದ ನೆಲಕ್ಕೆ ಬಿತ್ತು. ಅರಸನು ಎಷ್ಟು ಆವೇಶಗೊಂಡಿದ್ದರೂ ಎಳೆಮಗುವಾದ ನಾಗಲಾಂಬಿಕೆಯನ್ನು ಕೊಲ್ಲುವುದು ಮಾತ್ರ ಆತನಿಂದಾಗಲಿಲ್ಲ. ಆ ಅಜ್ಞಾನಿಯಾದ ಕೂಸು ತನ್ನ ತಾಯಿಯ, ಹಾಗು ತನ್ನ ಅಕ್ಕನ, ಮತ್ತು ಚಿಕ್ಕ ಅಣ್ಣನ ಕೊಲೆಯನ್ನು ನೋಡಿ ರಾವುಹೊಡೆದು ಏನೂ ತಿಳಿಯದೆ ಕಣ್ಣುಬಿಡುತ್ತ ಅತ್ತಿಗೆಯ ಬಗಲಲ್ಲಿ ಕುಳಿತುಕೊಂಡಿತ್ತು. ರಂಗರಾಯನು ತನ್ನ ಮಗನಿಗೆ 'ನರಸಿಂಗಾ, ಏನು ನೋಡುವೆ? ನಿನ್ನ ಹೆಂಡತಿಯನ್ನು ಸಂಹರಿಸು' ಎಂದು ಆಜ್ಞಾಪಿಸಲು, ಕುಪ್ಪಮ್ಮ ನಾಗಲಾಂಬಿಕೆಯನ್ನು ಕಳಗೆ ರಕ್ತದ ಮಡುವಿನಲ್ಲಿ ಇಳಿಸಿ, ಭಯದಿಂದ ಗಡಗಡನೆ ನಡುಗುತ್ತ, ತನ್ನ ಪತಿಯ ಚರಣಕ್ಕೆರಗಿ ಕೈಜೋಡಿಸಿ ನಿಂತುಕೊಳ್ಳುವಷ್ಟರಲ್ಲಿಯೇ, ನರಸಿಂಗನ ಖಡ್ಗವು, ಆಕೆಯ ರುಂಡವನ್ನು ಮುಂಡದಿಂದ ಬೇರೆ ಮಾಡಿತು! ಈ ಮೇರೆಗೆ ಜಗರಾಯನ ಕಾರಾಗೃಹದ ಕಠಿಣವಾದ ದುಃಖದಿಂದ ರಾಜಪರಿವಾರವು ಮುಕ್ತವಾಗಲು, ಆಗ ರಂಗರಾಯನು ಓಬಲನಿಗೆ- 'ಎಲಾ ದುಷ್ಟ, ಓಬಲಾ, ನಿನ್ನ ಬಯಕೆಯು ಪೂರ್ಣವಾಯಿತೆ? ಈ ಕೂಸಾದ ನಾಗಲಾಂಬಿಕೆಯನ್ನು ಕೊಲ್ಲುವುದು ನನ್ನಿಂದಾಗದ್ದರಿಂದ, ಆಕೆಯನ್ನು ಕ್ರೂರನಾದ ನಿನ್ನ ಪಾಲಿಗೆ ಬಿಟ್ಟಿದ್ದೇನೆ. ಇನ್ನು ನಾನೂ ನನ್ನ ಮಗನೂ ನಿನ್ನೆದುರಿಗೆ ಪ್ರಾಣವನ್ನು ಕೊಡುತ್ತೇವೆ. ನಮ್ಮ ಪ್ರಾಚೀನ ಕರ್ಮದಿಂದ ನಮಗೆ ಈ ದುರ್ದೆಸೆಯು ಪ್ರಾಪ್ತವಾಗಿದ್ದರೂ, ನಮ್ಮ ವಂಶವೆ ವಿಜಯನಗರದ ರಾಯರ ಸಿಂಹಾಸನವೇರುವುದೆಂಬುದನ್ನು ಸೆರಗಿಗೆ ಗಂಟು ಹೊಡೆದು, ನೆನಪಿಟ್ಟುಕೊ. ನಮ್ಮ ಚಿನ್ನವೆಂಕಟನು ಎಚ್ಚಮನಾಯಕನ ಪುಣ್ಯದಿಂದ ಅರಸನಾಗಿ ನಿಮ್ಮ ಶಾಸನ ಮಾಡುವನು' ಎಂದು ಹೇಳಿ ನಾಲ್ಕು ಬೆರಳು ಅಗಲವಾದ ಎರಡು ಕಡೆ ಅಲಗುಳ್ಳ ಒಂದು ಉದ್ದ ಕತ್ತಿಯನ್ನು ತಕ್ಕೊಂಡು, ಅದರ ಮೇಲೆ ಬಿದ್ದು ಪ್ರಾಣವನ್ನು ಕೊಟ್ಟನು. ವೀರ ನರಸಿಂಗನಾದರೂ ತಡಮಾಡದೆ ತಂದೆ ಹಿಡಿದ ಮಾರ್ಗವನ್ನೇ ಹಿಡಿದು ನಡೆದನು. ರಕ್ತ ಮುಃಖಗಿದ ಒಂದು ಕೂಸು ಮಾತ್ರ ಅಂತಕ ಸ್ವರೂಪನಾದ ಓಬಲನ ಎದುರಿಗೆ ಕಣ್ಣು ಬಿಡುತ್ತ ಕುಳಿತಿತ್ತು! ಅದನ್ನು ದಯಾಶೂನ್ಯನಾದ ಓಬಲನು ಎಗ್ಗಿಲ್ಲದೆ ತುಂಡರಿಸಿ, ಅರಸುಮನೆತನದವರಾರೂ ಉಳಿಯದಂತೆ ಮಾಡಿ, ಸೆರೆಮನೆಯಿಂದ ಹೊರಹೊರಟನು. ಪ್ರಿಯ ವಾಚಕರೇ, ಹ್ಯಾಗಿದೆ ಅರಸುತನದ ಸುಖ! ಈ ಅಂತಕನ ಕೋಲಾಹಲದ ಸುದ್ದಿಯು ಕ್ಷಣದಲ್ಲಿ ಚಂದ್ರಗಿರಿಯ ತುಂಬ ಹಬ್ಬಿತು.

ಅನುಬಂಧ ೨

ಗಳಗನಾಥರ ಕೃತಿ ಸಂಪದ

ಹೆಸರು	ಮೂಲ	ವಿಷಯ/ ಸ್ವರೂಪ	ಪ್ರಕಟನ ವರ್ಷ
ಪದ್ಮನಯನಾ	ಸ್ವತಂತ್ರ	ಅದ್ಭುತ ರಮ್ಯ	೧೮೯೮
ಕಮಲಕುಮಾರಿ	ಹ.ನಾ. ಆಪ್ಟೆ (ಗಡ ಆಲಾ...)	ಮರಾಠಾ ಚರಿತ್ರೆ - ಶಿವಾಜಿ	೧೯೧೦
ಮೃಣಾಲಿನೀ (ರಾಣಿ ಮೃಣಾಲಿನೀ)	ಬಂಕಿಮಚಂದ್ರ	ಮಗಧ ರಾಜ್ಯ	೧೯೧೧/೧೯೨೮
ವೈಭವ	ಆಪ್ಟೆ: (ಚಂದ್ರಗುಪ್ತ)	ಚಾಣಕ್ಯ-ಚಂದ್ರಗುಪ್ತರ ಕಥೆ	೧೯೧೨
ಕುಮುದಿನಿ	ಸ್ವತಂತ್ರ	ವಿಜಯನಗರೋತ್ತರ: ಚಂದ್ರಗಿರಿ ಸಂಸ್ಥಾನ	೧೯೧೩
ಈಶ್ವರೀಸೂತ್ರ	ಆಪ್ಟೆ: (ಉಷಃಕಾಲ)	ಶಿವಾಜಿಯ ಕಥಾನಕ	೧೯೧೩
ಕ್ಷಾತ್ರತೇಜ	ಆಪ್ಟೆ: (ರೂಪನಗರಚಿ ರಾಜಕನ್ಯಾ)	ರಜಪೂತ	೧೯೧೪
ಧರ್ಮರಹಸ್ಯ	ಬಾ.ನಾ.ಶಹಾಃ (ಸಾಮ್ರಾಟ್ ಅಶೋಕ)	ಅಶೋಕ ಚಕ್ರವರ್ತಿ	೧೯೧೪
ಸತ್ವಸಾರ	ವಿವಿಧ ಮೂಲಗಳಿಂದ	ರಾಣಾ ಪ್ರತಾಪಸಿಂಹ	೧೯೧೪

ಕನ್ನಡಿಗರ	ಆಪ್ಟೆ: (ವಜ್ರಾಘಾತ)	ವಿಜಯನಗರ:	೧೯೧೬
ಕರ್ಮಕಥೆ		ರಕ್ಕಸತಂಗಡಿಗಿ ಕಾಳಗ	
ತಿಲೋತ್ತಮೆ	ಬಂಗಾಲಿಯಿಂದ: (ನವಾಬನಂದಿನಿ)	ರಜಪೂತ/ಜಗಸಿಂಹ	೧೯೧೭
ಮರಾಠರ ಅಭ್ಯುದಯ	ಆಪ್ಟೆ: (ಸೂರ್ಯೋದಯ)	ಶಿವಾಜಿ/ಅಫಝುಲ್‌ಖಾನ	೧೯೧೮
ಶಿವಪ್ರಭುವಿನ ಪುಣ್ಯ	ಆಪ್ಟೆ: (ಕೇವಳ ಸ್ವರಾಜ್ಯ ಸಾಠೀ)	ಶಿವಾಜಿಯ ಮರಣೋತ್ತರ	೧೯೧೮
ಛತ್ರಪತಿ	ಆಪ್ಟೆ: (ಸೂರ್ಯಗ್ರಹಣ)	ಶಿವಾಜಿಯ ಪಟ್ಟಾಭಿಷೇಕ	೧೯೧೯
ಕುರುಕ್ಷೇತ್ರ	ನಾ.ವಿ. ಬಾಪಟ ಪಾಣಿಪತಚೆ ಮೋಹಿಮ	ಪೇಶ್ವೆ: ಪಾಣಿಪತ ಯುದ್ಧ	೧೯೧೯
ಗೃಹಕಲಹ	ಲ.ನಾ. ಜೋಶಿ (ಅಸ್ತೋದಯ)	ಶಿವಾಜಿ: ಪಟ್ಟಕ್ಕಾಗಿ ಜಗಳ	೧೯೨೧
ಮಾಧವಕರುಣಾವಿಲಾಸ	ಸ್ವತಂತ್ರ	ವಿಜಯನಗರ ರಾಜ್ಯ - ಸ್ಥಾಪನೆ: ಮಾಧವಾಚಾರ್ಯ	೧೯೨೩
ಸಂಸಾರಸುಖ	ಹರಿಸದನ ಮುಖರ್ಜಿ	ರಜಪೂತ	೧೯೨೩
ರಾಣಾ ರಾಜಸಿಂಹ	ಬಂಕಿಮಚಂದ್ರ	ರಜಪೂತ	೧೯೨೮
ಧಾರ್ಮಿಕ ತೇಜ	ಬಂಕಿಮಚಂದ್ರ	ರಜಪೂತ ಛತ್ರಸಾಲ	೧೯೨೮
ಸ್ವರಾಜ್ಯಸುಗಂಧ	ವಿವಿಧ ಮೂಲಗಳಿಂದ	ಶಿವಾಜಿ	೧೯೩೮
ದುರ್ಗದ ಬಿಚ್ಚುಗತ್ತಿ ಭಾ. ೧.	ವಿವಿಧ ಮೂಲಗಳಿಂದ	ಚಿತ್ರದುರ್ಗದ ಪಾಳೆಯಗಾರರು	೧೯೩೮

ಧಾರ್ಮಿಕ - ಪೌರಾಣಿಕ

ನಿರ್ಯಾಣ ಮಹೋತ್ಸವ	ಶೇಷಾಚಲರು	೧೯೧೫
ಸದ್ಗುರು ಪ್ರಭಾವ	ಶೇಷಾಚಲರು/ಆತ್ಮಕಥನ	೧೯೨೮
ಭಾಗವತಾಮೃತ		೧೯೨೨
ಶೈವಸುಧಾರ್ಣವ		೧೯೨೩
ರಾಮಾಯಣಾಮೃತ (ತುಲಸಿದಾಸ)		೧೯೨೩
ಗೀತೆಯ ಶ್ರವಣಾಧಿಕಾರ		೧೯೨೮
ವಿವೇಕಾನಂದರು ವೈದಿಕರಿಗೆ ಯಾರು?		೧೯೨೮
ಮಹಾಭಾರತಾಮೃತ; ಆದಿ ಸಭಾಪರ್ವಗಳು		೧೯೩೧
ರಹಸ್ಯಗಳು-(ಮಹಾಭಾರತದಲ್ಲಿ ಬಂದವುಗಳು)		೧೯೩೩
ಭಗವತಿ ಕಾತ್ಯಾಯಿನಿ		೧೯೧೯
ಕಲಿಕುಠಾರ (ಲೋಕಾಪುರ ಪೀಠಪ್ರಭಾವ) ಭಾಗ-೨		೧೯೩೮
ನಳಚರಿತ್ರೆ		೧೯೩೮

ಶೈಕ್ಷಣಿಕ - ಸಾಮಾಜಿಕ

ಪದಾರ್ಥಸಾರ (೧೮೯೭); ಲಘುನಿಬಂಧ ಸಂಗ್ರಹ ಮತ್ತು ಪತ್ರ ವ್ಯವಹಾರ (೧೮೯೯); ನಿಬಂಧ ಶಿಕ್ಷಣ (೧೯೧೦); ಗಿರಿಜಾ ಕಲ್ಯಾಣಸಾರ (೧೯೧೧); ದಾಂಪತ್ಯ (೧೯೧೨); ಕುಟುಂಬ (೧೯೧೩); ಉತ್ತರರಾಮಚರಿತ್ರಸಾರ (ಸು. ೧೯೧೧); ಕನ್ಯಾಶಿಕ್ಷಣ (ಸು. ೧೯೨೦); ಬ್ರಾಹ್ಮಣ ಪ್ರಾಪ್ತಿಸಾಧನ (೧೯೨೩); ಸುಂದರಲೇಖ ಸಮುಚ್ಚಯ (೧೯೨೮).





ಗಳಗನಾಥರು (೧೮೬೯-೧೯೪೨) ಎಂಬ ನಾಮಧೇಯದಿಂದ ಕಾದಂಬರಿಕಾರರಾಗಿ ಪ್ರಸಿದ್ಧಿ ಪಡೆದ ವೆಂಕಟೇಶ ತಿರಕೋ ಕುಲಕರ್ಣಿ ಹತ್ತೊಂಬತ್ತನೇ ಶತಮಾನದ ಉತ್ತರಾರ್ಧ ಮತ್ತು ಇಪ್ಪತ್ತನೇ ಶತಮಾನದ ಪೂರ್ವಾರ್ಧದಲ್ಲಿ ತಮ್ಮ ಕಾದಂಬರಿಗಳ ಮೂಲಕ ಅಸಂಖ್ಯ ಓದುಗರನ್ನು ಕನ್ನಡದಲ್ಲಿ ಸೃಷ್ಟಿಸಿದರು. ಶೈಕ್ಷಣಿಕ ಸಾಮಾಜಿಕ ಬರಹಗಳಿಗೂ ಹೆಸರಾಗಿದ್ದ ಗಳಗನಾಥರು ಕನ್ನಡದಲ್ಲಿ ಮೊದಲ ಬಾರಿಗೆ ಬಂಗಾಳಿ, ಮರಾಠಿ ಕಾದಂಬರಿಗಳನ್ನು ಪರಿಚಯಿಸಿದರು. ಮುಖ್ಯವಾಗಿ ಆಗಿನ ಕಾಲಕ್ಕೆ ಸ್ವತಃ ಕನ್ನಡಿಗರಲ್ಲಿ ಮನೆಮಾಡಿದ್ದ ಸ್ವಭಾಷೆಯ ಮೇಲಿನ ಅನಾಸ್ಥೆ-ಅನಾದರಗಳನ್ನು ತೊಡೆದುಹಾಕಿ, ಪರಭಾಷಾ ವ್ಯಾಮೋಹವನ್ನು ನೀಗಿಸುವ ಕಾರ್ಯ ಗಳಗನಾಥರ ಕೃತಿಗಳಿಂದಾಯಿತು ಎಂಬುದು ಚರಿತ್ರಾರ್ಹವಾದ ಸಾಧನೆ.

ಗಳಗನಾಥರ ಬಗೆಗಿನ ಈ ಕೃತಿಯನ್ನು ಅತ್ಯಂತ ಸಮರ್ಥವಾಗಿ ನಿರೂಪಿಸಿರುವ ಪ್ರಾಧ್ಯಾಪಕ ಶ್ರೀನಿವಾಸ ಹಾವನೂರ ಸೃಜನಶೀಲ ಲೇಖಕರಾಗಿ, ಸಂಶೋಧಕರಾಗಿ ಹೆಸರಾದವರು. ಮುಂಬೈ, ಮಂಗಳೂರು ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿರುವ ಡಾ. ಹಾವನೂರ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಮತ್ತು ಮರಾಠಿ - ಕನ್ನಡ ಸ್ನೇಹಸೇತುವಾಗಿ ಅನನ್ಯ ಪ್ರತಿಭೆಯಾಗಿ ಹೆಸರು ಪಡೆದಿದ್ದಾರೆ.

Kadambarikara Galaganatharu **Rs. 25/-**

ISBN: 81-260-0680-3